ಸಂಚಯ

ಸಾಂಸ್ಕೃತಿಕ ಪತ್ರಿಕೆ



ಸಂಚಿಕೆ

೪೮

ಸಂಚಯ

ಸಾಂಸ್ಕೃತಿಕ ಪತ್ರಿಕೆ

ತ್ರೈಮಾಸಿಕ

ಸಂಪುಟ : ೧೨

ಸಂಚಿಕೆ : ೨ (೫೯)

ಫೆಬ್ರವರಿ : ೨೦೦೩

ಸಂಪಾದಕ

ಡಿ.ವಿ. ಪ್ರಹ್ಲಾದ್

ಚಂದಾವಿವರ

ಬಿಡಿ ಪ್ರತಿ : ರೂ. ೨೫/-

ವಾರ್ಷಿಕ ಚಂದಾ : ರೂ. ೧೦೦/-

ಎರಡು ವರ್ಷಕ್ಕೆ : ರೂ. ೨೦೦/-

ಐದು ವರ್ಷಕ್ಕೆ : ರೂ. ೫೦೦/-

ಮುಖಪುಟ : ಎಸ್. ನಂಜುಂಡಸ್ವಾಮಿ (1906-1969) ಅವರ ಕಲಾ ಕೃತಿ

ಅಗ್ರಹಾರ ಕೃಷ್ಣಮೂರ್ತಿ, ಎಂ.ಆರ್.ಭಗವತಿ, ಮಂಜುಳಾ, ಋತ ಎಸ್., ಸೂರ್ಯ ಪ್ರಕಾಶ್ ಇವರ ರೇಖಾ ಚಿತ್ರಗಳು

ಸಂಪರ್ಕ ವಿಳಾಸ

ನಂ. ೧೦೦, ೨ನೇ ಮುಖ್ಯರಸ್ತೆ

೬ನೇ ಬ್ಲಾಕ್, ೩ನೇ ಹಂತ, ೩ನೇ ಘಟ್ಟ

ಬನಶಂಕರಿ, ಬೆಂಗಳೂರು - ೫೬೦ ೦೮೫

ಫೋನ್ : ೦೮೦-೬೭೯೧೯೨೫

ವಿನ್ಯಾಸ : ಜಗದ್ಧಾತ್ರೀ ಗ್ರಾಫಿಕ್ಸ್, ☎ : 3323293

ಕಾಲರಾಯನ ಗೇಹ ಈ ದೇಹ. ಕೊನೆಯಲ್ಲ
ಲೋಕ ಎಷ್ಟೋ ಉಂಟು ಇದರ ಆಚೆ
ಕನಸು ವಿರಮಿಸದಿರಲಿ ತುದಿಯ ತಲುಪುವ ತನಕ
ತುದಿಯೆಲ್ಲಿ ಗೊತ್ತಲ್ಲ? ಕ್ಷಿತಿಜದಾಚೆ

– ಚಂದ್ರಶೇಖರ ಕಂಬಾರ



ಈ ಸಂಚಯದ ಲೇಖಕರು

ರವಿಚಂದರ್ ಜಿ. : C/o ಕೋಳಿ ರಮೇಶಣ್ಣನವರ ಮನೆ, ಶಾರದಾನಗರ, ರೇಲ್ವೇಸ್ಟೇಷನ್ ಮುಂಭಾಗ, ತಿಪಟೂರು, ತುಮಕೂರು ಜಿಲ್ಲೆ

ಸಪ್ನಾ ಕಟ್ಟಿ : E1/64, B.V. Bhandari Skyline, Dattanagar, Dighi-15, Pune - 411 015.

ಶಮ, ನಂದಿಬೆಟ್ಟ : ನವಪಲ್ಲವಿ, P.O. ಗರ್ಡಾಡಿ - 574 217 ಬೆಳ್ತಂಗಡಿ ತಾ. ದ.ಕ.

ಸ.ರಾ. ಸುಳಕೂಡೆ : ಶಿವಪ್ರಸಾದ್, 1319 ರಾಮತೀರ್ಥನಗರ, ಬೆಳಗಾವಿ-590 015

ಕೆ.ಆರ್.ಶ್ರೀನಾಥ ರೆಡ್ಡಿ : ಶ್ರೀನಿಲಯ, ಸುಂದರ ಹಾಸ್ಟಲ್ ಹಿಂಭಾಗ, ವಿ.ವಿ. ಪುರಂ, ಗೌರಿಬಿದನೂರು-561 208

ಡಿ.ಎಸ್. ರಾಮಸ್ವಾಮಿ: ಭಾರತೀಯ ಜೀವವಿಮಾ ನಿಗಮ, ಅರಸೀಕೆರೆ-573 103, ಹಾಸನಜಿಲ್ಲೆ

ಫಾಲ್ಗುಣ ಗೌಡ : ಅಚವೆ, ಅಂಕೋಲಾ ಉ.ಕ. - 581 344

ಶಶಿ ಸಂಪಳ್ಳಿ : ಶ್ರೀ ಗೌರೀಶಂಕರ ನಿಲಯ ಐದನೇ ತಿರುವು, ಎ.ಎನ್.ಕೆ ರಸ್ತೆ ವೆಂಕಟೇಶನಗರ, ಶಿವಮೊಗ್ಗ - 577 201

ರಮೇಶ್ ಹೆಚ್.ಆರ್. : ರಂಗಸ್ವಾಮಿ ಆರ್. ವೈರ್‌ಲೆಸ್ ಪೋಲೀಸ್ ಸ್ಟೇಷನ್, ಮೆಜಸ್ಟಿಕ್ ಸರ್ಕಲ್ ಹತ್ತಿರ, ಚಿತ್ರದುರ್ಗ - 577 501

ಕಿರಣ ಹೆಗಡೆ ಮೆಣಸಿ : ಪತ್ರಿಕೋದ್ಯಮ ವಿಭಾಗ, ಎಂ.ಎ. ಪ್ರಥಮ ಕರ್ನಾಟಕ ವಿ ವಿ, ಧಾರವಾಡ - 580 003

ಶಂಕರಯ್ಯ ಆರ್. ಘಂಟಿ : D -17, ಸ್ಟಾಫ್ ಕ್ವಾರ್ಟರ್ಸ್ ಗುಲಬರ್ಗಾ ವಿ.ವಿ., ಗುಲಬರ್ಗಾ - 585 106

ಸಂಧ್ಯಾ ಡಿ. ಹೊನಗುಂಟೀಕರ್ : ಫ್ಲ್ಯಾ.ನಂ. 25, ಸಂಗಮೇಶ್ವರ ನಗರ ಪರವಾಕಾಲನಿ ಗುಲಬರ್ಗಾ - 585 103

ಕನಕರಾಜು ಬಿ. : ಇಂಗ್ಲೀಷ್ ಉಪನ್ಯಾಸಕ, ಕೆ.ಎ.ಎಸ್. ಕಾಲೇಜು, ಬಿಡಿಎ ಕಾಂಪ್ಲೆಕ್ಸ್ ಎದುರು ಆಸ್ಟಿನ್ ಟೌನ್ ಲೇಔಟ್, ಬೆಂಗಳೂರು - 560 047.


ಪ್ರಕಾಶ್ ಜಿ. : TGT in Kannada, JNV Saraipali at P.O. Mahasamund Dist. Chattisghar State, M.P. - 493558

ಸುರೇಶ್ ನಾಗಲಮಡಿಕೆ : ಅಂತಿಮ ಎಂ.ಎ. ಶೇಷಾದ್ರಿಪುರಂ ಕಾಲೇಜು ಕನ್ನಡ, ಸ್ನಾತಕೋತ್ತರ ಕೇಂದ್ರ, ಶೇಷಾದ್ರಿಪುರಂ, ಬೆಂಗಳೂರು - 560 020.

ಆಶಾ ವಿ. : ಅಂತಿಮ ಎಂ.ಎ. ಶೇಷಾದ್ರಿಪುರಂ ಕಾಲೇಜು ಕನ್ನಡ, ಸ್ನಾತಕೋತ್ತರ ಕೇಂದ್ರ, ಶೇಷಾದ್ರಿಪುರಂ, ಬೆಂಗಳೂರು - 560 020.

ಹೊಳೆದದ್ದೆ ತಾರೆ

ಉಳಿದದ್ದು ಆಕಾಶ !



ಈಚೆಗೆ ಶಿವಮೊಗ್ಗ ಸುಬ್ಬಣ್ಣ ಅವರು ಹಾಡಿದ್ದ ಬೇಂದ್ರೆಯವರ ಗೀತೆಯೊಂದು ಕೇಳಿದೆ. (70ರ ದಶಕದಲ್ಲಿ ಎಂ.ಎಸ್.ಐ.ಎಲ್ ಗೀತೆಗಳಿಗಾಗಿ ಹಾಡಿದ್ದು) 'ಯಾರಿಗೂ ಹೇಳೋಣು ಬ್ಯಾಡ' ಎಂಬ ಇಂಪಾದ ಕವಿತೆ ಮತ್ತೆ ಮತ್ತೆ ಕೇಳುವಂತೆ ಕಾಡತೊಡಗಿತು, ಯಾವ ಅಬ್ಬರದ ಹಿನ್ನೆಲೆ ಸಂಗೀತವೂ ಇಲ್ಲದೆ ಒಂದು ಸಿತಾರ್‌ನ ಜೊತೆಗಾರಿಕೆಯಲ್ಲಿ ಮೈಸೂರು ಅನಂತಸ್ವಾಮಿ ಅವರ ಸುಶ್ರಾವ್ಯ ಸಂಗೀತ ಸಂಯೋಜನೆ 'ಹಾರ ಗುದರಿ ಬೆನ್ನ ಏರುವಂತೆ' ಮತ್ತೆ ಮತ್ತೆ ಮಾಡತೊಡಗಿತ್ತು ಏಕಕಾಲಕ್ಕೆ ಒಂದು ಪ್ರಣಯಗೀತೆಯಾಗಿ, ಶಿಶುಗೀತೆಯ ಹಾಗೂ ತೋರುವ ಈ ಕವಿತೆಯ ಮೋಡಿ ಬಹುಕಾಲ ಆವರಿಸಿತ್ತು.

ಬೇಂದ್ರೆಯವರ ಕಾವ್ಯವೆನ್ನುವುದು ಕನ್ನಡದ ಮಣ್ಣು ಪಡೆದ ಮಾತಿನ ರೂಪ. ಅವರ ಅಗಾಧ ಪ್ರತಿಭೆಯ ಶಕ್ತಿಯನ್ನ ವೈವಿಧ್ಯಮಯವಾದ ಅನುಭವಗಳನ್ನ ನಮ್ಮ ಭಾಷೆ ಯಾವ ಬಿಗುವು ಭೀತಿಗಳಲ್ಲದೆ ತನ್ನ ಕಾವ್ಯ ಶರೀರಕ್ಕೆ ಒಗ್ಗಿಸಿಕೊಂಡಿತು. ಅದಕ್ಕೇ ಇರಬೇಕು ಬೇಂದ್ರೆ ಬರೆದದ್ದು ಪಂಡಿತರಿಂದ ಸಾಮಾನ್ಯ ಓದುಗನವರೆಗೂ ಎಲ್ಲರನ್ನೂ ಮತ್ತೆ ಮತ್ತೆ ತನ್ನ ಒಳಕ್ಕೆ ಸೆಳೆದುಕೊಳ್ಳುತ್ತದೆ. ಅದು ಕವಿಯೊಬ್ಬನ ಅಭಿವ್ಯಕ್ತಿಯಾಗದೆ ಭಾಷೆ ಸಂಸ್ಕೃತಿಗಳು ಪಡೆದ ಮಾತಿನ ರೂಪು ಎಂದಾಯ್ತು. ತಮ್ಮ ಇಡೀ ಪ್ರಜ್ಞೆಯನ್ನ ಅನುಭವಕ್ಕೆ ಒಡ್ಡಿಕೊಂಡ ಬೇಂದ್ರೆಗೆ ಕಾವ್ಯಾಭಿವ್ಯಕ್ತಿ ವ್ಯಕ್ತಿತ್ವದ ಮೇಲು ತೋರಿಕೆಯ ಹೇಳಿಕೆಗಳನ್ನ ನೇಯುವ ಕಸುಬಾಗಲಿಲ್ಲ ಅದು ನಭೋವಾಣಿಯಾಯ್ತು. ಭಾವಜನ್ಯವಾದ ಅವರ ಕಾವ್ಯ ನಮ್ಮ ಸಮುದಾಯದ ಮನಸನ್ನ ಮುಟ್ಟಿದಂತೆ ತಟ್ಟಿದಂತೆ ನಂತರದ ಬುದ್ಧಿಜನ್ಯ ಕಾವ್ಯಕ್ಕೆ ಸಾಧ್ಯವಾಗಲಿಲ್ಲ.

ಇದು ಸಮಗ್ರ ಕಾವ್ಯಗಳ ಕಾಲ, ಬೇಂದ್ರೆಯಂಥ ಒಬ್ಬ ಪ್ರಮುಖ ಕವಿಯನ್ನ ಕನ್ನಡದ ಓದುಗರು ಒಟ್ಟಾಗಿಟ್ಟುಕೊಂಡು ಓದಲು ಬಯಸುವುದು ಸಹಜ. ಬೇಂದ್ರೆ ಅವರ ಮಕ್ಕಳ ಮಾಲಿಕತ್ವದಲ್ಲಿ ಅಂಥಾದ್ದೊಂದು ಸಮಗ್ರ ಕಾವ್ಯದ ಪ್ರಕಟಣೆಯ ಕನಸು ಹಾಗೇ ಉಳಿಯಬಹುದು.

ಈ ಸಂಚಿಕೆ ಅನೇಕ ಪ್ರಸ್ತುತ ವಿಚಾರಗಳ ಬಗ್ಗೆ ಪ್ರತಿಕ್ರಿಯಿಸಿದೆ. ಅದೂ ಹೊಸಾ ಬರಹಗಾರರ ಮೂಲಕ ಬರವಣಿಗೆಯ ಆರಂಭದ ನವಿರು ಬೆರಳುಗಳ ಮೂಲಕ. ಸಾಹಿತ್ಯ ಸ್ಪರ್ಧೆಯ ಬಹುಮಾನಿತ ಕವನಗಳು, ಲೇಖನಗಳು, ಕತೆಗಳು ಈ ಸಂಚಯವನ್ನ ಸಂಪನ್ನಗೊಳಿಸಿದೆ. ಅದನ್ನು ಆಗಗೊಟ್ಟ ಲೇಖಕರಿಗೆ ಆಸ್ವಾದಿಸುವ ನಿಮಗೆ, ನಮನ.

ಹೊಸಾ ವರ್ಷದ ಹಾರ್ದಿಕ ಹಾರೈಕೆಗಳು

ನಿಮ್ಮ

ಸಂಪಾದಕ

ಈ ಸಂಚಿಕೆಯಲ್ಲಿ....

ಸಾಹಿತ್ಯ ಸ್ಪರ್ಧೆ ೨೦೦೨ರ ಬಹುಮಾನಿತ ಬರಹಗಳು

ಕವಿತೆಗಳು

ಕಥೆಗಳು

ವಿಶೇಷ ಲೇಖನ



ಪುಸ್ತಕ ಪರಿಚಯ



ಕಂಬಾರರ ಕಾವ್ಯದ ಕೆಲವು ಮುಖಗಳು

■ ಶಮ, ನಂದಿಬೆಟ್ಟ

'ಸಾವಿರ ಮುಳ್ಳಿರಲಿ ಆದರೂ ಅದರಲ್ಲಿ
ಒಂದಾರೆ ಅರಳಿದ ಹೂವಿರಲಿ ಶಿವನೇ'

ಇವು ಕೇವಲ ಕವನದ ಸಾಲುಗಳಲ್ಲ; ಈ ವರ್ಷದ 'ಕಬೀರ್ ಸಮ್ಮಾನ್' ಪ್ರಶಸ್ತಿ ಪುರಸ್ಕೃತ ಚಂದ್ರಶೇಖರ ಕಂಬಾರರ ಮನಸ್ಸಿಗೆ ಹಿಡಿದ ಕೈಗನ್ನಡಿ. ಹೌದು ಅವರು ಇರುವುದೇ ಹಾಗೆ. ಮುಳ್ಳಿನ ಕಂಟಿಗಳ ನಡುವೆಯೂ ಹೂವಿನಂಥ ಕಾವ್ಯ ಅರಳಿಸಬಲ್ಲವರು.

1937ರ ಜನವರಿ 2ರಂದು ಬೆಳಗಾಂವನ ಘೋಡಗೇರಿಯ ಬಸವಣ್ಣೆಪ್ಪ, ಚೆನ್ನಮ್ಮ ದಂಪತಿಗಳ ಮಗನಾಗಿ ಜನಿಸಿದರು. ವಿದ್ಯಾವಂತರೂ ಬಯಲಾಟ ಮತ್ತು ಹಾಡುಗಾರಿಕೆಯ ಬಗ್ಗೆ ಅಪಾರ ತಿಳಿದವರೂ ಆಗಿದ್ದ ತಂದೆ, ಹಾಡುಗಳ, ಕತೆಗಳ ಕಣಜವೇ ಆಗಿದ್ದ ತಾಯಿ ಇವರ ಹಿಂದಿನ ಶಕ್ತಿ. ಇಂಥವರ ಮಗನಾದ ಕಂಬಾರರಲ್ಲಿ ಸಾಹಿತ್ಯಾಸಕ್ತಿ ಬೆಳೆದುದು ವಿಶೇಷವೇನಲ್ಲ. ಆದರೆ ಕಂಬಾರರು ಸಾಹಿತ್ಯಿಕವಾಗಿ ತನ್ನನ್ನು ತೊಡಗಿಸಿಕೊಂಡ ರೀತಿ, ಅಭಿವ್ಯಕ್ತಿಯ ಶೈಲಿ, ಆಯ್ದುಕೊಂಡ ವಸ್ತುಗಳು ಎಲ್ಲವೂ ಅನನ್ಯ. ಕಂಬಾರರ ಕಾವ್ಯಸೃಷ್ಟಿಯ ಕಾಲವೇ ದ್ವಂದ್ವಗಳಿಂದ ತುಂಬಿದ್ದು. ಜತೆಗೇ ಸಂಸ್ಕೃತಿ ಪರಂಪರೆಗಳ ಸಮಸ್ಯೆಗಳೂ ಬೇಕಾದಷ್ಟಿದ್ದವು. ಇಂಥ ಕಾಲಘಟ್ಟದಲ್ಲಿ ಕಾವ್ಯದ ಮೂಲಕ ದನಿಯೆತ್ತುವ ಕವಿ ಸಮಾಜದಲ್ಲಿ ಮುಖ್ಯ ಪಾತ್ರ ವಹಿಸುತ್ತಾನೆ. ಕಂಬಾರರು ಈ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸಿದ್ದಾರೆ. ಆಧುನಿಕ ಜಗತ್ತಿನೆಡೆಗೆ ಇನ್ನಿಲ್ಲದ ವ್ಯಾಮೋಹ ಬೆಳೆಸಿಕೊಂಡು ಥಳುಕಿನ ಗಗನಕ್ಕೆ ಹಾರುವ ರಭಸದಲ್ಲಿ ತಾನು ನಿಂತ ನೆಲವನ್ನೇ ಮರೆಯುತ್ತಿರುವ ಮನುಷ್ಯನನ್ನು ಮತ್ತೆ ವಾಸ್ತವಿಕತೆಯ ಕಡೆ ಸೆಳೆಯುವ ಯತ್ನ ಕಂಬಾರರದು. ಡಾ. ಕೆ.ಸಿ. ಶಿವಾರೆಡ್ಡಿಯವರ ಅಭಿಪ್ರಾಯದಂತೆ 'ಪ್ರಸ್ತುತ ಶತಮಾನದ ದೈತ್ಯ ಪ್ರತಿಭೆಗಳನ್ನಿಸಿಕೊಂಡ ಕುವೆಂಪು, ಬೇಂದ್ರೆ, ಅಡಿಗರ ಅನಂತರ ಕಂಬಾರರ ಕಾವ್ಯ ಭಿನ್ನವಾಗುತ್ತ ಸಾಂಸ್ಕೃತಿಕ ಅನನ್ಯತೆಯನ್ನು ದಕ್ಕಿಸಿಕೊಳ್ಳುತ್ತದೆ'

ಮಾನವೀಯ ಸಂವೇದನೆಗಳು ಮತೀಯ ಕಲಹ ಮತ್ತು ಬೆಳವಣಿಗೆಗಳೆಂಬ ಹೆಸರಿನಡಿಗೆ ಸಿಕ್ಕಿ ನರಳುತ್ತಿವೆ. ಈ ಸಂದರ್ಭದಲ್ಲಿ ಕಂಬಾರರು ತಮ್ಮ ಕಾವ್ಯದ ಮೂಲಕ ನಮ್ಮ ಜನಪದ ಬದುಕನ್ನು ಅದರ ಸೊಗಡನ್ನು ಜನಮನಕ್ಕೆ ಹತ್ತಿರಾಗಿಸುವ ಕೈಂಕರ್ಯದಲ್ಲಿ ತೊಡಗಿದವರು. ಅವರ ಹುಟ್ಟೂರಿನಲ್ಲಿ ಬ್ರಿಟಿಷರ ಭಯದ ನೆರಳು ಆವರಿಸಿದ್ದ ಕಾರಣ ಬಾಲ್ಯದ ಆತಂಕಗಳು ಅವರ ಕಾವ್ಯದಲ್ಲಿ ಹೇರಳವಾಗಿ ಗೋಚರಿಸುತ್ತವೆ. ಕಂಬಾರರ 'ಹೇಳತೇನ ಕೇಳ' ವಸಾಹತುಶಾಹಿಯಿಂದ ಹುಟ್ಟಿದ ಎಲ್ಲ ದ್ವಂದ್ವ, ಸಂಘರ್ಷಗಳನ್ನು ಸ್ಪಷ್ಟವಾಗಿ ಬಿಂಬಿಸುತ್ತದೆ. ಆಧುನಿಕ ಜಗತ್ತಿನ ನೆಲೆಗಳನ್ನು, ಮರೆಯಾಗಿ ಹೋಗುತ್ತಿರುವ ತನ್ನ ಸ್ಥಳೀಯ ಬದುಕಿನ ದ್ವಂದ್ವಗಳನ್ನು

ವಿಶ್ಲೇಷಿಸುವುದು ಕಂಬಾರರ ಹೆಗ್ಗಳಿಕೆ. ನಾಗರಿಕ ಪ್ರಪಂಚವು ಗ್ರಾಮದ ಸಹಜತೆಗಳನ್ನು ನಾಶ ಮಾಡಿ ಹಳ್ಳಿಯ ಬದುಕಿನ ಲಾವಣ್ಯ, ಜೀವಂತಿಕೆಗಳ ಮೇಲೆ ಸವಾರಿ ಮಾಡುವ ಪ್ರಕ್ರಿಯೆಯನ್ನು ಕಂಬಾರರು ತಮ್ಮದೇ ಶೈಲಿಯಲ್ಲಿ ನಿರೂಪಿಸಿದ್ದಾರೆ. ಇವರ ಕೃತಿಗಳ ಮತ್ತೊಂದು ಮುಖ್ಯ ನೆಲೆಯೆಂದರೆ, ಜಮೀನ್ದಾರಿ ವ್ಯವಸ್ಥೆಯಲ್ಲಿ ಉಂಟಾಗುತ್ತಿರುವ ಒಡಕುಗಳ ಕುರಿತು ಚಿಂತನೆ, ದರ್ಪ, ಅಹಂಕಾರಗಳಿಂದ ತುಂಬಿದ ಜಮೀನ್ದಾರಿ ವ್ಯವಸ್ಥೆ ಏನನ್ನೂ ಸೃಷ್ಟಿಸಲಾರದ, ನಿರ್ವೀರ್ಯಗೊಳ್ಳುವ ವ್ಯಂಗ್ಯವನ್ನು ಕಂಬಾರರು ತೆರೆದಿಡುತ್ತಾರೆ.

'ನೆರಳು' ಮತ್ತು 'ಕಾಮ' ಕಂಬಾರರ ಕಾವ್ಯದಲ್ಲಿ ಅಲ್ಲಲ್ಲಿ ಪ್ರತಿಮೆಗಳಾಗಿ ಹಲವು ಅರ್ಥಗಳನ್ನು ತೋರುತ್ತಾ ಮುನ್ನಡೆಯುತ್ತದೆ. ಶಿವಾರೆಡ್ಡಿಯವರು ಹೇಳುವಂತೆ 'ಹೊಸ ಸಂಸ್ಕೃತಿಯೊಂದು ದೇಸೀ ಸಂಸ್ಕೃತಿಯ ಮೇಲೆ ನಡೆಸಿದ ಅನೈತಿಕ ದಾಳಿಯಿಂದ ದೇಸೀ ಪರಿಸರ ಬರಡಾಗುವ ಬಗೆಯನ್ನು ಕಂಬಾರರ ಕಾವ್ಯ ಚಿಂತನೆಗೆ ಗುರಿಪಡಿಸುತ್ತದೆ. ದೇಸೀ ಸಂಸ್ಕೃತಿಯ ಅಸ್ತಿತ್ವದ ಶೋಧನೆಯನ್ನು ನಡೆಸುತ್ತದೆ. ಕಂಬಾರರ ಸಂವೇದನೆ ಹೊಸ ಸಂಸ್ಕೃತಿಯ ಪ್ರವೇಶವನ್ನು ಅನೈತಿಕ ಸಂಬಂಧವೆಂದು ಗ್ರಹಿಸಿದೆ; ಒಂದು ಸಂಸ್ಕೃತಿಯ ಅಖಂಡ ಆತ್ಮದಲ್ಲಿ ಬಿರುಕುಂಟು ಮಾಡುವ ನೆರಳೆಂದೂ ತಿಳಿಯುತ್ತದೆ. ಈ 'ನೆರಳು' ತರುವ ನೋವು ಕಾವ್ಯದ ಮುಖ್ಯ ಭಿತ್ತಿಯಾಗಿ ಬೆಳೆಯುತ್ತವೆ. ಅಂಥ ಭಿತ್ತಿ ಎದುರಾಗಿಸುವ ನೋವುಗಳು 'ಏಕಕಾಲಕ್ಕೆ ಇಬ್ಬರಿಗೆ ಮಗ ಆಗುವ' ದುರಂತಗಳ ಪರಂಪರೆಯನ್ನೆ ಪ್ರಕಟಿಸುತ್ತವೆ' ಹಾಗೆಯೇ ಡಾ. ಡಿ. ಆರ್. ನಾಗರಾಜ್ ಹೇಳುವಂತೆ 'ವಸಾಹತೀಕರಣದ ಹದ್ದಿನಿಂದ ಕನ್ನಡ ಕಾವ್ಯವನ್ನು ಕಾಪಾಡಲು ಹಲವು ಪ್ರತಿಮೆ ರೂಪಕಗಳನ್ನು ಕಂಬಾರರ ಸಂವೇದನೆ ಶೋಧಿಸುತ್ತದೆ.'

'ಗಂಗಾಮಾಯಿ'ಯ ಮೂಲಕ ಕಂಬಾರರು ಹರಿಯುತ್ತ ನೆಲವನ್ನು ಫಸಲುಗೊಳಿಸಬೇಕಾದ ನೀರು ಸ್ಥಗಿತಗೊಂಡು ತಾನೇ ತನ್ನ ಶುಭ್ರತೆಯನ್ನು ಕಳಕೊಳ್ಳುವ ಕೆರೆಯಾದುದನ್ನು ಚಿತ್ರಿಸುತ್ತಾರೆ. ಜೀವಂತಿಕೆ ಕಳಕೊಂಡ ನಮ್ಮ ಸಂಸ್ಕೃತಿಯು ವಿಕೃತಿಗಳಿಗೆ ಆಶ್ರಯವಾದುದನ್ನು ಕಲುಷಿತ ಕೆರೆಯ ಪ್ರತಿಮೆ ಹೇಳುತ್ತದೆ. ಪಾಪಗಳ ಕಶ್ಮಲಗಳನ್ನು ತೊಳೆಯಬೇಕಿದ್ದ ಗಂಗೆ ತಾನೇ ಪಾಪಕೂಪವಾಗುವ ಪರಿ ಓದುಗನನ್ನು ದಂಗು ಬಡಿಸುತ್ತದೆ. ಅವರ ಕಾವ್ಯ ಯಾವ ಬಗೆಯದೇ ಇರಲಿ, ಅವುಗಳ ವಸ್ತು ತಂತ್ರ, ಸನ್ನಿವೇಶ, ಪ್ರತಿಮೆ ಹಾಗೂ ರೂಪಕ ಪ್ರಪಂಚ ಈ ಮಣ್ಣಿನಿಂದಲೇ ಬಂದುದು ಎಂಬುದು ಗಮನಾರ್ಹ. ಮಾನವನ ಮನೋವ್ಯಾಪಾರದ ಸಮಸ್ಯೆಗಳನ್ನು ನಂಬಿಕೆ, ಆತಂಕ, ಕ್ರೌರ್ಯ ಎಲ್ಲವನ್ನು ಶ್ರದ್ಧೆಯಿಂದ ಅಭ್ಯಸಿಸಿರುವ ಪರಿ ಕಂಬಾರರಲ್ಲಿ ಕಾಣಬಹುದಾದ ವೈಶಿಷ್ಟ್ಯ, ಜನಪದ ಶೈಲಿಗೆ ನವ್ಯದ ದೀಕ್ಷೆ ಕೊಟ್ಟು ಹೊಸ ಪ್ರಯೋಗ ನಡೆಸಿದ ಕೀರ್ತಿ ಕಂಬಾರರಿಗೇ ಸಲ್ಲುತ್ತದೆ. 'ತಿಳುವಳಿಕೆ ಎಷ್ಟೇ ಶ್ರೇಷ್ಠವಾಗಿರಲಿ, ಅಗತ್ಯವಾದದ್ದೇ ಆಗಿರಲಿ, ನಮ್ಮ ಭಾಷೆಯಲ್ಲಿ ಅದು ಮೂಡಿ ಬರದಿದ್ದರೆ ಅದು ನಮ್ಮ ತಿಳುವಳಿಕೆಯಾಗಲಾರದು' ಎಂಬುದು ಕಂಬಾರರ ಅಚಲ ನಂಬಿಕೆ. ಇದೇ ನಿಟ್ಟಿನಲ್ಲಿ ಶ್ರಮಿಸಿದವರು ಕೂಡ.

ಮುಗುಳು (1958):

ಕಂಬಾರರ ಪ್ರಥಮ ಕವನ ಸಂಕಲನ ಪ್ರಕಟವಾದಾಗ ಅವರಿಗೆ ಇಪ್ಪತ್ತರ ಹರೆಯ. ಆ ಹೊತ್ತಿಗೆ ನವ್ಯ ಮೆಲ್ಲನೆ ಅಡಿಯಿಟ್ಟಿತ್ತು. ಆದರೆ ನವೋದಯ ಮರೆಯಾಗಿರಲಿಲ್ಲ. ನವೋದಯದ ಮುಗ್ಧತೆ, ದೈವೀಶ್ರದ್ಧೆ, ಪ್ರಕೃತಿ-ಪ್ರೇಮ, ವಿಡಂಬನೆ, ಮಾನವೀಯ ಸನ್ನಡತೆ, ಅನುಕಂಪ ಎಲ್ಲವೂ 'ಮುಗುಳು'ನಲ್ಲಿ ಬಿಂಬಿತವಾಗಿವೆ. ಈ ಸಂಕಲನದ ಕವಿತೆಗಳ ಭಾವ-ಭಾಷೆಗಳಲ್ಲಿ

ಕುವೆಂಪುರವರ ಪ್ರಭಾವ ಎದ್ದು ಕಾಣುತ್ತದೆ. ಸಂಸ್ಕೃತ ಪದಗಳ ಬಳಕೆಯ ಜತೆ ಹಳೆಗನ್ನಡ ಪ್ರತ್ಯಯಗಳೂ ಕುವೆಂಪುರವರ ಶೈಲಿಯಲ್ಲಿಯೇ ಬಳಕೆಯಾಗಿವೆ.

ಸ್ವಾತಂತ್ರ್ಯಾನಂತರ ದೇಶವನ್ನು ಹೊಸದಾಗಿ ಕಟ್ಟಲು ಕವಿ 'ಹೊಸ ಹಾಡು' ಕವನದಲ್ಲಿ

'ಕುಲ ಬಲದ ಛಲ ಲಿಂಗ ತರಮುವನುಳಿದು
ಉಸಿರುಸಿರ ನೂಲಿನೆಳೆ ಹುರಿಯಾಗಿ ಹೊಸೆದು
ಹೊಸ ಧ್ಯೇಯ ಭಾವಗುರಿ ಬಾವುಟವನೆತ್ತಿ
ಹಾಡುವೆವು ಕುಕ್ಕಿ ಮೌಢ್ಯತೆಯ ಹಸಿ ನೆತ್ತಿ'

ಇದೇ ಧೋರಣೆಯನ್ನು ಮುಂದುವರಿಸುತ್ತ 'ಆಹ್ವಾನ' ಕವನದಲ್ಲಿ

'ಧಮನಿಯಲಿ ಬಿಸಿ ನೆತ್ತರುಕ್ಕುತಿಹ ಹೇ ಯುವಕ
ಹೊಸದೊಂದು ಬ್ರಹ್ಮಾಂಡ ಕಟ್ಟೋಣ ಬಾ
ಹಳೆ-ಹಸಿಯ ಕೆಸರಿಂದ ಕಸಗೊಂಡು ಕಿತ್ತೇಳು
ಹೊಸ ಯುಗದ ಹಣೆಬರಹ ಬರೆಯೋಣ ಬಾ'

ಎನ್ನುತ್ತಾರೆ. ಜತೆಗೇ ಅಭಿವೃದ್ಧಿಗಾಗಿ ಪಾಶ್ಚಾತ್ಯ ಜಗತ್ತಿನ ಯಂತ್ರಶಕ್ತಿ ಮತ್ತು ವೈಚಾರಿಕತೆಗಳು ಅವಶ್ಯವೆನ್ನುತ್ತಾರೆ. ಭಾರತೀಯರು ತಲೆ ತಲಾಂತರಗಳಿಂದ ಪಾಲಿಸುತ್ತ ಬಂದಿರುವ ಮೌಢ್ಯಗಳು ಅವೈಜ್ಞಾನಿಕ ನಂಬಿಕೆಗಳು, ಜಾಣತನದಿಂದ ಶೋಷಣೆ ಮಾಡುತ್ತಿದ್ದ ಪುರೋಹಿತ ಶಾಹಿಗಳನ್ನು ನಾಶ ಮಾಡುವ ಆಶಯವಿದೆ. ಆದ್ದರಿಂದಲೇ ಅವರು -

'ದಿನದ ಮೂಡಣ ರವಿಯ ಕಿತ್ತೆಸೆದು ನಮ್ಮ ಹೊಸ
ರವಿಯ ಪಡುವಣದಿ ಮೂಡಿಸಲು ಬೇಕು'

- ಎನ್ನುತ್ತಾರೆ. ಒಟ್ಟಿನಲ್ಲಿ ವೈಚಾರಿಕತೆಯ ತಳಹದಿಯ ಮೇಲೆ ನಮ್ಮ ಸಂಸ್ಕಾರದ ಸಮಾಜದ ರಚನೆ ಅವರ ಆಶಯ. ಇದೇ ಸಂಕಲನದಲ್ಲಿ 'ಮಧುರ ಮಿಲನ'ದಂಥ ಪ್ರಕೃತಿಗೀತೆ, 'ಗಾಳಿ ಸೇದಿದಬೀಡಿ'ಯಂಥಸಂತಾಪ ಗೀತೆ, ಕನ್ನಡದ ಗಮನಾರ್ಹ ಶೋಕಗೀತೆಗಳಲ್ಲೊಂದಾದ 'ಅಣ್ಣ ಕೀಟ್ಸನ ಸಾವನ್ನ ನೆನೆದು' ಮುಂತಾದ ದೀರ್ಘ ಕವಿತೆಯೂ ಇದೆ.

ಹೇಳತೇನ ಕೇಳ (1964):

ತಮ್ಮ ಸಮಕಾಲೀನರೆಲ್ಲರಿಗಿಂತ ಭಿನ್ನವಾಗಿ ಕಂಬಾರರು ಬರೆದ ಹೇಳತೇನ ಕೇಳ ವಿಶಿಷ್ಟವಾದ ಛಾಪನ್ನು ತಂದ ಸಂಕಲನ. ಆಧುನಿಕ ಕವಿತೆಗಳಲ್ಲಿ ಜನಪದದ ಲಯ, ಭಾಷಾ ಬಳಕೆ, ವಸ್ತುಗಳನ್ನು ಹೇರಳವಾಗಿ ತಂದರು. ಇದರ ಮೂಲಕ ಸ್ವಂತಿಕೆಯನ್ನು ಸ್ಥಾಪಿಸಿರುವ ಕ್ರಿಯಾಶೀಲ ಯತ್ನ ಮಾಡಿ ಯಶಸ್ವಿಯಾದರು. ಅಡಿಗರು ಈ ಸಂಕಲನಕ್ಕೆ ಮುನ್ನುಡಿಯಲ್ಲಿ 'ಈ ಕವನ ಸಂಕಲನದುದ್ದಕ್ಕೂ ನಾವು ಗಮನಿಸಬೇಕಾದ್ದು ಈ ಕವಿಗೆ ಪರಿಸರದಿಂದ ಲಭಿಸಿದ ಜನಪದ ಭಾಷೆಗೂ ಈ ಕವಿಯ ಆಧುನಿಕ ಪ್ರಜ್ಞೆಗೂ ನಡೆಯುತ್ತಿರುವ ದ್ವಂದ್ವ' ಎನ್ನುತ್ತಾರೆ. 'ಈ ದ್ವಂದ್ವವೇ ಸೃಜನಾತ್ಮಕ ಶಕ್ತಿಯಾಗಿ ಕಂಬಾರರ ಕೃತಿಗಳಲ್ಲಿ ಪ್ರವಹಿಸಿತು. ಇದರಿಂದಾಗಿ ಆಧುನಿಕ ಪ್ರಜ್ಞೆಗೆ ಜಾನಪದ ವೇಷ ತೊಡಿಸಿದವರೆಂದು ಜಾನಪದ-ಪರ ಚಿಂತಕರು ಕಂಬಾರರನ್ನು ಮೆಚ್ಚುವಂತಾಯಿತು' ಎಂಬುದು ಡಾ. ಬಸವರಾಜ ಮಲಶೆಟ್ಟಿ ಅವರ ಅಭಿಪ್ರಾಯ. ನವೋದಯದ ಗುಂಗಿನಲ್ಲಿ ಎಂಬಂತೆ 'ನೀನು ನಾನು', 'ಶ್ರಾವಣದ ಒಂದು ಸಂಜೆ', 'ಅಗಲುವಾಗ' ಮುಂತಾದ ಕವನಗಳನ್ನು ಬರೆದಿದ್ದಾರೆ. 'ಕಳ್ಳಸಂತೆ', 'ಕೋಡಂಗಿಹೇಳಿದ್ದು', 'ಹೋರಿ' ಮೊದ

ಲಾದವು ನವ್ಯ ಕವನಗಳು. ಹೋರಿ ಯೌವ್ವನದ ಹುಚ್ಚು ಹುಮ್ಮಸ್ಸನ್ನು ಸಾಂಕೇತಿಕವಾಗಿ ಚಿತ್ರಿಸಿದೆ. 'ನಾಯಕ ಅಥವಾ ಡೊಳ್ಳಿನ ಹಾಡು' ಸ್ವತಂತ್ರ ಜನಪದ ಗೀತೆಯಂತೆ ಕಂಡರೂ ಹೊಸ ಅರ್ಥ ತುಂಬಿಕೊಂಡು ಅಪೂರ್ವವೆನಿಸಿದೆ.

ತಕರಾರಿನವರು (1971):

ಇದು ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತ ಸಂಕಲನ. ಸಮಕಾಲೀನರು ಅಡಿಗರ ಪಥದಲ್ಲಿ ಅಡಿಯಿಡುತ್ತಿರುವಾಗ ಕಂಬಾರರು ಸ್ವಂತಿಕೆಗಾಗಿ ಶ್ರಮಿಸಿದರು. ಪಾಶ್ಚಾತ್ಯ ಚಿಂತನೆ, ವೈಚಾರಿಕತೆ, ತರ್ಕಬದ್ಧ ಆಲೋಚನೆಗಳು ಇಲ್ಲಿ ಹರಿದು ಬಂದವು. ಶತಮಾನಗಳಿಂದ ಬಂದ ಮೌಢ್ಯ, ಅಂಧಾನುಕರಣೆಗಳನ್ನು ಸಾತ್ವಿಕವಾಗಿ ಪ್ರತಿಭಟಿಸಿದರು. 'ನಮ್ಮಜ್ಜ' ಮತ್ತು 'ಗಂಗಾಮಾಯಿ'ಗಳಲ್ಲಿ ಇವು ನಿಚ್ಚಳವಾಗಿ ಕಾಣುತ್ತವೆ. 'ಮಾವೋತ್ಸೆತುಂಗನಿಗೆ' ಯಲ್ಲಿ ಚೀನಾದ ಅಧ್ಯಕ್ಷ ಮಾವೋತ್ಸೆತುಂಗನನ್ನು ಒಬ್ಬ ಖಳನಾಯಕನಂತೆ, ಅಸಹಾಯಕ ಭಾರತವನ್ನು ಒಬ್ಬ ಗರತಿಯಂತೆ ಚಿತ್ರಿಸಿದ್ದಾರೆ. ಜತೆಗೇ ಗರತಿ ಭಾರತಾಂಬೆಯನ್ನು ಕೆಣಕಿದರೆ 'ದುಷ್ಟಾ ನಿನಗೆ ಕೆತ್ತಿಸಿ ಬಡದೇನು ಗೂಟಾ' ಎಂದು ಎಚ್ಚರಿಸುತ್ತಲೇ ದೇಶ ಪ್ರೇಮ ಮರೆಯುತ್ತೆ. ಸಮೃದ್ಧ ಜಾನಪದ ಗುಣ, ಗೇಯತೆ ಮತ್ತು ಭಾವಗಳಿಂದಾಗಿ ಈ ಹಾಡುಗಳೆಲ್ಲ ಮುದ ನೀಡುತ್ತವೆ.

ಸಾವಿರದ ನೆರಳು (1979):

ಇದು ಕೇರಳದ ಆಶಾನ್ ಪ್ರಶಸ್ತಿಯನ್ನು ತನ್ನ ಬಗಲಿಗೆ ಸೇರಿಸಿಕೊಂಡ ಸಂಕಲನ. ನವ್ಯದ ಭರಾಟೆಯ ಈ ಕಾಲದಲ್ಲಿ ಅವರು ಪ್ರತ್ಯೇಕವಾಗಿಯೇ ಉಳಿದರೆಂದು ಈ ಸಂಕಲನ ಸಾರುತ್ತದೆ. 'ಮಿಕ', 'ಗುಡಗುಡು ಗುಮ್ಮ', 'ಸ್ವಂತ ಚಿತ್ರ'ಗಳಲ್ಲಿ ವಿಪರೀತ ಸಾಂಕೇತಿಕತೆಯಿದ್ದರೆ, 'ನೆರಳಿನ ಜೋಡಿ', 'ಕಲೆಗಾರಣ್ಣನ ಲಾವಣಿ'ಗಳಲ್ಲಿ ಸೃಜನಶೀಲತೆ ಧಾರಾಳವಾಗಿ ಅಭಿವ್ಯಕ್ತವಾಗಿದೆ. 'ಮರೆತೇನೆಂದರೆ ಮರೆಯಲಿ ಹೆಂಗಾ' ಕಂಬಾರರ ಜನಪ್ರಿಯ ಕವಿತೆಗಳಲ್ಲೊಂದು. ಇಲ್ಲಿ ಮಾವೋತ್ಸೆತುಂಗನ ಅದ್ಭುತ ಸಾಧನೆಗಳ ಚಿತ್ರಣವಿದೆಯೇ ಹೊರತು ಆಪಾದನೆಗಳಲ್ಲ. 'ಹಳದಿ ಆಶೀರ್ವಾದ' ಚೀನಾದ ಸಮೃದ್ಧಿ, ಹಳದಿ ವೈಶಿಷ್ಟ್ಯವನ್ನು, ಕೊನೆಯಲ್ಲಿ ನಮ್ಮ ದೈನೇಸಿ ಸ್ಥಿತಿಯನ್ನು ತೆರೆದಿಡುತ್ತದೆ. 'ಶಬ್ದದ ಲಜ್ಜೆ ನೋಡಾ' ನವ್ಯ ಮಾದರಿಯ ಕವನ. ತ್ರಿಪದಿಲಯದ ನಾಲ್ಕು ಸಾಲುಗಳ ನುಡಿಯಲ್ಲಿರುವ 'ಕುದರಿ ಸಿದ್ಧ' ಈ ಸಂಕಲನದ ಮಹತ್ವದ ಕಥನ ಕವನ. ನಾಟಕ ಮತ್ತು ಸಿನಿಮಾಗಳಿಗೆ ಬರೆದ 'ಕಾಡು ಕುದುರೆ', 'ಒಂದಾನೊಂದು ಕಾಲದಲ್ಲಿ', 'ಹಾರಿ ಹಾರ್‍ಯೆಸುತ'ಗಳಲ್ಲಿ ಸರಳ ಸಂಕೇತಗಳ ಮೂಲಕ ಮನತಟ್ಟುವಂಥ ನಿರೂಪಣೆಯಿದೆ.

ಬೆಳ್ಳಿಮೀನು (1989):

ಕಂಬಾರರ ನವ್ಯದ ಶ್ರೇಷ್ಠ ಉದಾಹರಣೆಗಳು ಇಲ್ಲಿವೆ ಎಂಬುದು ಡಾ. ಮಲಶೆಟ್ಟಿಯವರ ಅಂಬೋಣ. 'ನಿನ್ನ ಕಣ್ಣು' ಕವಿತೆಯಲ್ಲಿ

ಕಾಡಿನೊಳಗಿನ ಎರಡು ತಿಳಿಗೊಳಗಳು
ನಿನ್ನೆರಡು ಕಾಡಿಗೀಗಣ್ಣುಗಳು
ಏಳು ಹೊರಸಿನ ನುಂಗು ಏಲಕಲಾರದ ಆಳ
ಭಾರೀ ನಿರಾಳ

ಪ್ರಿಯೆಯ ಕಣ್ಣುಗಳನ್ನು ವರ್ಣಿಸಿದ ರೀತಿ ಇದು. ಜತೆಗೇ ಆಕೆಯ ವ್ಯಕ್ತಿತ್ವದ ಕೇಂದ್ರವಾದ ಕಣ್ಣು ತನ್ನ ಪ್ರಖರತೆಯಿಂದ ದುರ್ಬಲರನ್ನು ಆಕರ್ಷಿಸುವ ಪರಿಯೂ ಅಚ್ಚರಿಯುಂಟು ಮಾಡು

ವಂಥದ್ದು. ಕಂಬಾರರು ಇದನ್ನು

ಮೊನ್ನೆ ಅಂಬಿಗರ ಹುಡುಗ ಆ ಕೊಳದೊಳಕ್ಕೆ
ಬಲೆ ಬೀಸಿ ಎಳೆದಾಗ ಬಲೆ ತುಂಬ ಸಿಕ್ಕಿದ್ದು - ನಿನಗೂ ಗೊತ್ತಲ್ಲ?
ಚಿಳಿ ಮಿಳಿ ಮೀನಲ್ಲ -
ಈಜಬಾರದೆ ಜಾರಿ ಬಿದ್ದವರ ಹೃದಯಗಳು

ಎಂದು ಶುದ್ಧ ತುಂಟ ಮಾತಾಡುತ್ತಾರೆ.

'ಮಂದಾರ ಮರ'ದಲ್ಲಿ ದೇವತೆಗಳನ್ನು ಮಾನವರಾಗಿಸಿದ್ದಾರೆ. ಕಂಬಾರರು ರಂಗಭೂಮಿಯ ಜತೆ ಹೊಂದಿರುವ ಅವಿನಾಭಾವ ಸಂಬಂಧ 'ರಂಗಭೂಮಿ ಮತ್ತು ನಾನು' ಕವಿತೆಯಲ್ಲಿ ದಾಖಲಾಗಿದೆ. 'ದಿಲ್ಲಿಯೆಂಬ ಕ್ಯಾಬರಿ' ರಾಜಧಾನಿಯ ವಿಕೃತ ಮುಖಗಳನ್ನು ಜತೆಗೇ ವಿರೋಧಾಭಾಸಗಳನ್ನು ತಿಳಿಸುತ್ತದೆ. ಅಲ್ಲಿಯ ಅನ್ಯಾಯ, ಕಾನೂನುಬಾಹಿರ ಕಾರ್ಯಗಳೆಡೆಗೆ ಕವಿಗಿರುವ ಸಿಟ್ಟು ಇಲ್ಲಿ ವ್ಯಕ್ತವಾಗಿದೆ. ನೈತಿಕ ಅಧಃಪತನದಿಂದ ಅಂತಃಸತ್ವ ಕಳಕೊಂಡು ಮುದಿಯಾಗಿದ್ದರೂ, ವಿದೇಶೀ ಸಿದ್ಧಾಂತಗಳ 'ಮೇಕಪ್' ಬಳಸಿ ತಾರುಣ್ಯವತಿ ಎಂದು ತನ್ನನ್ನು ತೋರುವ ಬಜಾರಿ ಹೆಣ್ಣಿನಂತೆ ದಿಲ್ಲಿಯನ್ನು ಚಿತ್ರಿಸಿದ್ದಾರೆ. 'ಇಟ್ಟಿಗೆಯ ಪಟ್ಟಣ' ನಗರದ ಕೃತಕತೆಯನ್ನು ಸೂಚಿಸುತ್ತದೆ. 'ಹಸಿರನ್ನಲ್ಲ, ಈ ಸಿಟಿಯಲ್ಲಿ ಬಿತ್ತಿ ಬೆಳೆಯುತ್ತಾರೆ ಮಣ್ಣಿನಿಟ್ಟಿಗೆಯನ್ನು ಇಟ್ಟಿಗೆ ಬೆಳೆಯುತ್ತದೆ ಕಟ್ಟಡವಾಗುತ್ತದೆ' ಎಂದು ಸಾಗುತ್ತದೆ ಸಾಲು. ಇಲ್ಲಿ ಎಲ್ಲವೂ ಕೃತಕ.

'ಕಟ್ಟಡದ ಇಕ್ಕಟ್ಟು ಸಡಿಲಿ, ಬಿರುಕಿನಲ್ಲಿ
ಹಸಿರು ಇಣುಕಿದರೆ
ಇಟ್ಟಿಗೆ ಅದರ ಕತ್ತು ಹಿಸುಕಿ ಕೊಲ್ಲುತ್ತದೆ.
ಪಾಪಾತ್ಮ ಹಸಿರು ಹುತಾತ್ಮನಾಗದೆ
ಸಾಯುತ್ತದೆ'

ಇಲ್ಲಿ ಹಸಿರಿಗೆ ಜಾಗವೇ ಇಲ್ಲ ಅಂದರೆ ಮಾನವತೆಯ ಜಗಿತುಕೊಳ್ಳುವಿಕೆಗೆ ಅವಕಾಶವಿಲ್ಲ. ಯಾಂತ್ರೀಕೃತವಾದ ಇಟ್ಟಿಗೆ ಮಾತ್ರ ಮೆರೆಯುತ್ತದೆ.

ಪ್ರೊ. ಸಂ.ಶಿ. ಭೂಸನೂರಮಠರ ಘನತೆಯನ್ನು ಬೌದ್ಧಿಕ ನೆಲೆಯಲ್ಲಿ ಚಿತ್ರಿಸುತ್ತ 'ಸಂಗಮದೇವರು' ಕವಿತೆಯಲ್ಲಿ ಕಂಬಾರರು ಗುರುಸ್ತುತಿಯನ್ನು ಮಾಡುತ್ತಾರೆ. 'ನವಿಲೇ ನವಿಲೇ' ಎಂಬ ಕಥನ ಕವನ ಈ ಸಂಕಲನದಲ್ಲಿ ಮಹತ್ವದ್ದಾಗಿದೆ. ನವಿಲು ವಾಸ್ತವ ತರ್ಕವನ್ನು ಮೀರಿದ ಪ್ರತಿಮೆಯಾಗಿ ಕೇಂದ್ರಬಿಂದುವಾಗಿದೆ. ಖ್ಯಾತ ವಿಮರ್ಶಕ ಟಿ.ಪಿ.ಅಶೋಕರ ಪ್ರಕಾರ 'ಮಾದೇವಿ-ನವಿಲು ಇವರ ಪ್ರಣಯದ ಘಟ್ಟಗಳನ್ನು ಕವಿತೆ ವರ್ಣಿಸುವ ಧಾಟಿಯಲ್ಲಿಯೇ ಸಫಲ ಪ್ರೇಮದ, ಸೃಷ್ಟಿಕ್ರಿಯೆಯ ಆರಾಧನೆಯ ಧಾಟಿ ಕಂಡುಬರುತ್ತದೆ. ಸೂಕ್ಷ್ಮವಾಗಿ ಗಮನಿಸಿದರೆ ಕಥೆಯ ಓಟ-ಓಘಗಳಿಗೆ ಭಂಗ ಬರಬಾರದ ಹಾಗೆ ಲೈಂಗಿಕ ಪ್ರತಿಮೆಗಳ ಒಂದು ವಿನ್ಯಾಸವೇ ಇಡೀ ಕವಿತೆಯಲ್ಲಿ ಹಬ್ಬಿಕೊಂಡಿರುವುದು ಕಾಣುತ್ತದೆ'. ಕವಿತ್ವದ ಮೂಲ ಸೆಲೆ ಇಲ್ಲಿಯೂ ಜೀವಂತವಾಗುಳಿದು ಖುಷಿ ಕೊಡುತ್ತದೆ.

ಅಕ್ಕಕ್ಕು ಹಾಡುಗಳೇ (1993):

ಈ ಸಂಕಲನದಲ್ಲಿ ಕಂಬಾರರ ಧೋರಣೆ ಸ್ವಲ್ಪ ಬದಲಾದುದು ಗೋಚರಿಸುತ್ತದೆ. ಗೇಯತೆಯು ಇಲ್ಲಿ ಪ್ರಧಾನ ಅಂಶ. ಬುದ್ಧಿಗಿಂತ ಹೃದಯತಟ್ಟುವ ಕವಿತೆಗಳು ಹೆಚ್ಚಾಗಿವೆ. 'ಚಿಗುರು

ವಾಸೆಯ ಬಿಟ್ಟು ಹಸಿರು ಕೆರಳುವ ಹಾಂಗ' ಹಾಡಬೇಕೆನ್ನುತ್ತಾರೆ ಕವಿ. 'ಕಾಡು ಕಾಡೆಂದರೆ' ಎಂಬ ದಾರ್ಶನಿಕ ಕವಿತೆಯೂ ಇದರಲ್ಲಿದೆ. ಪ್ರಕೃತಿಯ ಬಾಹ್ಯ ಚೆಲುವಿಗಿಂತ ಅದರ ಅಂತ ರಂಗ ದರ್ಶನ ಹೆಚ್ಚು ಪುಳಕ ತರುವಂತದ್ದು ಎನ್ನುತ್ತಾನೆ ಕವಿ. 'ಜನಪದ ಕಥೆಗಳ ರಾಕ್ಷಸ'ದಲ್ಲಿ ನೇಪಥ್ಯಕ್ಕೆ ಸರಿಯುತ್ತಿರುವ ಜನಪದ ಪರಂಪರೆಗಳ ಬಗ್ಗೆ ಆತಂಕವಿದೆ. 'ಹೊಸ ಬಾಳಿಗೆ ಹೊರಟ ಮಗಳಿಗೆ' ಮಾಮೂಲಿ ಉಪದೇಶಕ್ಕಿಂತ ಭಿನ್ನವಾಗಿದ್ದು ದಾಂಪತ್ಯ ಜೀವನದಲ್ಲಿ ಆತ್ಮ ಶೋಧನೆ ಮಾಡುವತ್ತ ಚಿತ್ರವಿದೆ. ಈ ಕವಿತೆಯಲ್ಲಿ

'ಕಾಲರಾಯನ ಗೇಹ ಈ ದೇಹ. ಕೊನೆಯಲ್ಲ
ಲೋಕ ಎಷ್ಟೋ ಉಂಟು ಇದರ ಆಚೆ.
ಕನಸು ವಿರಮಿಸದಿರಲಿ ತುದಿಯ ತಲುಪುವ ತನಕ,
ತುದಿಯೆಲ್ಲಿ, ಗೊತ್ತಲ್ಲ? ಕ್ಷಿತಿಜದಾಚೆ.' - ಎನ್ನುತ್ತಾರೆ.

ಇಲ್ಲಿ ಲೌಕಿಕ ಬದುಕಿನ ಸಮೃದ್ಧಿಯನ್ನು ಕಾಪಾಡಿಕೊಳ್ಳುವಂತೆ ಮಗಳಿಗೆ ಹೇಳುತ್ತಲೇ ಅದನ್ನು ಅಲೌಕಿಕಗೊಳಿಸುವ ಪರಿ ಅನನ್ಯವಾದುದು. ಅಂಬೇಡ್ಕರ್, ಕೆ.ವಿ. ಸುಬ್ಬಣ್ಣ, ಕುರ್ತ ಕೋಟಿಯವರ ಬಗ್ಗೆ ಬರೆದ ಕವನಗಳೆಲ್ಲ ಭಾವುಕತೆ ತುಂಬಿದ್ದರೂ ಪರಿಮಿತಿ ದಾಟದೇ ಸುಂದ ರವಾಗಿವೆ.

ಚಕೋರಿ (ಮಹಾಕಾವ್ಯ) (1996):

ಮಹಾಕಾವ್ಯ ಪರಂಪರೆಗೆ ಸೇರಿರುವ ಒಂದು ಹೊಸ ಮಾದರಿ 'ಚಕೋರಿ' ಜನಪದ ಮತ್ತು ಶಿಷ್ಟ ಮಹಾಕಾವ್ಯಗಳ ಅದ್ಭುತ ಮಿಳಿತ, ವಿಶಿಷ್ಟ ನಿರೂಪಣಾಕ್ರಮ ಇದರ ವಿಶೇಷತೆ. 'ಶಿಷ್ಟ ಮಹಾಕಾವ್ಯದ ಆಡಂಬರ-ವ್ಯಾಪ್ತಿ-ಸಂಯೋಜನೆಯನ್ನು ಕಂಬಾರರು ಧೈರ್ಯವಾಗಿ ಧಿಕ್ಕರಿಸಿ ಹೊಸ ಅಭಿವ್ಯಕ್ತಿ ಕ್ರಮವನ್ನು ಜಾರಿಗೆ ತಂದಿದ್ದಾರೆ. ಈ ದೃಷ್ಟಿಯಿಂದ ಚಕೋರಿ ಏಕಮೇ ವಾದ್ವಿತೀಯ ರಚನೆ' ಎಂಬುದು ಡಾ. ಮಲಶೆಟ್ಟಿಯವರ ಅಭಿಪ್ರಾಯ. ಸಾಹಿತ್ಯ ನಿರ್ಮಾಣದ ರೀತಿಗೆ ಹೊಸ ಆಯಾಮ ನೀಡಿದೆ. ಮೊಗಳ್ಳಿ ಗಣೇಶ್‌ರವರು 'ಕನ್ನಡ ಕಾವ್ಯಪರಂಪರೆ ಇದು ವರೆಗೂ ಅರಿಯದ ಒಂದು ಪರಿಪಕ್ವ ದೇಸೀ ನೆಲೆಯೊಂದನ್ನು ಚಕೋರಿಯಲ್ಲಿ ಕಾಣ ಬಹುದು. ಕಂಬಾರರು ಹೊಸದೊಂದು ಕಾವ್ಯಪ್ರಕಾರವನ್ನೇ ಹುಟ್ಟು ಹಾಕಿದರೆನ್ನಬಹುದು' ಎನ್ನುತ್ತಾರೆ. ಇಲ್ಲಿನ 'ಮಿಥ್' ಸಂಪೂರ್ಣ ಹೊಸದು. ಆದಿಮಾಯೆ ಶಿವನಿಂದ ಸೀಳಿಕೊಂಡು ಬಂದವಳೆಂಬುದು ಹೊಸ ಪರಿಕಲ್ಪನೆ. ಇದು ಶಿವ ಮತ್ತು ಆದಿಮಾಯೆಯ ಸಂಬಂಧವನ್ನು ಗಾಢವಾಗಿಸುವುದು ಕೂಡ ಹೌದು. 'ಆದಿಮಾಯೆ ಪುಣ್ಯಕೋಟಿ ಹಸುವಾಗಿ ಹಸಿರು ಧರ್ಮ ಹಬ್ಬಿಸಿದಳು' ಎನ್ನುವಾಗ 'ಹಸಿರು ಧರ್ಮ'ದ ಸಮಕಾಲೀನತೆ ಅರಿವಾಗುತ್ತದೆ. ಸೂಕ್ಷ್ಮ ಸಂವೇ ದನೆಗಳನ್ನು ತನ್ನಲ್ಲಿರಿಸಿಕೊಂಡ ಚಕೋರಿಯಲ್ಲಿ ಸಂಗೀತ ಪ್ರಮುಖ ಪಾತ್ರವಾಗಿ ಕಾರ್ಯನಿರ್ವ ಹಿಸಿದೆ. ಚಂದ್ರಮುತ್ತ ಚಿನ್ನಮುತ್ತರ ನಡುವಣ ದಾಯಾದಿ ಮತ್ಸರ ನಮ್ಮದೇ ಕಥೆಯಾಗಿ ಬಿಡು ತ್ತದೆ. ಕಲೆಯೊಂದಿಗೆ ಕಲಾವಿದನಿಗಿರುವ ಅವಿನಾಭಾವ ಸಂಬಂಧ, ಅವನ್ನು ಕಲೆಯಲ್ಲಿ ತನ್ನನ್ನೇ ಮರೆಯುವ ಪರಿ, ಸಾಧನೆಗಳು ತೀರ ಸಹಜ ರೀತಿಯಲ್ಲಿ ನವಿರಾಗಿ ನಿರೂಪಿತವಾಗಿವೆ. ದಿವ್ಯ ಸಂಗೀತದ ಜನನಿ ಮತ್ತು ಪ್ರಸಾರಿಣಿಯಾದ ಮುದಿ ಜೋಗ್ತಿ ಕುಲಗುರುವಿಗೆ

ಇಂಥ ಕಚಡ ಸಂಗೀತಕ್ಕೆ ಗುರುವ ನೀನು?
ನಾಳೆ ಪಶ್ಚಿಮದಿಂದ ಬರುವ ಕಲಿಯುಗಕ್ಕೆ

ತಕ್ಕಡಿಯಲ್ಲಿ ತೂಗಿ ಈ ಸಂಗೀತ
ಮಾರಿಕೊ. - ಎನ್ನುತ್ತಾಳೆ.

ಸಂಗೀತ ದಿವ್ಯತೆಯ ಅಂಶ ಕಳಕೊಂಡು, ವ್ಯಾವಹಾರಿಕ ಬಳಕೆಯ ವಸ್ತುವಾಗಿ ಸ್ಥಳೀಯ ಸಂಗೀತ ಪಾಶ್ಚಾತ್ಯ ಲೋಕಕ್ಕೆ ಮಾರಾಟ ಆಗುತ್ತಿರುವುದರ ಪೂರ್ವ ಸೂಚನೆ ಇದರಲ್ಲಿದೆ.

ಪ್ರಣಯ, ಹಠ, ಹಂಬಲ, ಕನಸು, ಕನವರಿಕೆ ಎಲ್ಲವೂ ಚಕೋರಿಯಲ್ಲಿದೆ. ಏನೇ ಆದರೂ ಕೊನೆಯ ಗೆಲುವು ಮನುಷ್ಯನ ಗಾಢ-ಪ್ರೀತಿ, ತ್ಯಾಗ, ಉದಾರತೆಗೆ. ತಾನು ಅಂತರಶಿಲೆಯಾಗುವುದು ಗೊತ್ತಿದ್ದರೂ ಚಂದ್ರಮುತ್ತ ಚಕೋರಿಗೆ ದೈವತ್ವ ದೊರಕಿಸಿಕೊಡುತ್ತಾನೆ. ತ್ಯಾಗದಿಂದ ಪ್ರೀತಿಯ ಆಳವನ್ನಳೆದ ಅಪೂರ್ವ ಕಾವ್ಯವಿದು. 'ಚಂದ್ರಮುತ್ತ ಸಾಂಪ್ರದಾಯಿಕ ನಾಯಕನಲ್ಲ, ಕ್ರೌರ್ಯ ಹಗೆಗಳಿಂದ ಹೊರತಾದ ಸಂಗೀತಗಾರ. ಪ್ರೀತಿಯ ಮಗನಾಗಿ, ನಿಷ್ಠಾವಂತ ಸಂಗೀತ ಸಾಧಕನಾಗಿ ಉತ್ಕಟ ಪ್ರೇಮಿಯಾಗಿ, ವಿನಯ-ಗೌರವಗಳ ಗನಿಯಾಗಿ, ಜೀವನೋತ್ಸಾಹದ ಅದಮ್ಯ ಚೇತನವಾಗಿ ಚಂದ್ರಮುತ್ತ ಕನ್ನಡ ಸಾಹಿತ್ಯದ ಅವಿಸ್ಮರಣೀಯ ಪಾತ್ರಗಳಲ್ಲೊಬ್ಬನಾಗಿದ್ದಾನೆ. ಭಾಷೆಯನ್ನು ದುಡಿಸಿಕೊಳ್ಳುವಾಗ ಕಂಬಾರರು ತೋರುವ ಸಂಯಮ, ಧಾರಾಳತನ, ಕುಶಲತೆ, ಉತ್ಸಾಹಗಳು ಬೆರಗಾಗಿಸುತ್ತವೆ. ಜನಪದದ ನುಡಿಗಟ್ಟುಗಳು, ವಚನಗಳ ಬಂಧ, ಸಂಸ್ಕೃತ ಪದಗಳ ಉಚಿತ ಬಳಕೆ, ಆಡುಮಾತಿನ ಸತ್ವ, ಶಿಷ್ಟ ಕಾವ್ಯದ ಸೊಗಸು ಎಲ್ಲವೂ ಚಕೋರಿಯಲ್ಲಿ ಹಾಸುಹೊಕ್ಕಾಗಿವೆ.

ಸಮಕಾಲೀನ ಸಾಹಿತ್ಯ ಅಪೇಕ್ಷಿಸುವ ಸಂಕೀರ್ಣತೆಯಿಂದ ಮುಕ್ತವಾಗಿರುವ ಚಕೋರಿಯ ಪ್ರಸ್ತುತತೆಯನ್ನು ಪ್ರಶ್ನಿಸುವವರಿದ್ದಾರೆ. ಅದಕ್ಕೆ ಎಚ್. ಎಸ್. ಪ್ರಕಾಶ್ ನೀಡಿರುವ ಉತ್ತರ ಎಲ್ಲ ಪ್ರಶ್ನೆಗಳ ಸೊಲ್ಲು ಅಡಗಿಸುವಂಥದ್ದು - 'ಚಕೋರಿ ಕೀರ್ತಿಸುವುದು ಕಳೆದುಹೋದ ಜಗತ್ತಿನ ಹಳಸು ಮೌಲ್ಯಗಳನ್ನಲ್ಲ. ಇಂದು ನಮ್ಮ ಉಳಿವಿಗಾಗಿ ನಾವು ಮರು ಸಾಕ್ಷಾತ್ಕರಿಸಿಕೊಳ್ಳಲೇಬೇಕಾಗಿರುವ ಇಹಲೋಕ ಪರವಾದ ಶುದ್ಧ ಹಾಗೂ ಮುಗ್ಧ ಆರಾಧನಾ ಭಾವವನ್ನು'. ಒಟ್ಟಿನಲ್ಲಿ ಮಾನವನ ಬದುಕಿನ ಸಂಬಂಧ, ಅವುಗಳ ಗಾಢತೆ, ಸೂಕ್ಷ್ಮತೆಗಳನ್ನೆಲ್ಲ ಹಿಡಿದಿಟ್ಟುಕೊಂಡ ಚಕೋರಿ ಜೀವನ ದರ್ಶನ ಮಾಡಿಸುತ್ತದೆ ಎಂದರೆ ತಪ್ಪಾಗಲಾರದು ಎನಿಸುತ್ತದೆ.

ಒಟ್ಟಿನಲ್ಲಿ ಹೇಳುವುದಾದರೆ ಹಳೆಬೇರು ಸಂಸ್ಕೃತಿ-ಪರಂಪರೆಗಳ ಸಾರವನ್ನು ಹೀರಿ ಸಮಕಾಲೀನತೆಯ ಹೊಸ ಚಿಗುರಾಗಿ ಕಾವ್ಯದ ಹೊಳೆ ಹರಿಸಿರುವ ಕಂಬಾರರು ಅಪೂರ್ವ ಕವಿ. ನವೋದಯ ನವ್ಯಗಳ ಸಂಧಿಕಾಲದಲ್ಲಿ ಜನಪದದಿಂದ ಚಿಗಿತು ಬೆಳೆದ ಪರಿಯೇ ವಿಸ್ಮಯಕಾರಿ. ತಮ್ಮ ಕಾವ್ಯದ ಸೆಲೆಯನ್ನು ಜನಪದ ಪರಂಪರೆಯಲ್ಲಿ ಗುರುತಿಸಿಕೊಂಡ ಕಂಬಾರರು ಹೊಸಲೋಕವನ್ನೇ ಸಹೃದಯರಿಗೆ ಕೊಡಮಾಡಿದರು. ಸಾಮಾನ್ಯವಾಗಿ ಇತಿಮಿತಿಯ ಒಳಗೇ ಇರುವಂಥ ಲಾವಣಿಗೂ ಆಧುನಿಕತೆಯ ಸ್ಪರ್ಶ ನೀಡಿದವರು ಕಂಬಾರರು. ಭಾವ ಸಮೃದ್ಧಿಯ ಜನಪದ ಮತ್ತು ವೈಚಾರಿತ ಸಮೃದ್ಧಿಯ ನವ್ಯಗಳೆರಡನ್ನು ಒಂದೇ ಲೇಖನಿಯಿಂದ ಹೊಮ್ಮಿಸಿ ಒಂದಕ್ಕೊಂದು ಡಿಕ್ಕಿ ಹೊಡೆಯದಂತೆ ನಡೆಸಿದ್ದು ಕಂಬಾರರ ಸಾಧನೆ. ಪುರಾಣದ ನುಡಿಗಟ್ಟುಗಳನ್ನು ಆಧುನಿಕ ಪ್ರಜ್ಞೆಯ ಅಭಿವ್ಯಕ್ತಿಗಾಗಿ ಬಳಸಿಕೊಂಡು ಯಶಸ್ವಿಯಾದ ಅಪೂರ್ವ ಕವಿ ಕಂಬಾರರು. ಆದ್ದರಿಂದಲೇ ಅವರು ಬರೆದ ಕಾವ್ಯಗಳು ಜನರ ಮನ ಮುಟ್ಟಿದವು. ಎದೆಯನ್ನು ತಟ್ಟಿದವು. ಮನುಷ್ಯನೊಳಗಿನ ಮಾನವನನ್ನು ಮುಟ್ಟಿದವು. ಆದ ಕಾರಣವೇ 'ಕಂಬಾರರು ಗ್ರೇಟ್ ಮತ್ತು ಕನ್ನಡಿಗರು ಅವರಿಗೆ ಗ್ರೇಟ್‌ಫುಲ್!'

ಒಂದು ಹೂಜಿ ಮತ್ತು ಕವಣೆ ಏಟು

-ರವಿಚಂದ್ರನ್ ಜಿ.

ಒಂದು

ಒಂದು ಸುಂದರ ಖಾಲಿ ಹೂಜಿಯ
ತಳಭಾಗದಲ್ಲಿರುವ ಒಂದು ಸಣ್ಣ ರಂಧ್ರ
ಅದರ ಅಂದ ಕೆಡಿಸಲಾರದು.
ರಂಧ್ರಗಳು ಮೂಡುತ್ತಲೇ ಇರುತ್ತವೆ
ಕುರುಡನ ಕವಣೆ ಏಟುಗಳಿಗೆ.
ಅದು ನಿಂತೇ ಬಿಡುತ್ತೆ
ಮೈಗತ್ತಿದ ನವಿರ ಮರೆತ
ಬಾಹುಬಲಿಯ ಹಾಗೆ.
ಅದರ ಮೇಲೆ ಸಾವಿರಾರು ಚಿತ್ರಗಳು;
ರಾಜ, ರಾಜಬೀದಿ, ಮಹಾರಾಣಿ
ಸೂಳೆ, ವಿದೂಷಕ,
ಸೈನಿಕ, ಸನ್ಯಾಸಿ
ದೂರ- ದೂರದವರೆಗೆ ಹಬ್ಬಿ ನಿಂತ
ತೋಟಗಳು, ನಡುಬಾಗಿಸಿದ ರೈತರು.
ಹೀಗೆ, ಹೂಜಿ ಒಂದು ಬಲಿಷ್ಠ ರಾಷ್ಟ್ರ.

ಎರಡು


ಒಮ್ಮೊಮ್ಮೆ, ಅದರ ಖಾಲಿತನ ತುಂಬಲಿಕ್ಕೆ
ತಯಾರಿ ನಡೆಯುತ್ತೆ. ಅದು
ರಾಜನ ಅಧಿಕಾರಕ್ಕೆ
ಸೂಳೆಯ ಮೊಲೆ ತುರಿತಕ್ಕೆ
ವಿದೂಷಕನ ವ್ಯಂಗ್ಯಕ್ಕೆ.

ಮೂರು

ಕಂಠ ಪೂರ್ತಿ ವೈನ್ ತುಂಬಿ
ತಳದಲ್ಲಿ ತೊಟ್ಟಿಕ್ಕುವ ವಸಂತಗಳ
ಮಣ್ಣ ವಾಸನೆಯತ್ತ ಬಾಗಿ ಅರಳುವ
ಹೂವುಗಳ, ಯಾರದೊ ನೆಡೆ ಕದ್ದು
ವಾಲಾಡುವ ಜನರ ನೋಡಿ

ಖುಷಿ ಪಡಲಾಗುತ್ತೆ ಮುಳುಗದೆ
ಈಜು ಕಲಿತ್ತಿದ್ದರ ಬಗ್ಗೆ!

ನಾಲ್ಕು
ಅದೂ ಬೇಸರವೆನ್ನಿಸಿ
ಅದರ ತುಂಬಾ ರಕ್ತ ತುಂಬಲಾಗುತ್ತೆ. ಆಗ;
ರಂಧ್ರದ ಅಂಚು ದೇಶದ ಗಡಿಯಾಗುತ್ತೆ
ತೊಟ್ಟಿಕ್ಕತೊಡಗುತ್ತೆ ಯುದ್ಧದ ಬೇಸರವ
ವಿಷಾದವ
ಸಾವು ನೋವಿನ ಕೂಗ.
ಹೂಜಿ ಹೋಳಾಗುತ್ತೆ; ಅದರೊಳಗಿನ
ದಟ್ಟ ದಾರಿದ್ರ್ಯದ ಮುಲುಗಾಟಕ್ಕೆ.
ಬದುಕು ಸವೆಸುತ್ತೆ
ಹಾಳು ಸ್ಮಶಾನದ ಗೋರಿಯೊಂದರ
ತುಂಡು ಚಿತ್ರವಾಗಿ.



ಮರ, ಮೌನ ಮತ್ತು ನಾನು

- ಪ್ರಕಾಶ್. ಜಿ.



ಅಗ್ರಹಾರ

ಇರುಳ ಆ ನೀರವ ಮೌನದಲ್ಲಿ
ಆ ಮರ
'ನಾನು ಒಂಟಿ' ಅಂದಿತು.
ನಾನು ಕೈಹಿಡಿದೆ
'ಮೌನವನ್ನು ಕದಡಬೇಡ' ಅಂದಿತು
ಹಿಡಿದ ಕೈ ಅಮುಕಿದೆ
'ಒಂಟಿತನ ಮೌನ ಹಬ್ಬಿ ಹರಡುತ್ತಿದೆ
ಇದುವರೆಗೆ ಯಾರೂ ಕಲಕಿದ್ದಿಲ್ಲ
ಮತ್ತೆ ನೀನು ಕಲಕುವುದೇಕೆ?'
ಆಳದಿಂದ ಎಳೆದು ಹೇಳಿತು
ಆ ಉದ್ದ ಮರ
ನಿಟ್ಟುಸಿರಿಟ್ಟು ಅಡ್ಡಲಾಯಿತು॥


ಆಕಾಶ ನೋಡು ಅಂದಿತು
ನಕ್ಷತ್ರಗಳು ನಗುತ್ತಿದ್ದವು.
'ಚುಕ್ಕಿಗಳನ್ನು ಎಣಿಸು' ಅಂದಿತು
ಎಣಿಸತೊಡಗಿದಂತೆ
ಇರುಳ ಹಕ್ಕಿಯೊಂದು
ಪಡುವಿನತ್ತ ಹಾರಿ
ಕೂಗುತ್ತಾ ಕಣ್ಮರೆಯಾಯಿತು
ನಿಶ್ಚಲ ನೀರ ಕೊಳಕ್ಕೊಂದು
ಕಲ್ಲು
ಬುಳಕ್ಕೆಂದು ಬಿದ್ದು ಅಲೆಗಳೆದ್ದವು
ಕೊಳದ ದಡದಲ್ಲಿ ಮೈಹಾಸಿ
ಮಲಗಿದ್ದ ಮರ
ಎದ್ದು ಕೂತು ಮೈಮುರಿದು ಆಕಳಿಸಿತು॥

'ಯಾಕೆ ನಕ್ಷತ್ರ ಎಣಿಸುತ್ತಿಲ್ಲ?'
'...............'
'ಎಣಿಸಿದೆಯಾ?' ಕೇಳಿತು
ಕೊಳದ ನೀರು
ಮರದ ಬೇರಿನತ್ತ
ಹರಿಯತೊಡಗಿತು
ನೀರ ಹೀರಿ ಮರ
'ಹಾ......' ಎಂದು ನರಳಿದಾಗ
ಮೈ ತುಂಬಾ ಹೂವರಳಿದಾಗ
'ಹೂ ಎಣಿಸು' ಅಂದಿತು
'ಮೌನವನ್ನು ಕದಡದಿರು' ಅಂದೆ
ಮೌನವಾದೆ॥

ಮುಂಬೆಳಗಿನಲಿ ಹಿಮದ ಹನಿ
ಎಲೆಯ ಚೂಪು ತುದಿಯಿಂದ
ಜಾರಿ
ಕೆಳಕ್ಕೆ ತೊಟ್ಟಿಡುವಾಗ
ಉರಿ ಉರಿ ಬೆಂಕಿ ಚೂರು!!

ಮುಗ್ಧತೆಯ ಅರಸುವಿಕೆ ; ಕಂಬಾರರ ಕಾವ್ಯ

■ ಕೆ. ಆರ್. ಶ್ರೀನಾಥ್ ರೆಡ್ಡಿ



ಡಾ. ಚಂದ್ರಶೇಖರ ಕಂಬಾರರ ಕಾವ್ಯ ಜಗತ್ತು ನಮ್ಮಲ್ಲಿ ಬಹಳ ಕವಿಗಳ ಕಾವ್ಯ ಜಗತ್ತಿಗಿಂತ ಬೇರೆಯಾದದ್ದು. ಶಿಷ್ಟರಾದ ಕವಿಗಳು ನಮ್ಮ ಸುತ್ತಣ ಬದುಕನ್ನು ತಾತ್ಸಾರ ಬೆರೆತ ವ್ಯಂಗ್ಯದಿಂದ ನೋಡುತ್ತ ತಮ್ಮ ಈ ಮನೋಭಾವಯನ್ನು ತಾವೇ ಮೆಚ್ಚಿಕೊಳ್ಳುತ್ತಾರೆ. ಇವರ ಸ್ವಾಭಿಮಾನವೇ ಇವರ ಸ್ವಪ್ರೇಮವಾಗಿ ಇವರು ನೋಡುವ ಯಾವುದಕ್ಕೂ ಸ್ವಂತ ಜೀವವಾಗಲ್ಲಿ, ವೈಚಿತ್ರ್ಯ ವಾಗಲಿ ಇರುವುದಿಲ್ಲ. ಚಂದ್ರಶೇಖರ ಕಂಬಾರರು ತಮ್ಮನ್ನು ತಾವು ಹಾಡಿನ ಮಟ್ಟುಗಳಿಗೆ ಮತ್ತು ಜನರ ನುಡಿಕಟ್ಟು ಮತ್ತು ಸ್ಪಂದನಸ್ವರಗಳಿಗೆ ಒಪ್ಪಿಸಿಕೊಳ್ಳುವುದರಿಂದ ಈ ಅಪಾಯದಿಂದ ಬಹಳ ಸಲ ಪಾರಾಗುತ್ತಾರೆ. ಇವರು ಉತ್ತಮ ಪುರುಷ ಏಕವಚನದಲ್ಲಿ ಬರೆದಾಗ ಕೂಡಾ ಜನತೆಯ ದೃಷ್ಟಿಯಿಂದ ಜೀವನವನ್ನು ನೋಡುವಂತೆ ಕಂಡು ಬರುತ್ತಾರೆ. ಈ ದೃಷ್ಟಿಯಿಂದ ನಮ್ಮ ಬೂರ್ಶ್ವಾ ಅಲ್ಲದ ಕವಿ ಕಂಬಾರರು, ಮೇಲು ವರ್ಗದ ಹಮ್ಮಾವಲಿ. ಮಧ್ಯಮ ವರ್ಗದ ತೀವ್ರತೆಗಾಗಿ ರೂಢಿಸಿಕೊಂಡ ಸಿನಿಕತನವಾಗಲಿ ಇವರಲ್ಲಿ ಕಾಣಸಿಗುವುದಿಲ್ಲ. ಈ ಮಾತಿಗೆ ಬೆಂಬಲ ಇವರ 'ನಾಯಕ ಅಥವಾ ಡೊಳ್ಳಿನ ಹಾಡು' ಎಂಬ ಅಷ್ಟೇನೂ ಪ್ರಸಿದ್ಧವಲ್ಲದ ಕವನದಲ್ಲಿದೆ. ಇದು ಶುರುವಾಗುವುದು ನಾಯಕನೊಬ್ಬನನ್ನು ಗೌರವದಿಂದ ಬರಮಾಡಿಕೊಳ್ಳುವ ಧಾಟಿಯಲ್ಲಿ 'ಸ್ವಾಮಿ ನಮ್ಮಯ್ ದೇವರ ಬಂದಾವ್ ಬನ್ನಿರೇ' ಎಂದು ಹೊರಟು ಮನಸ್ಸಿನಲ್ಲಿ ಗುದ್ದತೊಡಗುತ್ತಾರೆ. 'ಬಿಳಿಯ ಗೊಂಗಡಿಯ ಬಗಲ ಚೀಲದ ಹಗಲ ದೀಪದ ನಾಯಕನೋ' ಎಂದೂ ವ್ಯಂಗ್ಯವಾಗಿ ನಾಯಕನ ಮತ್ತು ಜನತೆಯ ಸಂಬಂಧ ಎಣಿಸಿ 'ಕುಡಗೋಲ ನಿಂದೋ ಕುಂಬಳ ನಿಂದೊ ಹೆಂಗರೆ ಹೆರತಂತಂದೇವ' ಎಂದು ಈ ಕಾವ್ಯ ಕೊನೆ ತಲುಪುತ್ತದೆ. ಜನಗಳ ಕುರಿಗಳ ಸ್ಥಿತಿಯೂ ಅವರ ಮುಗ್ಧ ಆರಾಧನೆಯೂ ನಾಯಕನಿಂದಾಗುವ ಶೋಷಣೆಯು ನಮ್ಮ ಇತರೆ ನವ್ಯ ಕವಿಗಳಲ್ಲಿ ಬಹಳ ಬಂದಿವೆ. ಆದರೆ ಇಲ್ಲಿ ವಾಕ್ಚಾತುರ್ಯ ಮತ್ತು ವಾಕ್ಪಟುತ್ವದಿಂದಾಗಿ ಕೊಂಕು ಅಥವಾ ಭಾವೋದ್ವೇಗದ ಫಸಲು ದೊರಕಿದೆ. ಈ ಸಂಬಂಧವನ್ನು ಗುರುತಿಸಿದ ನಾಗರಿಕನ ಗತ್ತು ಮತ್ತು ಹೆಮ್ಮೆ ಇದೆ. ಆದರೆ ಚಂದ್ರಶೇಖರ ಕಂಬಾರರಲ್ಲಿ ಜನರ ಮುಗ್ಧತೆ ಕಳೆದುಕೊಳ್ಳದೆ ನೋವು ಹೇಳುತ್ತಾ ಕವಿಯು ಅಹಂಕಾರವನ್ನು ಹಿಂದಕ್ಕಿಟ್ಟಿದ್ದಾರೆ. ಬಹುಕಾಲದಿಂದ ಮೋಸ ಹೋದ ಸರಳ ಜನ ತಮಾಷೆ ಮಾಡತೊಡಗಿದರೆ ಹೇಗಿರಬಹುದೋ

ಹಾಗಿದೆ. ಕವಿಯ ಈ ಆತ್ಮನಿಗ್ರಹ ಮತ್ತು ಆರೋಗ್ಯವಂತ ನಿಲುವನ್ನು ಇವರ ರಮ್ಯ ತುಣುಕುಗಳಾದ 'ನೀನು - ನಾನು' ಮುಂತಾದ ಕವಿತೆಗಳಲ್ಲಿ ಕೂಡ ಕಾಣಬಹುದಾಗಿದೆ. 'ಗೀಸಿ ಅಲಗಿಸಿದ ತುಟಿ, ಅದರೊಳಚ್ಚೇರು ಬೆಳದಿಂಗಳನು ಸುರಿವ ಹುಸಿರಿ ನಗೆಯು ನೀನು, ಎರಡು ಕಣ್ಣುಳ್ಳ ಬಿಕನೇಸಿ ನಾನು' ಎಂದೂ ಹೇಳುತ್ತಾರೆ. ತಾನೊಬ್ಬ ಮನುಷ್ಯನೆಂದು ಹೇಳಿಕೊಳ್ಳುವುದು ಮಾತ್ರವಲ್ಲ, ಸಾಮಾನ್ಯರಂತೆ ತುಡಿಯುವ, ಮಾತಾಡುವ ಗೈರತ್ತು ಈ ಸಾಲು ಬರೆದ ಕಪಿಗಿದೆ. ಕಂಬಾರರು ಈ ಜನರ ಸಮುದಾಯವನ್ನು ಒಳಗೊಂಡ ಅವರ ಮೂಲಕ ನೋಡುವ ಧೋರಣೆ ಅವರನ್ನು ನಿಜಕ್ಕೂ ಜಾನಪದ ಕವಿ ಮಾತ್ರವಲ್ಲ, ನಮ್ಮ ಸಾಮಾನ್ಯನಿಗೆ ಹತ್ತಿರದ ಕವಿಯಾಗಿ ಮಾಡುತ್ತದೆ.

ಮೇಲಿನ ಪುಟ್ಟ ಉದಾಹರಣೆಗಳು ನಮ್ಮನ್ನು ಚಂದ್ರಶೇಖರ ಕಂಬಾರರ ಮಾವೋ ಕಾವ್ಯಗಳ ಚರ್ಚೆಗೆ ಒಯ್ಯಬೇಕು. ನನಗೆ ಇವತ್ತಿಗೂ ಇವರ ಮುಂಚಿನ ಕಾವ್ಯ 'ಮಾವುತ್ಸೆ ತುಂಗನಿಗೆ' ಈಚಿನ 'ಮರತೇನೆಂದರ ಮರೆಯಲಿ ಹೆಂಗಾ' ಎಂಬುದಕ್ಕಿಂತ ಪ್ರಿಯ. ಮುಂಚಿನ ಪದ್ಯ ನೇರವಾಗಿ ಹೇಳದೆ ಮಾಡದ ಕೆಲಸ ಇದರಲ್ಲಿಲ್ಲ. 'ದುಷ್ಟಾ ಕೆತ್ತಿಸಿ ಬಡದೇನಾ ಗೂಟಾ' ಎಂದೂ ನಾಟಕೀಯವಾಗಿ ಮೊದಲಾಗುವ ಈ 'ಮಾವೊತ್ಸೆ ತುಂಗನಿಗೆ' ಪದ್ಯ ಒಂದು ಬಗೆಯಲ್ಲಿ ದೇಶಭಕ್ತಿಗೀತೆ.

'ನಮ್ಮ ಭಾರತಾಂಬೆ, ರೂಪಾಯಗಲ ಕುಂಕುಮದಾಕಿ
ಕೈತುಂಬಾ ಹಸಿರು ಬಳೆ ಕುಪ್ಪಸದಾಕಿ
ಒಬ್ಬರ ಕೈ ಬೆರಳಿಗೆ ಗುರಿಯಾಗದೆ ಮರ್ಯಾದೆಯೊಳಗೆ
ಬಾಳಿದಾಕಿ.....'

ಎಂಬುದು ತೀವ್ರ ದೇಶಭಕ್ತಿಯ ಆದರೆ ಚರಿತ್ರೆ ಗೊತ್ತಿಲ್ಲದ ಕುಕವಿಯೊಬ್ಬ ತನ್ನ ಮಾತಿನ ಸುಳ್ಳನ್ನು ಹೇಳಿಕೆಯ ಉತ್ಪ್ರೇಕ್ಷೆಯಲ್ಲಿ ಮುಚ್ಚಿ ಹಾಕಲು ಯತ್ನಿಸುತ್ತಾ ಬರೆದಂತಿದೆ. ಮತ್ತೆ ಅದೇ ತರಹ ಮಾತಿದೆ.

'ಗರತಿಯ ಬಯಸಿದ ದುರುಳ ಕೀಚಕ
ಏನಾದ ಏನಾದ ಏನಾದನೊ?'

ಎಂಬ ಹುಸಿ ಪ್ರಶ್ನೆಯ ನಂತರ

'ಮೂಢಾ, ಗೊತ್ತಿದ್ದರ ಬಾಯಿ ಬಿಡತಿ:
ಇಲ್ಲದಿರಕ ಹೇಳು, ಕಳಿಸುವೆನು
ಸುಪ್ರೇಮ ಕಾಣಿಕೆಯಾಗಿ ಭಾರತದ ಕ್ಯಾಲಿಕೊ ಪ್ರತಿ' ಎನ್ನುತ್ತಾರೆ.

ಇಷ್ಟರಲ್ಲಾಗಲೇ ಈ ದೇಶಭಕ್ತಿಯ ಇನ್ನೊಂದು ಮುಖ ನಮಗೆ ತೆರೆದುಕೊಳ್ಳತೊಡಗಿದೆ. ಈ ದೇಶವನ್ನು ಗೆದ್ದು ಮಾನಗೆಡಿಸಿದ್ದರ ಇತಿಹಾಸವನ್ನು ಸೂಚಿಸುತ್ತ ಈ ದೇಶದ ಬಗೆಗಿನ ಭಾವೋದ್ವೇಗಗಳ ಗ್ರಹಿಕೆಯನ್ನು ಕೂಡ ಒಟ್ಟಿಗೇ ಕೊಡುತ್ತಾ ಹೋಗಿ ಕೇವಲ ದಟ್ಟತನವನ್ನು ಸಾಧಿಸಿದೆ. ಈ ರಾಷ್ಟ್ರ ಕುರಿತ ಕಾವ್ಯಾತ್ಮಕ ವಿಮರ್ಶೆ ಕೊಡುವುದು ಈ ಕಾವ್ಯದ ಸಾಧನೆ. ದೇಶಪ್ರೇಮಿಗಳ ಲಬೊ ಲಬೋ ಪ್ರದರ್ಶನಗಳ ಹಿಂದಿನ ಈ ದೇಶ ಕುರಿತ ಸತ್ಯ ನಮ್ಮನ್ನು ಕಣ್ಣಿಟ್ಟು ನೋಡುತ್ತದೆ. ದೇಶಭಕ್ತಿ ಗೀತೆಯಂಥ ಒಂದು ಪ್ರಚುರ ಪ್ರಕಾರ ಹಿಡಿದುಕೊಂಡು ಅದಕ್ಕೆ ಮೀರಿದ್ದನ್ನು ರೂಢಿಸಿಕೊಳ್ಳುವುದು ಚಂದ್ರಶೇಖರ ಕಂಬಾರರ ರೀತಿಯನ್ನು ತೋರುತ್ತದೆ.

'ಮರೆತೇನಂದರ ಮರೆಯಲಿ ಹೆಂಗಾ' ಕವನ ನೇರವಾಗಿ 'ಮಾವೋನ ಶಕ್ತಿ ಮತ್ತು ದುಷ್ಟತನ ವನ್ನು ವರ್ಣಿಸುತ್ತದೆ. ಮೋಸ ಮಾಡಿ ಹೋದ ತಮ್ಮ ದೊಡ್ಡ ನಾಯಕನೋ ಎಂಬಂತೆ ಅವರ ಶಕ್ತಿ ಯುಕ್ತಿಯನ್ನು ಕುರಿತು ಹಾಡುತ್ತಾರೆ. 'ಸಹರಾಚರಗಳ ರಚನೆ ಮಾಡೂದಕ ಬೇರೊಬ್ಬ ಸೂರ್ಯನ ತರತೀನಂದಿ' ಎಂದೂ 'ಕಣ್ಣೀರಿನ ಹೊಳಿಗಡ್ಡ ಕಟ್ಟಿದಿ, ಹರಿವ ನೆತ್ತರಕ ಒಡ್ಡ ಕಟ್ಟಿದಿ' ಎಂದೂ 'ಸ್ವಯಂ ಸೂರ್ಯ ನಾ ಬಂದೇನಂದಿ' ಎಂದೂ ಹೇಳುವಾಗ ಹೊಮ್ಮುವ ಮಾವೋ ಪ್ರತಿಭೆಯು, ಒಳ್ಳೆಯತನ, ಕೆಟ್ಟತನದ ಮಿಶ್ರಣದ ಅಹಂಕಾರದ ದ್ವಂದಮಯ ಚಿತ್ರಣ ಗಮನಿಸಬಹುದು, ಕೇವಲ ಓದಿಸಿಕೊಳ್ಳುವ ಕಾವ್ಯವಾಗಿದ್ದರೆ ಉಂಟಾಗಬಹುದಾಗಿದ್ದ ಕ್ಷುಲ್ಲಕ ಜಾಣತನ ಇಲ್ಲಿ ಒಂದು ದ್ವಿಮುಖಿ ಶಕ್ತಿಯು ವರ್ಣನೆಯಾಗುವುದು ಲಾವಣಿಯ ಧಾಟಿಯಿಂದ.

ಮೇಲಿನದು ಚಂದ್ರಶೇಖರ ಕಂಬಾರರ ಗ್ರಹಿಕೆಯ ವೈಶಿಷ್ಟ್ಯವನ್ನು ಕೂಡ ತೋರುತ್ತದೆ. ಕವಿ ತಾನು ಜಗತ್ತನ್ನು ತನ್ನ ಬುದ್ಧಿಯಿಂದ ಅಳೆಯುತ್ತಲೆ ಆದ ಅನುಭವವನ್ನು ಕಾವ್ಯವಾಗಿ ಕಂಡ ರಿಸಬಲ್ಲ ಮೂಲಭೂತವಾಗಿಕ ನೈತಿಕ ಪ್ರಜ್ಞೆಯುಳ್ಳ ಮನುಷ್ಯನೋ ಅಥವಾ ತನ್ನ ಭಾವನೆಗಳ ತುಯ್ದಾಟದಲ್ಲಿ ಸಿಕ್ಕು ಈ ಡೋಲಾಯಮಾನದ ವೈಚಿತ್ರ್ಯ ಮಂಡಿಸುತ್ತಾ ನೀತಿಯ ಗೆರೆ ಮೀರಿ ಗೂಢಗಳನ್ನು ಕಾಣಬಲ್ಲವನೋ - ಎಂದು ನಿರ್ಧರಿಸಿಕೊಳ್ಳಬೇಕಾಗುತ್ತದೆ. ಲೇಡಿ ಮ್ಯಾಕ್‌ಬೆತ ಳನ್ನು ಆರಾಧಿಸುವ ಬೋದಿಲೇರ್, ಸೇಟನ್ನನ ಗೋಪ್ಯಕ್ಕೆ ಈಡಾಗುವ ಮಿಲ್ಟನ್, ಕ್ರೇಜಿ ಜೇನ್‌ಳ ಹುಚ್ಚಿಗೆ ಮರಳಾಗುವ ಏಟ್ಸ್ ಒಂದನೆಯ ಗುಂಪನ್ನು ಪ್ರತಿನಿಧಿಸಿದರೆ ಸ್ಪಷ್ಟ ಕಾಣ್ಕೆ ಯಾಗಿ ಶೋಧಿಸುವ ವರ್ಡ್ಸ್‌ವರ್ತ್ ಮತ್ತು ಎಲಿಯಟ್ ಎರಡನೇ ತಂಡವನ್ನು ಪ್ರತಿನಿಸುತ್ತಾರೆ. ನಮ್ಮ ಡಾ. ಚಂದ್ರಶೇಖರ ಕಂಬಾರರು ಗಾಂಧೀಜಿ ಕುರಿತು ಬರೆಯುವುದು ಕಷ್ಟ. ಅವರಿಗೆ ಮಾವೋನ ಸೇಟನಿಕ್ ಶಕ್ತಿ ಬೇಕು. ತಣ್ಣಗೆ ಹುಡುಕುತ್ತ ಹೋಗುವುದಕ್ಕೆ ಬದಲು ಹಾಡುತ್ತಾ ಕುಣಿಯುತ್ತಾ ಒಗಟುಗಳಲ್ಲಿ ಮಾತಾಡುತ್ತಾ ಹೋಗುವ ಶೈಲಿ ಬೇಕು. ಹೀಗೆ ನೋಡಿದರೆ ಚಂದ್ರ ಶೇಖರ ಕಂಬಾರರು ನಮ್ಮ ಅಕ್ಷರಸ್ಥ ಮಧ್ಯಮ ವರ್ಗಕ್ಕೆ ಬಂದು ಭಾವನೆಗಳ ಹುಚ್ಚು ಅಲೆಯನ್ನು ಎಬ್ಬಿಸಲು ಸಾಧ್ಯವಾದದ್ದು ದೊಡ್ಡ ಸಾಹಸದ ಕೆಲಸ. ಪಶ್ಚಿಮದ ಮಧ್ಯಮ ವರ್ಗಕ್ಕೆ ಸುಮಾರು ನಾನೂರು ವರ್ಷದ ಚರಿತ್ರೆ ಇದೆ. ಆ ವರ್ಗದ ಶೂನ್ಯತೆ, ಭಾವರಾಹಿತ್ಯ ಮತ್ತು ಬೇಸರವನ್ನು ಹೋಗಲಾಡಿಸಲು ನಡೆದ ಸಾಹಿತ್ಯ ಮತ್ತು ಸಾಹಿತ್ಯೇತರ ಪ್ರಯತ್ನಗಳಿವೆ. ಆದರೆ ನಮ್ಮಲ್ಲಿ ಕೆಲವೇ ದಶಕಗಳಲ್ಲಿ ಈ ಮಧ್ಯಮ ವರ್ಗ ತನ್ನ ನಿಷ್ಕ್ರಿಯತೆಯ ತೆಳು ಸ್ಥಿತಿಯಿಂದಲೇ ನಾಶ ವಾಗುವ ಸಾಧ್ಯತೆಯಿದೆ. ಈ ಸಸ್ಯಹಾರ - ಸಿನಿಮಾ - ವಾಕ್‌ಗಳ ಸಮಾಜಕ್ಕೆ ಕಂಬಾರರು ತಮ್ಮ ಉತ್ಪ್ರೇಕ್ಷೆಯಿಂದ ತುಂಬು ಗಂಟಲ ಅಭಿವ್ಯಕ್ತಿಯಿಂದ ಈ ಬದುಕಿನಾಳದ ಅಥವಾ ನೆನಪಿನಲ್ಲುಳಿವ ಶಕ್ತಿಗಳ ಆರಾಧನೆಯಿಂದ ತೀವ್ರತೆ ಕಲ್ಪಿಸಿ ಕೊಡುತ್ತಾರೆ.

ಇವರ ಸಮೂಹ ಧೋರಣೆ ಮತ್ತು ಜನಸಾಮಾನ್ಯರ ಸ್ತರದ ಗ್ರಹಿಕೆಯ ಬಗ್ಗೆ ಆಗಲೇ ಹೇಳಿದ್ದೇನೆ. ಮೇಲಿನ ಮೂರನ್ನು ಒಟ್ಟಿಗಿಟ್ಟು ನೋಡುವಾಗ ಕಂಬಾರರು ತಮ್ಮ 'ಹೋರಿ', 'ರಾಮಾಯಣವೂ ಗೋದೂತಾಯಿಯೂ' ಮುಂತಾದ ಕವನಗಳಲ್ಲಿ ಕಾವ್ಯತ್ವ ಹೊಮ್ಮಿಸುವ ಬಗೆ ನೋಡಬೇಕು. ಕಂಬಾರರ ಕವನಗಳಲ್ಲಿ ಬಹಳ ಸಲ ಹೋರಿ ಮತ್ತು ಕುದುರೆಯ ಸಂಕೇತ ಕಾಣಿಸಿಕೊಂಡಿದೆ. ಹೋರಿ ಯೌವನದ ಹತೋಟಿ ಮೀರಿದ ಶೌರ್ಯವನ್ನು ತೋರಿದರೆ ಕುದುರೆ ನೇರವಾಗಿ ಶಕ್ತಿ ಮತ್ತು ಸ್ತ್ರೀಯಾಗಿ ಕಾಣಿಸಿಕೊಳ್ಳುತ್ತದೆ. 'ಕಟ್ಟಿರುವ ಕಣ್ಣ ಹರಕೊಂಡು ಡುರಕೀ ಹೊಡೆದು ಹಿಡಿಯ ಬಂದಣ್ಣಗಳ ಕೊಸರಿ ಕೈಮೀರಿ ಹೋಗುವ' ಈ ಹೋರಿಯ

ಚಿತ್ರಣ ಮೊದಲ ಭಾಗದ್ದು. ಇದರ 'ಬೆಂಕಿ ಮೈ ತುಂಬಾ ಬಾಯಿ' 'ಸಿಕ್ಕಷ್ಟನ್ನು ಸಿಕ್ಕಲ್ಲಿಗಪಾ ಗಪಾ ತಿಂತಾನೆ' ಮುಂತಾದುವನ್ನು ಹೇಳಿದ ಮೇಲೆ ಮನುಷ್ಯನ ಚಿತ್ರಣಕ್ಕೆ (ಎರಡನೆಯ ಭಾಗದಲ್ಲಿ) ಬರುತ್ತಾರೆ. ಯೌವನದ ಎಲ್ಲ ಬಣ್ಣ ಬೆರಗು ಇಲ್ಲಿ ಹುಚ್ಚುಹುಚ್ಚಾಗಿ ರೂಪತಾಳಿವೆ. 'ಸೀರೆ ಉಟ್ಟದ್ದೆಲ್ಲ ಜೀವಂತ ಉದ್ರೇಕವಾಗಿ' ಮುಗಿದ ಮೇಲೆ ಈ ಎಲ್ಲದರ ಫಲಿತಾಂಶವಾಗಿ ಪ್ರಕೃತಿಯನ್ನು ಹಿನ್ನೆಲೆಯಾಗಿಟ್ಟುಕೊಂಡು ಸಮಾಧಾನದ ತೀರ್ಮಾನಗಳಿಗೆ ಬರುತ್ತಾರೆ. 'ಸಾವುಗಳ ಸತ್ತ ಬೆರಗಿನಲಿ,ಹಸುರಿನನಂತ, ಲೀಲೆಯದು ಹುಡುಗಿ ಬಾ ಒಡೆದೆನೊಡಪ'

ಈ ಯೌವನ ಮತ್ತು ಈ ಬೆರಗು ಇವರ ಕುದುರೆಯ ಸಂಕೇತಗಳಲ್ಲೂ ಬರುತ್ತದೆ. 'ಕಾಡ ಕುದುರೆ ಓಡಿ ಬಂದಿತ್ತ' ಎಂಬುದು ನಿಸರ್ಗದಿಂದ ಎದ್ದು ಬಂದ ಶಕ್ತಿ ಹೇಗೆ ಮಾನವ ಕಟ್ಟಿಕೊಂಡ ಸಮಾಜದಲ್ಲಿ ಮುಗಿಯದ ಅಲೆಗಳನ್ನು ಎಬ್ಬಿಸಬಹುದು ಎಂಬುದನ್ನು ವರ್ಣಿಸುತ್ತದೆ. 'ಹೊತ್ತಿ ಉರಿಯೋ ಕೇಶರಾಶಿ ಕತ್ತಿನಾಗ ಕುಣೀತಿ'ದ್ದರೆ 'ಮೈಯ ಬೆಂಕಿ ಮಿರಗತಿತ್ತು' ಇಂಥದ್ದೊಂದು ಕುದುರೆಯ ಕತೆಯನ್ನು ಜಾನಪದ ನೀತಿಕತೆಯಾಗಿ 'ಕುದುರೇಸಿದ್ದ'ದಲ್ಲಿ ಹೇಳಿದ್ದಾರೆ. ದೇವರು ಕೊಟ್ಟ ಶಕ್ತಿಯ ಬಗ್ಗೆ ದುರಾಶೆ ಹೊಂದಿದ ಸಿದ್ದ, ಪಟ್ಟ ಪಾಡು ಈ ಕತೆಯಲ್ಲಿದೆ. ಇದರಲ್ಲಿ ಕುದುರೆ ಕೊಟ್ಟು ಹೋದ ಬಾವಾನ ವರ್ಣನೆ (ಕಾಡನ್ನೆ ಮಡಿಮಾಡಿ ಮುಡಿಗಿ ಸುತ್ತಿದ ಹಾಂಗ ಹೆಡಿಗಿ ರುಂಬಾಲೇನ ದಸರಾ) ಮತ್ತು ಕುದುರೆಯನ್ನು ಬಾವ ಹಣ್ಣಿಗೆ ಹೋಲಿಸುವುದು (ಕುಡಿಹುಬ್ಬ ಹಾರಿಸಿ ಹೆಣ್ಣೆಂದರೇನಂದಿ? ಹೆಣ್ಣ ಕುದುರಿಗಿ ಸಮನಂದಾ'

ಹುಡಿಗೇರ ಮೈ ಚಂದ ತುಳುಕುವ ಹರೆ ಚಂದ
ಹರೆಯ ಮಾರುವ ನಗೆ ಚೆಂದ
ಸೊಂಟSದ ಬೆಂಕೀಗಿ ಬಿಡುಮುಡಿಯ ಹೊಗಿ ಚೆಂದ
ಜೋಲಾಡೊ ಜ್ವಾಲೀಯ ಚೆಂದ.

ಎನ್ನುವ ಮುದುಕನ ಮಾತುಗಳು ಚೆನ್ನಾಗಿವೆ. ಆದರೆ ಒಟ್ಟಾರೆ ಕವನ ಆಡಿದ ಮಾತಿಗೆ ತಪ್ಪಬಾರದು ಮತ್ತು ದೇವರು ಕೊಟ್ಟದ್ದರ ಬಗ್ಗೆ ದುರಾಶೆ ಪಡಬಾರದು ಎಂಬುದನ್ನಷ್ಟೇ ಪರಿಸರಕ್ಕೆ ಹೇಳುವಂತೆ ಕಾಣುತ್ತದೆ.

ಇವರ ನಗರ ಜೀವನದ ಬಗ್ಗೆ ಬರೆದ ಕಾವ್ಯಗಳ ಕ್ರಿಯೆಯನ್ನು ಮೇಲಿನ ಶಕ್ತಿಗಳ ಆರಾಧನೆಯಿಂದ ಊಹಿಸಬಹುದು. ಮೂಲತಃ ತೆಳುವಾಗಿಯೂ ವಾಸ್ತವ ಸ್ವಪ್ನರಹಿತ ದೇಹವುಳ್ಳವೂ ಆದ ಪೇಟೆಯ ಅನುಭವ ಇವರ ಕಾಡ ಕುದುರೆಯ ಪ್ರವೇಶ ಮಾತ್ರದಿಂದಲೇ ಛಿದ್ರಗೊಂಡು ಅಸಂಗತವಾಗುವ ಮೂಲಕ ತಮ್ಮ ಕಾವ್ಯ ಕರ್ತವ್ಯ ನಿರ್ವಹಿಸುತ್ತವೆ. ಕೆಲವು ಸಂಗತಿಗಳಲ್ಲಿ 'ಏಳು ಸುತ್ತಿನ ಕೋಟೆ' ನೆನಪಿಗೆ ತರುವ 'ದೇವರ ಬಂಗಾರದ ಕುದುರೆ' ತರುಣ ಅಧ್ಯಾಪಕನೊಬ್ಬನ ದೃಷ್ಟಿಯಿಂದ ಹೆಣ್ಣಿನೊಂದಿಗಿನ ಪ್ರಣಯದ ಘಟ್ಟಗಳನ್ನು ಬಣ್ಣಿಸುವುದಕ್ಕೆ, ಜನ್ಮನ ಭಾವಾವಳಿಗಳ ಆಸರೆ ಪಡೆಯುತ್ತದೆ. ಕುದುರೆಯಾದ ಹೆಣ್ಣಿನೊಂದಿಗೆ ಅನುಭವಗಳ ಮಜಲುಗಳನ್ನು ಆಕ್ರಮಿಸುತ್ತ ಹೋಗುವ ಗಂಡು ಇಲ್ಲಿ ತನ್ನ ಪ್ರಯಾಣ ಹೇಳುತ್ತಾನೆ. 'ರಾವ್' ಹೇಳಿದ್ದು ನಮ್ಮ ಜನಪದ ಕವಿ ಚಪ್ಪಲಿ, ಬೂಟಿನಂಥ ವಿಷಯ ಎತ್ತಿಕೊಂಡು ಹೇಗೆ ಹಾವು ಮತ್ತು ಹಗ್ಗದಂಥ ಆಟ ಆಡಬಲ್ಲರೆಂಬುದನ್ನು ತೋರುತ್ತದೆ. 'ಸ್ವಲ್ಪ ವಿಸ್ತಾರ ಬಾಯಿ' ಗೋದೂ ತಾಯಿಗೆ ಅಕ್ಷರ ಜ್ಞಾನವಿಲ್ಲ ಆದರೆ ರಾಮಾಯಣದಿಂದ ನೀತಿ ಹೊರಡಿಸುವ ಈಕೆ ಅದೇ ರಾಮಾಯಣದ ಪ್ರತಿಯಲ್ಲಿ ನಿರೋಧ್ ಇಟ್ಟುಕೊಂಡಿದ್ದಾಳೆ. ಅವಳ ಪ್ರೇಮಿಗಳಾರು ಎಂಬುದು ಸ್ಪಷ್ಟವಾಗ

ದಿದ್ದರೂ ಮಗ ಮತ್ತು ಅವನ ಹೆಂಡತಿಯ ನಡುವೆ ಭೂತಾಕಾರವಾಗಿ ನಿಲ್ಲುತ್ತಾಳೆ. ಸೊಸೆಯ ಬಲಿ ತೆಗೆದುಕೊಳ್ಳುತ್ತಾಳೆ. ನಮ್ಮ ನಾಗರಿಕ ಸಮಾಜದ ಹುಸಿ ನೈತಿಕತೆಯ ಬಗ್ಗೆ ಕಂಬಾರರ ಭಾಷ್ಯ ಈ ಕಾವ್ಯ. ಈ ಹುಸಿ ನೈತಿಕತೆಯನ್ನು ಸ್ಥಾಪಿಸುವುದೂ ಅನ್ನಿಸಿಕೆ ಹೋಲಿಕೆಗಳ obsurdity ಯನ್ನು ಚಾಚಿಡುವುದರ ಮೂಲಕ. 'ಇಬ್ಬರ ತಕರಾರಿಗೆ ಹುಟ್ಟಿ ಹಲವಾರು ತಕರಾರಿನಲ್ಲಿ ಬೆಳೆದವರ' ಬಗ್ಗೆ ಇರುವ 'ತಕರಾರಿನವರು' ಪದ್ಯ ಹಂದರಕ್ಕೆ ಈ obsurdity ಯನ್ನು ಬಳಸುತ್ತದೆ.

'ತಕರಾರನುಟ್ಟು ತಕರಾರ ತೊಟ್ಟು
ಮುಸಡಿಗೆ ತೆರೆಗಣ್ಣು ಕಿಸಬಾಯಿ
ಜೋಡಿಸಿ ನಕ್ಕು
ಪುರಾತನದ ಹರಾಮತನದ
ಮನುವಿಗೆ ಕಟ್ಟಡದ ಮೈಸಿರಿಗೆ...
ತಕರಾರು ತೆಗೆದವರು'

ಎಂದಿರುವ ಈ ಕಾವ್ಯದ ಪದಗಳ ಜೋಡಣೆ ಮತ್ತು ಅನ್ನಿಸಿಕೆಯ ವಿರೋಧ ಸೃಷ್ಟಿಸುವ ವಿನೋದ ನೋಡಬಹುದು. ಪ್ರತಿಮೆ ಮತ್ತು ಮಾತುಗಳ ಮಿತಿಯುಳ್ಳ ಈ ಲೋಕದ ಅನೇಕ ಅನ್ನಿಸಿಕೆಗಳು ಕೇವಲ ದುರಂತ ಅಥವಾ ಕೇವಲ ತಮಾಷೆಯ ಶೈಲಿಯಲ್ಲಿ ಹೇಳಲು ಸಾಧ್ಯವಾಗದಿದ್ದಾಗ ಉಂಟಾಗುವ obsurdity ಇದು. ಅಥವಾ ಶ್ರೀಮಂತವೂ ಸ್ಥಿರವೂ ಆದ ಬದುಕು ಅಭಿವ್ಯಕ್ತಿಯ ಚಿರಗುಗಣ್ಣಿನ ಮುಗ್ಧ ಕವಿಯನ್ನು ನಾಗರಿಕ ಜಗತ್ತಿನ ವಿರೋಧಾಭಾಸಗಳಿಗೆ ಒಡ್ಡಿದಾಗ ಬರುವ obsurdity ಇರಬಹುದು. ಕಂಬಾರರ ಎಲ್ಲ ನಗರ ಜೀವನ ಕುರಿತ ಕವನಗಳಲ್ಲೂ ಈ ವಾಸ್ತವತೆ ಮೀರಿದ ಕಾವ್ಯಕ್ರಿಯೆ ಮತ್ತು ರೂಪಿಸುವಿಕೆ ಕಂಡುಬರುತ್ತದೆ.

ಹುಸಿ ಸಮಾಜವಾದಿಗಳು ಕಂಬಾರರಲ್ಲಿ ಸಾಕಷ್ಟು ಸಾಮಾಜಿಕ ಪ್ರಜ್ಞೆ ಇಲ್ಲವೆಂದೂ ನಾಸ್ಟಾಲ್ಜಿಯಾ ಮಾತ್ರ ಇದೆಯೆಂದೂ ಹೇಳುವುದನ್ನು ಕೇಳಿದ್ದೇನೆ. ನಿಜ. 'ಕರಿಮಾಯಿ' ಕಾದಂಬರಿಯಂತೆಯೇ 'ಹೇಳತೇನ ಕೇಳ' ಕಾವ್ಯ ಕೂಡ ಕಣ್ಮರೆಯಾದ ಒಂದು ಸ್ಥಿರ ಜಗತ್ತನ್ನೂ, ಸ್ಥಿರ ಸಂಬಂಧಗಳನ್ನೂ ತೋರುತ್ತದೆ. ಆಧುನಿಕ ಚಟುವಟಿಕೆಗಳಿಂದಾಗಿ ಕದಡಿಹೋದ ಸುಂದರ ಲೋಕವನ್ನು ನೆನೆಸುತ್ತದೆ. ಕವಿಗಳು ಯಾವಾಗಲೂ ಸಂಪ್ರದಾಯ ಪ್ರಿಯರು ಎನ್ನುವುದನ್ನು ಮರೆಯದಿರೋಣ. ನಾಲ್ಕನೇಯ ಆಯಾಮ ಬರತೊಡಗಿದೊಡನೆ ಕವಿ ವಾಸ್ತವದ ಬಾಹ್ಯ ಪರಿವರ್ತನೆಯ ಸ್ತರ ಬಿಡತೊಡಗುತ್ತಾನೆ. ಎರಡನೆಯದಾಗಿ ಈ 'ಸಾಮಾಜಿಕ ಪ್ರಜ್ಞೆ' ತೋರುವಲ್ಲಿ ಕವಿಗೆ ಹಲವು ವಿಧಾನಗಳಿವೆ. ಆತ ನಾಗರೀಕನಾಗಿ ಉದ್ದೇಶಪೂರ್ವಕವಾಗಿ ಹೇಳಿದ್ದಕ್ಕೆ ವ್ಯತಿರಿಕ್ತವಾದ ಆತನನ್ನು ಮೀರಿದ ಕ್ರಿಯೆ ಕೆಲಸ ಮಾಡತೊಡಗುತ್ತದೆ. ಕಾದಂಬರಿಗಳಲ್ಲಿ ಕೂಡ ಇದು ಹೀಗೇ ಇದೆ. ಕಾನ್ ಗ್ರೀವನ ಸುಸಂಸ್ಕೃತ ಕಥಾವಸ್ತುಗಳ ಕೃತಿಗಳೂ ಬಾಲ್ಜಾಕನ ಮೇಲ್ವರ್ಗವನ್ನು ಆರಾಧಿಸುವ ಪುಸ್ತಕಗಳೂ ಉಚ್ಚವರ್ಗವನ್ನು ಎಷ್ಟು ಹಚ್ಚಿಕೊಂಡಂತೆ ಕಾಣಸುತ್ತವೆ ಎಂದರೆ ಆ ವರ್ಗಗಳ ಪತನ ಅವರಿಗೆ ಗೋಚರಿಸದಂತೆಯೇ ಆಗಿರುತ್ತದೆ. ಆ ವರ್ಗವನ್ನು ಅವರು ಪ್ರೀತಿಸುವುದರಿಂದಲೇ ಅವುಗಳಲ್ಲಡಗಿದ ವಿಘಟನಾ ಬೀಜಗಳನ್ನು ಕೂಡ ಅವರ ಮನಸ್ಸು ನಮಗೆ ತೋರಿಸುತ್ತದೆ. ಆದ್ದರಿಂದಲೇ ಎಂಗಲ್ಸ್ ಒಂದು ಸಲ ಕಮ್ಯುನಿಸ್ಟರು ಜೋಲಾನಂಥ ಎಡಪಂಥೀಯ ವಾಸ್ತವವಾದಿಗೆ ಬದಲು ಶ್ರೀಮಂತ ಜಗತ್ತಿನ ಸೋಲು ತೋರುವ

ಬಾಲ್ಜಾಕನ ಕೃತಿಗಳನ್ನು ಓದಬೇಕು, ನಮ್ಮ ಕಂಬಾರರು ಪ್ರೀತಿಸುವುದು ಸುಂದರ, ಸುಖದ 'ಹಸಿರು ಸತ್ಯದ' ಜಗತ್ತು ಮತ್ತು ಹಳ್ಳಿಯ ತಲತಲಾಂತರದ ಬದಲಾವಣೆ ಕಾಣದ ಬದುಕು. ಗೌಡ, ಗೌಡತಿ, ಅವರ ಮಗ ರಾಮಗೊಂಡ ಮತ್ತು ಹಳ್ಳಿಯ ಜನಸಾಮಾನ್ಯರು ಎಷ್ಟು ಸುಂದರವೂ ಪ್ರಕೃತಿನಿಯಮಬದ್ಧವೂ ಆಗಿ ಬದುಕುತ್ತಿದ್ದಾರೆಂದರೆ ನಿಜಕ್ಕೂ ಮನುಷ್ಯ ಮನುಷ್ಯನೇ ಆಗಿದ್ದರೆ ಈ ಸೌಖ್ಯದಲ್ಲೇ ಅದರ ಅಳಿವು ಕೂಡಾ ಇರುವುದು ತಿಳಿಯುತ್ತದೆ. ಅಂದರೆ ಎಲ್ಲ ಬದುಕಿನ ಧರ್ಮ ಬದಲಾವಣೆ, ಈ ಬದಲಾವಣೆಯನ್ನು ಕವಿ ಇಷ್ಟಪಡದೆ ಇರುವಾಗ ಸಹ, ಬೇಟೆಗೆ ಹೋದ ಗೌಡ ರಾಕ್ಷಸನಾಗಿ ಹಿಂರುಗುವ ಮುಂಚೆ ಬರುವ ಶಕುನಗಳು, ಗೌಡನಲ್ಲಾಗುವ ಬದಲಾವಣೆ ಸೂಚಿ. ಆತ ಒಂದು ಹಳ್ಳಿಯಲ್ಲಿ ಮಾಡುವ ಸುಧಾರಣೆ ಒಂದು ಕಡೆ ಸುಖಕ್ಕೆ, ಇನ್ನೊಂದು ಕಡೆ ಅನೈಸರ್ಗಿಕತೆಗೆ ಸೂಚಿ. ಸ್ಥಗಿತ ಕೇಂದ್ರದಿಂದ ಕವಿ ಎಲ್ಲವನ್ನೂ ನೋಡುತ್ತಿರುವುದರಿಂದ ಈ ಪರಿವರ್ತನೆಯಲ್ಲಿ ಎಲ್ಲಾ ಬದಲಾವಣೆಯಲ್ಲಿರುವಂತೆ ನೋವು ಮತ್ತು ದುರಂತವಿದೆ. ಇನ್ನೊಂದು ದೃಷ್ಟಿಯಿಂದ ನಾವು ನೋಡಿದರೆ ಈ ಕಾವ್ಯದ ನಿಗೂಢತೆಯ ಆಳದಲ್ಲಿ ಎಲ್ಲ ಬೆಳೆವ ಸಮಾಜ ತೋರುವ ಪ್ರಗತಿ ಇದೆ. ಕಂಬಾರರ ಸಾಮಾಜಿಕ ಪ್ರಜ್ಞೆ ನೋಡ ಬಯಸುವವರು ಇಲ್ಲಿ ರಾಜಕೀಯ ಧೋರಣೆ, ಸ್ಲೋಗನ್‌ಗಳಿಗಾಗಿಯಾಗಲಿ ಆಧುನಿಕ ಸಲಕರಣೆಗಳಿಗಾಗಿಯಾಗಲಿ ಹುಡುಕಿದರೆ ನಿರಾಶರಾಗುತ್ತಾರೆ. ಕವಿಯ ಜಗತ್ತು ಸದಾ ಪರಂಪರೆಯನ್ನು ಆರಾಧಿಸುವ ಜಗತ್ತಾಗಿರುವಂತೆಯೇ ಕಳೆದ ಮುಗ್ಧತೆಗಾಗಿ ಅರಸುವ ಕ್ರಿಯೆ ಕೂಡಾ ಹೌದು. ಕಂಬಾರರು ಕೆಲವು ವೇಳೆ ಕಂಡ ಅಥವಾ ಕಂಡೆನೆಂದು ತಿಳಿದ ಆದರ್ಶಲೋಕ ಕೊನೆಗೂ ದೊರೆಯುವುದು ಈತನ ಕಲ್ಪನೆಯಲ್ಲಿ. ಆದ್ದರಿಂದಲೇ ಈತ ವಾಸ್ತವಕ್ಕೆ ಧುರಕಿ ಹೊಡೆದಂತೆಲ್ಲ ಕಳೆದ ಆ ಸೌಷ್ಠವದ ಲೋಕದ ಬಗ್ಗೆ ದುಃಖಿಯಾಗುತ್ತಾನೆ. ಇನ್ನೊಂದರ್ಥದಲ್ಲಿ ವೈಯಕ್ತಿಕವಾಗಿ ಸೌಷ್ಠವಾದ ಲೋಕ ಕಳೆದದ್ದರ ಬಗ್ಗೆ ದುಃಖಿಯಾಗುತ್ತಾನೆ. ಈ ವಾಸ್ತವ, ಆದರ್ಶದ ನಡುವಿನ ಕೇಂದ್ರದಲ್ಲಿ ಕಂಬಾರರ ಸಾಮಾಜಿಕ ಪ್ರಜ್ಞೆ ದೊರೆಯುವುದು. ಕಂಬಾರರ ಈ ಪ್ರಜ್ಞೆಯನ್ನು ವಿಮರ್ಶಿಸಲು ಇವರೆಲ್ಲ ಜಾನಪದ, ನಾಗರಿಕ ಕವನಗಳನ್ನು ಒಟ್ಟಾಗಿಯೇ ನೋಡಬೇಕು.




ಚರಿತ್ರೆಯ ಜಾಡ ಆಚೆಗೆ

- ಶಶಿ ಸಂಪಳ್ಳಿ

ಇವಳೇ,
ಎಲಿಯಟ್ಟನ ವೇಸ್ಟ್‌ಲ್ಯಾಂಡಿನ
ಪ್ರಬುದ್ಧತೆಯ ಧಾರ್ಷ್ಟ್ಯದೆದುರು
ನಮ್ಮೂರ ಸಂಜೆಕಥೆಗಳ 'ಒಂದಾನೊಂದೂರು'
ಹೀಗೇ... ಮಾಸಿ ಹೋಗುತ್ತದೆನ್ನುವಾಗ
ಈ ಹುಚ್ಚನ ಕನಸುಗಳು ಬಂದುವು,
ಬಂದು ಎಲ್ಲ ಕೊಳಕು, ಕೊಳೆ, ಕೊಳಚೆಗಳಿಗೂ
ತನ್ನದೇ ಕುಂಚದಲ್ಲಿ
ಬಣ್ಣ- ಬಣ್ಣ- ಬಣ್ಣ ಬಳಿದು
ಕೇಸರಿ- ಬಿಳಿ- ಹಸಿರಾಗಿಸದೇನೇ
ಬಂದು ಚೆಂದ ತಂದುವು.
.... ಒಂದಾನೊಂದೂರು ವೇಸ್ಟಾಗಲಿಲ್ಲ.

★★★


ಆದರಿಲ್ಲೊಬ್ಬನ ನಾಯಿ ಮನ ದಶಕದಿಂದಲೂ
ನಿನ್ನೆಯ ಚಕ್ರ ತಿದ್ದುವವನ ಕೈಮೀರಿ, ಕಣ್ ಮೀರಿ
ಚರಿತ್ರೆಯ ಟೇಪು ಬಿಚ್ಚಿದರೆ...?
ಪಾಂಚಜನ್ಯವೆಂದು
ಭ್ರಮಿಸಿದವನ ಕೈಯಲ್ಲಿದ್ದುದು
ಒಂದಾನೊಂದೂರ ಹೊಸಯುಗದ
ಕಹಳೆಯೂದಲು ಹಾತೊರೆದವನ ಬಾಯಲ್ಲಿದ್ದ
ಜಾತ್ರೆಯ ಪೀಪಿ!
'ಎಲ್ಲ ಬಳ್ಳಿಗಳ ಕಿತ್ತೂ ಅಂತಸ್ಥನಾಗದೆ
ಹೊರ ಬರುವ ವಿದ್ಯೆ ಕಲಿಯಬೇಕು' ಎಂದೂದಿದರೆ
'ಯದಾಃ ಯದಾಹಿ ಧರ್ಮಸ್ಯ...
ಸಂಭವಾಮಿ ಯುಗೇ... ಯುಗೇ'. ಕೇಳುವುದು
ಚರಿತ್ರೆಯ ರೀಲಿನಲಿ.



ಅಗ್ರಹಾರ

ಇವಳೇ,
ಅಲ್ಲಿ ಒಂದಾನೊಂದೂರೇ ಇಲ್ಲವೇ?
ರೀಲು, ರಿಯಲ್‌ಗಳ ಒಂದಿಷ್ಟೂ
ಅಂತರ ತಿಳಿಯದೆ ಕಕ್ಕಾಬಿಕ್ಕಿಯಾದವರಿಗೆ

ಸತ್ಯ, ಸುಳ್ಳು, ಗಾಂಧಿ...
ಯಾರು?! ಎಲ್ಲಿ?
ಯುಗದ ಸಾರವ ಹರಳುಗಟ್ಟಿಸಿ
ಬುದ್ಧ ಗಾಂಧಿ, ರಾಮ,... ರಾಮ?
ಬುದ್ಧರಾಮ, ಗಾಂಧಿರಾಮ,... ರಾಮರಾಮಾ...
ಪಲ್ಲಕ್ಕಿ-ಪಾದುಕೆಗಳ
'ಮೆರವಣಿಗೆ ಮುಂದೆ,
ರಥ ಹಿಂದೆ,...
ಹಿಂದೆ,...
ಹಿಂದೆ,.....'





★★★

ಈಗ, ಇಲ್ಲದ ಒಂದಾನೊಂದೂರ ಕೇರಿಯ
ಗೂಡಂಗಡಿಯ ಬೈಟೂ
ಟೀನಲ್ಲಿ ಬಲೆಹಾಕಿ ಕನಸುಗಳ
ಹಿಡಿದವರ ನಡುವೆ
'ಮಧ್ಯಾಹ್ನ ಮಲ್ಲಿಗೆ'ಯ ಮುಡಿದವಳು
ಸಂಜೆ ಅಳಲೇಬೇಕೀಗ!
'ತೆಂಗು ಗರಿಗಳ ಬೀಸಿ ಕೈಬಾಚಿ ಕರೆದವಳ'
ಕೊನೆಗೂ ನಿನ್ನ
ಹೊಟ್ಟೆ ಚರಂಡಿಗೇ ಸೆಳೆದುಕೊಂಡು
ಹಸಿವ ಇಂಗಿಸುವ ಭರದಲ್ಲಿ
ಯೂರಿಯಾವನೆ ನುಂಗಿದ ಬಸುರಿ.
ಇವಳೇ
ನೀನೀಗಲೂ 'ಫಲವತ್ತಾದ ಕಪ್ಪು ನೆಲ'ವೇನೇ?
ಬಸಿರಿಳಿದವಳ ತವರಲಿ
ಇದ್ದಬದ್ದವರೆಲ್ಲ ಗಡ್ಡಧಾರಿಗಳಾಗಿ
ವಿಭೂತಿ-ವೀಸಾ!
ನಾಡಿ ಬಡಿತಕೂ ಕೆಂಪು-ಕೇಸರಿ ಲೇಬಲ್ ಇಲ್ಲಿ!
ಮತ್ತೊಂದರ ಕ್ಯಾಂಟೀನಿನ
ಬೈಟೂ ಟೀಗೆ
ನಮ್ಮ ಜೊತೆಗೂ ಬರುವ
ಇವಳೇ,
ಸದಾ ವತ್ಸಲೆ
ನಿಶ್ಚಿಂತೆಯ ನಿದ್ದೆಗೆ ಇನ್ನೂ ಎಷ್ಟು ದಿನ?

ಕಾವೇರಿ ನದಿ ನೀರಿನ ವಿವಾದ: ಒಂದು ವಿಶ್ಲೇಷಣೆ

■ ಸಪ್ನಾ ಕಟ್ಟಿ

ಈ ವರುಷ ಶ್ರೀರಂಗ ಪಟ್ಟಣದ ಕಬ್ಬು ಕಹಿಯಾಗಿ, ಕೊಡಗು ಬೆಡಗಿಲ್ಲದೆ ಬರಡಾಗಿದೆ. ಮುನಿದ ಮುಂಗಾರು ರೈತನಳಲು ಕೇಳದೆ ಗುಡುಗಿ ಮರೆಯಾದಾಗ ಉಳಿದಿದ್ದು ಕಾವೇರಿಯಾಸರೆಯೊಂದೆ. ಕನಲಿದ್ದ ಕಾವೇರಿಯೂ ಬತ್ತತೊಡಗಿ, ನಾಡೆಲ್ಲ ಹೊತ್ತು ಉರಿಯುವಾಗಲೇ ಕೇಳಿ ಬಂತು ತಮಿಳರ ಹಾಹಾಕಾರ; ಕರ್ನಾಟಕದ ಜಲಾಶಯಗಳೊಡಲು ಬಿಸಿಲಿಗೊಡ್ಡಿದರೇನು? ಎದೆಯುದ್ದ ಬೆಳೆದು ನಿಂತ ಪೈರು ಕಮರಿದರೇನು? ಕಾವೇರಿ ನೀರಲ್ಲಿ ತಮ್ಮ ಪಾಲು ಬೇಕೇಬೇಕೆಂಬ ತೇಂಕಾರ. ಕರ್ನಾಟಕದಲ್ಲಿ ಹುಟ್ಟಿ ಹೋಗಹೋಗುತ್ತ ತಮಿಳುನಾಡು, ಪಾಂಡಿಚೇರಿಗಳ ಸುತ್ತಿ ಕಡಲ ಸೇರುವ ಕಾವೇರಿಯ ಮೇಲೆ ಯಾರ ಹಕ್ಕು ಎಷ್ಟು? ಹದಿಮೂರನೆಯ ಶತಮಾನದಿಂದಲೂ ಹುಟ್ಟು ಹಾಕಿದ ಸಂಘರ್ಷವಿದು; ಕೇಶಿರಾಜನ ಶಬ್ದಮಣಿದರ್ಪಣದಲ್ಲೂ ಈ ವಿವಾದಕ್ಕೆ ಸಂಬಂಧಿಸಿದ ವಾಕ್ಯವೊಂದಿದೆ 'ಕಾವೇರಿಯ ಕಾಲನ್ ಆ ತಿಗುಳನೇ ಕಡಂಗೊಂಡನೋ ಬಡ್ಡಿಗೊಂಡನೊ - ಕಡವಾಗಿ ಕೊಟ್ಟಿದ್ದೊ, ಸಾಲವಾಗಿ ಕೊಟ್ಟದ್ದೊ ಬಲ್ಲವರಾರು? 1804ರಲ್ಲೂ ಹೇಮಾವತಿ ನದಿಯನ್ನು ಕಾವೇರಿಗೆ ಸೇರಿಸಿ ಮೈಸೂರಿಗೆ ಕುಡಿಯುವ ನೀರೊದಗಿಸುವ ನಾಲೆಯ ನಿರ್ಮಾಣಕ್ಕೆ ತಡೆಯೊಡ್ಡಿ ತಮಿಳು ರೈತರು ಸಲ್ಲಿಸಿದ್ದ ಅಹವಾಲು ತಿರಸ್ಕೃತವಾಗಿ, ಮೈಸೂರು ಸಂಸ್ಥಾನ ಜಯಗಳಿಸಿತ್ತು. ಆಗಿನ ಬ್ರಿಟಿಷ್ ಮದ್ರಾಸು ಸಂಸ್ಥಾನ ನಮ್ಮ ಸರ್ವೋಚ್ಚ ನ್ಯಾಯಾಲಯಕ್ಕಿಂತ ನಿಷ್ಪಕ್ಷಪಾತಿಯಾಗಿತ್ತೆನ್ನೋಣವೆ?

ಕರ್ನಾಟಕದ್ದು ನೀರು ಹಂಚಿಕೆ ವಿಷಯದಲ್ಲೆಂದೂ ಔದಾರ್ಯಪೂರ್ವ ನಡೆಯೆಂಬುದು ಗಮನಾರ್ಹ. 1990-91ರಲ್ಲಿ ನಿಗದಿತ ಪ್ರಮಾಣ (205 TMC)ಕ್ಕಿಂತ ಹೆಚ್ಚು ಅಂದರೆ ಸುಮಾರು 340 TMC, 92-93ರಲ್ಲಿ 282 TMC ನೀರು- ಹೀಗೆಯೇ ಸಾಗೀತು ಪಟ್ಟಿ ಸೆಪ್ಟೆಂಬರ್‌ನಲ್ಲಿ ಕಾವೇರಿ ನದಿ ಪ್ರಾಧಿಕಾರದ ಆದೇಶ ಮನ್ನಿಸಿ, ಎಸ್. ಎಂ. ಕೃಷ್ಣರು ನಿತ್ಯ 1.25 ಕ್ಯೂಸೆಕ್ಸ್ ನೀರು ತಮಿಳರಿಗೆ ಬಿಟ್ಟದ್ದೂ ದಿಟ. ಆದರೆ ನಿಸರ್ಗದ ವೈಪರೀತ್ಯವನ್ನೂ ಲೆಕ್ಕಿಸದೆ ನಿತ್ಯ 9 ಸಾವಿರ ಕ್ಯೂಸೆಕ್ಸ್ ನೀರು ಬಿಡಬೇಕೆಂಬ ಆದೇಶಕ್ಕೆ ಒತ್ತಾಯ ತಂದ ಜಯಲಲಿತಾರ ನಿಲುವು ವಿಷಾದನೀಯ. ನಿತ್ಯ 9 ಸಾವಿರ ಕ್ಯೂಸೆಕ್ಸ್ ನೀರು ಬಿಟ್ಟರೆ ತಿಂಗಳೊಪ್ಪತ್ತರಲ್ಲಿ ಬರಿದಾಗ[illegible] ನಮ್ಮ ಜಲಾಶಯಗಳ ತುಂಬಿಸುವರಾರು?

ಈ ಆದೇಶದ ಹಿನ್ನೆಲೆಯೇನು? ತಮಿಳುನಾಡಿನಲ್ಲಿ ಬಿ.ಜೆ.ಪಿ. ಹಿಡಿತದ ಹುನ್ನಾರವೆಷ್ಟು? ತಮಿಳುನಾಡಿಗಿರುವ ರಾಜಕೀಯ ಲಾಬಿಯ ಶಕ್ತಿ ಕರ್ನಾಟಕಕ್ಕಿಲ್ಲದಿರುವುದೆ? ಆದೇಶಕ್ಕುತ್ತರವಾಗಿ ಆರಂಭವಾದ ಹೈಟೆಕ್ ಕೃಷ್ಣರ ಹಠಾತ್ ಪಾದಯಾತ್ರೆ ಜಯಾ ವಿರುದ್ಧ ಸೋನಿಯಾ ಸಮರಕ್ಕೆ ಹಸಿರು ನಿಶಾನೆಯೆ? ರಾಜಕೀಯದ ಬಣ್ಣಕ್ಕೆ ನಿತ್ಯ ಕಸವಾಗುವ ಕಾವೇರಿಯ ಮಕ್ಕಳ ರೋದನ ಕೇಳುವವರಾರು?

ಇಂಗ್ಲೀಷಿನಲ್ಲಿ ಒಂದು ಮಾತಿದೆ: 'ಒಮ್ಮೆ ಕೊಟ್ಟ ರಿಯಾಯಿತಿ ಹಕ್ಕು ನಂತರ ತಕರಾರಿನತ್ತ ಸಾಗುತ್ತದೆ' ಎಂದು (ಕನ್ಸೇಶನ್ ಲೀಡ್ಸ್ ಟು ಕ್ಲೇಮ್ ದೆನ್ ಟು ಕಂಪ್ಲೇಂಟ್) ಅಂತೆಯೇ ಕರ್ನಾಟಕದಲ್ಲಿಯೇ ಹುಟ್ಟಿ 75 ಪ್ರತಿಶತಕ್ಕೂ ಹೆಚ್ಚು ಕರ್ನಾಟಕದಲ್ಲಿ ಹರಿದರೂ ನಮಗಿಂತ ಮೊದಲೇ, ನೀರಾವರಿಗದರ ಸಂಪೂರ್ಣ ಲಾಭ ಪಡೆದ ಜಾಣರಲ್ಲವೆ ತಮಿಳರು? ಜೀವನ ಪ್ರವಾಹದಂತೆ ಒಮ್ಮುಖವಲ್ಲವೆ ನದಿ ಪ್ರವಾಹವೂ? ಮೆಟ್ಟೂರು ಜಲಾಶಯಕ್ಕೆ ಒಮ್ಮೆ ಬಿಟ್ಟ ನೀರು, ಮಳೆ ಬಂತೆಂದು ಮರಳಿ ಪಡೆಯಲು ಸಾಧ್ಯವೆ? ಅಲ್ಲದೆ ತಮಿಳರಿಗೆ ನವೆಂಬರ್‌ನಲ್ಲಿ ಬರುವ ಹಿಂಗಾರಿನ ಕೃಪೆಯಲ್ಲಿ ಸಾಂಬಾ ಭತ್ತ ಬಿತ್ತುವ ಭರವಸೆಯಿದೆ, ಆದರೆ ಬೆಳೆದು ನಿಂತ ಪೈರಿಗೆ ನೀರುಣಿಸಬೇಕಾಗಿರುವ ಕನ್ನಡ ರೈತ, ನ್ಯಾಯಾಲಯದ ಈ ಆದೇಶಕ್ಕೆ ರೋಚ್ಚಿಗೆದ್ದು ಕಬಿನಿ ಜಲಾಶಯದಂತಹ ಆತ್ಮಾಹುತಿ ಪ್ರಸಂಗಗಳು ಹೆಚ್ಚಾದರೇನು ಅಸಹಜ? ಪ್ರಕೃತಿಯ ಸಹಜ ಕಾಲಾವಧಿಗೂ ಕಾಯದೆ, ತಮ್ಮದೇ ಜಲಾಶಯಗಳಲ್ಲಿ ಇಂದಿಗೂ ಶೇಖರವಿರುವ 38 TMCಗೂ ಹೆಚ್ಚು ನೀರನ್ನು ಬಳಸದೆ ಕಾವೇರಿಯ ಬೆಂಬತ್ತಿರುವ ಜಯಲಲಿತಾರ ವರ್ತನೆ ಖಂಡಿತವಾಗಿ ರಾಜಕೀಯ ಪ್ರೇರಿತ.

ತಮಿಳುನಾಡಿನ ರಾಜಕೀಯದ ಏಳುಬೀಳಿನ ಕರಿನೆರಳು ಕಾವೇರಿ ಸಮಸ್ಯೆಯನ್ನು ಉಲ್ಬಣಗೊಳಿಸುತ್ತಲೇ ಬಂದಿದೆ. ಕರುಣಾನಿಧಿಗಳು ತಮಿಳುನಾಡಿನ ಪ್ರಭಾವಶಾಲೀ ಮುಖ್ಯಮಂತ್ರಿಗಳಾಗಿದ್ದಾಗ (1989) ಅವರೊತ್ತಡಕ್ಕೆ ಮಣಿದೇ ರಚಿತವಾದ ಕಾವೇರಿ ನದಿ ಪ್ರಾಕಾರವದೆಷ್ಟು ನಿಷ್ಪಕ್ಷಪಾತಿಯಾದೀತು?

ಕುಡಿಯುವ ನೀರಿಗೂ ಕಾವೇರಿಯನ್ನೇ ಆಶ್ರಯಿಸಿರುವ ಮಂಡ್ಯ, ಮೈಸೂರು, ಬೆಂಗಳೂರುಗಳಿಗೆ ಸುಮಾರು 18 TMC ನೀರು, ಕಬ್ಬು ಬತ್ತದ ಬೆಳೆಗಳಿಗೆ ಸುಮಾರು 72 TMC, ಅಂದರೆ ಒಟ್ಟು 90 TMC ನೀರಿನ ಅವಶ್ಯಕತೆಯಿರುವ ನಮ್ಮಲ್ಲಿರುವುದು 67 TMC ನೀರು ಮಾತ್ರ! ನೀರು ಬಿಡುವ ಮುನ್ನ ಎರಡೂ ರಾಜ್ಯಗಳ ಜಲಾಶಯಗಳ ನೀರ ಒಳಹರಿವು, ಮಟ್ಟಗಳ ಪರಿಶೀಲನೆ ಅಗತ್ಯೆಂದು ಪ್ರಾಧಿಕಾರ ಸೂಚಿಸಿದಾಗ್ಯೂ, ಕರಾರುವಕ್ಕಾಗಿ ಅಭ್ಯಸಿಸಿ ಮಾಹಿತಿ ನೀಡುವರಾರು? ಮೂಲತಃ ಉಭಯ ರಾಜ್ಯಗಳ ಆಹಾರ ಸಮಸ್ಯೆಯಿದು; ಲಭ್ಯ ನೈಸರ್ಗಿಕ ಸಂಪನ್ಮೂಲಗಳ ಬಳಸಿ ಗರಿಷ್ಠ ಬೆಳೆ ಉತ್ಪಾದನೆಯತ್ತ ಹೆಜ್ಜೆ ಹಾಕದಿರುವುದಕ್ಕೆ ನುರಿತ ತಂತ್ರಜ್ಞರ ಕೊರತೆಯೂ ಕಾರಣವೆ? ತಮಿಳುನಾಡು ಕಳೆದವರ್ಷ ತಮ್ಮಲ್ಲಿ ಸಂಗ್ರಹವಾದ 277 TMC ನೀರನ್ನು ದುರ್ಬಳಕೆ ಮಾಡಿ 1.50 ಲಕ್ಷ ಎಕರೆ ಕುರುವೈ ಬೆಳೆಯನ್ನು ಅಕ್ರಮವಾಗಿ ಬಿತ್ತಿತ್ತು, ಅಲ್ಲದೆ 77-78ರಲ್ಲಿ ಕೇವಲ ಮೆಟ್ಟೂರು ಜಲಾಶಯದ ನೀರನ್ನೇ ಬಳಸಿ ಬಂಪರ್ ಬೆಳೆಯನ್ನು ತೆಗೆದಿತ್ತೆಂದು ಕೃಷಿ ತಜ್ಞ ಡಾ. ಸ್ವಾಮಿನಾಥನ್‌ರೇ ಒಪ್ಪಿಕೊಂಡಿದ್ದಾರೆ. ಆದಾಗ್ಯೂ, ಉಭಯ ರಾಜ್ಯದ ರೈತರು ಕಬ್ಬು, ಭತ್ತಗಳಲ್ಲದೆ ಕಡಿಮೆ ನೀರು ಬಳಸಿ ಬೇರಾವ ಬೆಳೆ ತೆಗೆಯಲೂ ಸಿದ್ಧರಿಲ್ಲ - ಇಂತಹ ಧೋರಣೆಗಳಿಗೆಲ್ಲ ಕಾರಣವೇನು? ಕೃಷಿ ಆಧುನೀಕರಣದ ಕೊರತೆಯೆ? 'ರೈತಕಾಯಕ ಕೆರೆ', 'ರೈತ ಸಂತೆ'ಯಂತಹ ಅನೇಕ ಗ್ರಾಮೀಣಪರ ಯೋಜನೆಗಳನ್ನು ಪ್ರಕಟಿಸುತ್ತಲೇ ಬಂದಿರುವ ಕೃಷ್ಣರು ಉತ್ತರ ಹೇಳಿಯಾರೆ?

ಕಾವೇರಿ ನದಿ ಪ್ರಾಕಾರದ ಅಧ್ಯಕ್ಷ ಪ್ರಧಾನಿಗಳ ಆದೇಶದ ಮೇರೆಗೆ ತಜ್ಞರ ತಂಡವೊಂದು ಕರ್ನಾಟಕ ರಾಜ್ಯದ ಜಲಾಶಯಗಳ ವೀಕ್ಷಣೆ ಮಾಡಿತಾದರೂ, ಅಲ್ಲಿಯೂ ತಮಿಳು ಸರಕಾರದಿಂದ ಅಡ್ಡಗಾಲು; ವಾಸ್ತವ ಸ್ಥಿತಿಯನ್ನು ನೇಪಥ್ಯಕ್ಕೆ ದೂಡುವ ಯತ್ನ; ನ್ಯಾಯಾಲಯದ

ಆಕ್ರೋಶಕ್ಕೆ ತಜ್ಞರ ತಂಡ ತುತ್ತಾದುದೆ ಬಂತು; ತಮಿಳು ನಾಡಿನ ಜಲಾಶಯಗಳ ನಿರೀಕ್ಷಣೆ ಕೈಗೂಡಲೇ ಇಲ್ಲ. ಈ ಹಿನ್ನೆಲೆಯಲ್ಲಿ 'ಹನಿ ನೀರೂ ಬಿಡೆ'ನೆಂಬ ಶಪಥ ಮಾಡಿದ ಕೃಷ್ಣರ ಕಳಕಳಿಗೆ ನ್ಯಾಯಾಂಗ ನಿಂದನೆಯ ಆರೋಪಕ್ಕೊಳಗಾಗಿ ಮಧ್ಯಂತರ ಚುನಾವಣೆಯ ಭೀತಿಯೇ ಕಾರಣವೆಂಬ ಪ್ರತಿಪಕ್ಷದ ಕುಹಕ ಸುಳ್ಳಾಗಲಿ ಎಂದು ಕನ್ನಡ ಜನತೆಯ ಹಾರೈಕೆ. ಆದರೆ ಕೇಂದ್ರಕ್ಕೂ ರೈತನಿಗೂ ನೇರ ಸಂಪರ್ಕವೇರ್ಪಡದೆ ಆವೇಶದಲ್ಲಿ ಉಂಟಾಗುವ ದೊಂಬಿ ಗೊಂದಲಗಳು, ಬೆಂಕಿ ಭಗ್ನತೆಗಳು, ಅಮಾಯಕರ ಆತ್ಮಾಹುತಿಗಳು ನಿಲ್ಲುವ ಬಗೆಯೆಂತು? ನಮ್ಮ ಚಲನಚಿತ್ರ ನಟರ ಘೋಷಣೆ, ಮೆರವಣಿಗೆಗಳು ಈ ಹೋರಾಟಕ್ಕೆ ಗಾಢ ರಂಗು ಬಳಿಯಬಹುದಾದರೂ ಪರಿಹಾರಕ್ಕೆ ಸೂತ್ರಗಳಾದಾವೆ?

ವರುಣನ ಅವಕೃಪೆಗೆ ಪಾತ್ರರಾದರೋ, ಗೊಂದಲವೆಬ್ಬಿಸುವ ಉಭಯ ಸರಕಾರಗಳ ಮೇಘದರ್ಶನವಾಯಿತೋ ತಣ್ಣಗಾಗಿ, ತಾತ್ಕಾಲಿಕ ಪರಿಹಾರಕ್ಕೆ ಜೋತು ಬೀಳುವ ಧೋರಣೆ ಸರಿಯಲ್ಲ. ನಿತ್ಯ ನೆರೆರಾಜ್ಯಗಳಾಗಿಯೇ ಇರಬೇಕೆಂಬ ಭೌಗೋಲಿಕ ಸತ್ಯ ಅವರನ್ನು ತಟ್ಟಬೇಕಾಗಿದೆ. ಜಯಲಲಿತಾರು ನದಿಗಳ ರಾಷ್ಟ್ರೀಕರಣ- ಗಂಗೆ ಕಾವೇರಿಗಳ ಸಮ್ಮಿಲನವೊಂದೇ ಕಾವೇರಿ ವಿವಾದಕ್ಕೆ ಉತ್ತರವೆಂದು ಗರ್ಜಿಸಿದ್ದಾರೇನೋ ನಿಜ; 19ನೇ ಶತಮಾನದಿಂದಲೂ ತಂತ್ರಜ್ಞರ ಕನಸಲ್ಲಿ ರೂಪುಗೊಂಡು ಅಲ್ಲಿಯೇ ಉಳಿದ ವಿಚಾರವಿದು. 'ರೈಲು ಮಾರ್ಗ ನಿರ್ಮಿಸುವ ಬದಲು ನೀರಾವರಿ ಮಾರ್ಗ ನಿರ್ಮಿಸಿ' ಎಂಬಂತಹ ಘೋಷಣೆಗಳೂ ಪಾರ್ಲಿಮೆಂಟಿನಲ್ಲಾಗ ಕೇಳಿ ಬಂದದ್ದು ಸತ್ಯವಾದರೂ ಕೋಟ್ಯಂತರ ರೂಪಾಯಿ ವೆಚ್ಚದ, ಜಾಗತೀಕರಣಗೊಳ್ಳದ ಸಮಸ್ಯೆಯತ್ತ ಒಲಿಯದೆ ಪ್ರಭಾವಶಾಲಿ ರೈಲ್ವೆ ಲಾಬಿಗೇ ಮಣಿದಿತ್ತು ಸರಕಾರ. ಒಂದೆಡೆ ಉಕ್ಕಿ ಹರಿದು ಬೆಳೆ ನಾಶ ಮಾಡುವ ನದಿಗಳ ಆಕ್ರೋಶ; ಇನ್ನೊಂದೆಡೆ ನೀರಿಗೆ ಬಾಯ್ದೆರೆದು ನಿಂತ ಭುವಿ! ಈ ನೈಸರ್ಗಿಕ ವೈಪರೀತ್ಯಕ್ಕೆ ನದಿಗಳ ಜೋಡನೆ ಶಾಶ್ವತ ಪರಿಹಾರವಾಗಬಹುದಾದರೂ ಅಲ್ಲಿಯೂ ಕೆಲ ಗಹನ ತೊಡಕುಗಳಿವೆ. ಆರ್ಥಿಕವಾಗಿ, ಭೌಗೋಲಿಕವಾಗಿ ಸಾಧ್ಯವಾಗಬಹುದಾದ ಯೋಜನೆಯೆ ಇದು? ಅಲ್ಲದೆ ಕೇಂದ್ರದ ನಿರಂಕುಶ ಆಳ್ವಿಕೆಗೊಂದು ಆಹ್ವಾನವಾದೀತೆ?

'ಉಭಯ ರಾಜ್ಯಗಳ ಸಮಸ್ಯೆಯಿದು. ನ್ಯಾಯಾಲಯದ ಹಸ್ತಕ್ಷೇಪ ಒಳ್ಳೆಯ ಬೆಳವಣಿಗೆಯಲ್ಲ. ದ್ವಿಪಕ್ಷೀಯವಾಗಿ ಬಗೆಹರಿಸಿಕೊಳ್ಳಲೆತ್ನಿಸಿ'ರೆಂಬ ಪ್ರಧಾನಿಗಳಿತ್ತೀಚಿನ ಹೇಳಿಕೆಯಲ್ಲಿ ಅವರ ರಾಜಕೀಯ ಅಸಹಾಯಕತೆ ಅಡಗಿರಬಹುದಾದರೂ ಒಂದಂತೂ ದಿಟ. ಸರಕಾರಗಳ ಸ್ವತ್ತಲ್ಲ ನೀರು; ಜನರ ಸ್ವತ್ತದು. ರಾಜ್ಯ, ಕೇಂದ್ರ ಸರಕಾರಗಳೆರಡೂ ಜನರ ಹಿತಾಸಕ್ತಿ ಕಾಪಾಡುವ ಧರ್ಮದರ್ಶಿಗಳು ಮಾತ್ರ. ಎರಡೂ ರಾಜ್ಯಗಳ ರೈತರ ಅವಶ್ಯಕತೆಯತ್ತ ಸಮತೋಲನದ ದೃಷ್ಟಿಕೋನ ಅಗತ್ಯ.

ಈ ಎಲ್ಲ ನಾಟಕದ ನಿಜದ ಖಳನಾಯಕ ವರುಣನ ಅವಕೃಪೆ ಇಂದು ನಿನ್ನೆಯದಲ್ಲ. ಕಳೆದೆರಡು ದಶಕಗಳಿಂದ ಘಾಸಿಗೊಳಿಸುತ್ತಲೇ ಬಂದ ಪ್ರಕೃತಿಯ ಈ ಆಕ್ರೋಶಕ್ಕೆ, ಮಾನವೀಯ ಸ್ಪಂದನೆಯಿಲ್ಲದ ಆಡಳಿತಾಂಗಗಳ ನಿರ್ಭಾವುಕ ಪ್ರಯತ್ನಗಳೇ ಉತ್ತರವಾದಾವೆಂಬ ಆಶಾವಾದ ಹಾಸ್ಯಾಸ್ಪದ, ಸ್ನೇಹ ಸೌಹಾರ್ದಗಳಿಂದ ನ್ಯಾಯಾಲಯದ ಹೊರಗೆ ಬಗೆಹರಿವ ಸಮಸ್ಯೆ ಇದಾಗಲಿ. ಬಡತನ, ಅನಕ್ಷರತೆ, ಭ್ರಷ್ಟಾಚಾರ - ಹೀಗೆ ನೂರು ಪ್ರಗಲ್ಭ ಸಮಸ್ಯೆಗಳ ಪಟ್ಟಿಗೆ ಮತ್ತೊಂದು ಹೆಸರು ಸೇರದಿರಲಿ, ಮತ್ತಷ್ಟು ನೋವು ನೀಡದಿರಲಿ.

ಅನಾವರಣಗೊಳ್ಳದ ಪ್ರತಿಮೆ

- ಫಾಲ್ಗುಣ ಗೌಡ

ಪ್ರತಿದಿನ ಹಾದು ಹೋಗುವ ನಿನ್ನ
ಮೈಯ ಪರಿಮಳದ ಲಯಬದ್ಧಗಾಳಿ
ದಾರಿ ತುಂಬಿ ಬರುವ ಹೆಜ್ಜೆ ಗತ್ತು
ಮುಖದ ಬೆವರ ನಿರಿಗೆಗಳಲ್ಲಿ ತುಂಬಿಕೊಳ್ಳುವ
ಆಹ್ಲಾದಕರ ತಂಪುನಗೆ ಬಿಂದು
ಇಬ್ಬನಿಗರೆದ ಭಾವ.
ಅಂಬರದ ತಾರೆ ಅಂಗೈಯಲ್ಲಿ ಜೀವ ಪಡೆಯುತ್ತಿದ್ದಂತೆ
ಅಂತರಂಗದ ತುಂಬ
ಬೆಳ್ಳಿಮೋಡಗಳ ಮೆರವಣಿಗೆ.
ಎಲ್ಲವನ್ನೂ ಸೂರೆಗೊಳ್ಳುವ ಕಡಲಂತೆ ಆವರಿಸಿ
ಗೆರೆ ಕೊರೆವ ಬೆಳ್ಳಿ ಮಿಂಚಂತೆ ಸೆಳೆದು
ಎದೆಗತ್ತಲ ತುಂಬೆಲ್ಲ ಬೆಳಕು ಹೊಳೆಸಿದರೂ
ಶಬ್ದ ಸದ್ದಾಗಲಿಲ್ಲ ಬೆಳಕೂ ಹತ್ತಿಕೊಳ್ಳಲಿಲ್ಲ.
ಎದೆಯಾಳದಲಿ ಮೊಳೆತ ಮೌನಕನ್ನಡಿಮನಸ
ನಿನಗೆ ಓದಲಾಗಲೇ ಇಲ್ಲ.
ಪ್ರತಿಮೆಯೆ ಜೀವ ಕೊಡು ಶಬ್ದಕ್ಕೆ
ಸರಿವ ರಾತ್ರಿಗಳಲಿ ಅಂಗುಲ ಅಂಗುಲ
ಮೂರು ಹಾಕುವ ನಿನ್ನ ನೆನಪ ಚಿತ್ರಕ್ಕೆ
ಆಕಾರ ಕೊಡಲಾಗದೇ ಆವರಣಕೆ
ಅಪ್ಪಳಿಸುವ ಅಬ್ಬರದ ತೆರೆಗೆ
ಎದೆ ದಡವಾಗಿದೆ.



'ಧರ್ಮ' ಮತ್ತು 'ಭಯೋತ್ಪಾದನೆ' ನಾಗರಿಕ ಜಗತ್ತಿನ ಆತಂಕಗಳು

■ ಸ.ರಾ. ಸುಳಕೂಡೆ

ಮಾನವ ಮೂಲತಃ ಪಶು ಸಮಾನವಾದ ಜೀವನವನ್ನು ನಡೆಸುತ್ತಿದ್ದ. ಕಾಡಿನೊಂದಿಗೆ ನಂಟಸ್ತಿಕೆ ಬೆಳೆಸಿಕೊಂಡಿದ್ದ ಮಾನವ ತನ್ನ 'ಆಕ್ರಮಣಶೀಲ' ಮತ್ತು 'ವಿಚಾರ ಶಕ್ತಿಯ' ಬಲದಿಂದ ಬಹಳಷ್ಟು ಬಲಿಷ್ಠನಾಗಿ ಬೆಳೆದು ಬಂದ. ನಿಸರ್ಗದ ಅವ್ಯಕ್ತ ಶಕ್ತಿಗಳನ್ನು ಭಯ-ಭಕ್ತಿಯಿಂದ ಕಂಡ ಮಾನವ ತನ್ನ ಪ್ರಗತಿ ಮತ್ತು ಏಳ್ಗೆ ಹಾಗೂ ಕೀರ್ತಿಗಾಗಿ ದೇವರು-ಧರ್ಮಗಳನ್ನು ಸ್ಥಾಪಿಸಿಕೊಂಡ. ಇಂದು ಮಾನವ ಸರ್ವಶಕ್ತನಂತೆ ವರ್ತಿಸುತ್ತಿದ್ದಾನೆ. ನಿಸರ್ಗದ ಅಭೇದವಾಗಿದ್ದ ಅನೇಕ ರಹಸ್ಯಗಳನ್ನು ಬಯಲುಗೊಳಿಸುತ್ತ ಅನುಕೂಲತೆಗಳನ್ನು ಹೆಚ್ಚಿಸಿಕೊಳ್ಳುತ್ತಿದ್ದಾನೆ. ಈ ಜಗತ್ತಿನ ಮಾನವರು ಯಾವುದೇ ಪ್ರದೇಶದಲ್ಲಿರಲಿ ಅಥವಾ ವಾಸಿಸುತ್ತಿರಲಿ ಅವರು ಒಂದಿಲ್ಲೊಂದು ಧರ್ಮದಲ್ಲಿ ನಂಬಿಕೆ, ಶ್ರದ್ಧೆ ಇಟ್ಟುಕೊಂಡವರೇ ಆಗಿದ್ದಾರೆಂದು ಹೇಳಬಹುದಾಗಿದೆ. ಈ ಜಗತ್ತಿನಲ್ಲಿ ಸುಮಾರು 3000 ಧರ್ಮಗಳಿವೆ; ಅವುಗಳಲ್ಲಿ ಅತೀ ಜನಸಂಖ್ಯೆ ಹೊಂದಿದ ನಾಲ್ಕು ಧರ್ಮಗಳು ಪ್ರಮುಖ ಎಂದು ಗುರುತಿಸಲಾಗಿದೆ - (1) ಕ್ರಿಶ್ಚಿಯನ್ ಧರ್ಮ (2) ಇಸ್ಲಾಮ್ (3) ಬೌದ್ಧ ಧರ್ಮ (4) ಹಿಂದು ಧರ್ಮ. ಈ ಧರ್ಮಗಳ ನಂತರ ಹೆಸರಿಸಬಹುದಾದ ಇತರ ಧರ್ಮಗಳು - ಕನ್‌ಫ್ಯೂಷಿಯನ್ ಧರ್ಮ, ಟಾವೋ ಧರ್ಮ, ಯಹೂದಿ ಧರ್ಮ, ಪಾರಸೀ ಧರ್ಮ, ಶಿಂಟೋ ಧರ್ಮ, ಜೈನ ಧರ್ಮ, ಸಿಖ್ ಧರ್ಮ, ಬಹಾಯಿ ಧರ್ಮ, ವೀರಶೈವ ಧರ್ಮ ಮುಂತಾದವುಗಳೆಂದು ಹೇಳಬಹುದಾಗಿದೆ. ಎಲ್ಲಾ ಧರ್ಮಗಳ ಸಾರವು ಒಂದೇ ಆಗಿದೆ; ಆದರೆ ಸಾಧನೆಯ ಮಾರ್ಗಗಳು ಬೇರೆ ಬೇರೆ ಎಂದು ನಂಬಲಾಗಿದೆ. 'ಧರ್ಮ' ಎಂಬುದನ್ನು ನಿಖರವಾಗಿ ನಿರ್ದಿಷ್ಟವಾಗಿ ಹಾಗೂ ಸ್ಪಷ್ಟವಾಗಿ ವ್ಯಾಖ್ಯಾನಿಸುವುದು ಎಂದೂ ಸಾಧ್ಯವಾಗದ ಮಾತು. ಧರ್ಮ ಒಂದೊಂದು ಕಾಲಕ್ಕೆ ಒಂದೊಂದು ತೆರನಾಗಿ ಮುಖವಾಡಗಳನ್ನು ಧರಿಸಿದೆ ಹಾಗೂ ಕಳಚಿಕೊಂಡು ನಿಂತಿದೆ. ಒಂದು ಅಂದಾಜಿನ ಪ್ರಕಾರ ಜಗತ್ತಿನ ರಾಷ್ಟ್ರ-ರಾಷ್ಟ್ರಗಳ ನಡುವೆ ನಡೆದ ಯುದ್ಧಗಳು, ಜಾಗತಿಕ ಮಹಾಯುದ್ಧಗಳಲ್ಲಿ ಸಾವನ್ನಪ್ಪಿದ ಜನಸಂಖ್ಯೆಗಿಂತಲೂ ಹೆಚ್ಚು ಜನಸಂಖ್ಯೆ ಧರ್ಮದ ಹೆಸರಿನಲ್ಲಿ ನಡೆದ ಕಲಹ, ಗಲಭೆ, ಜಗಳ, ಬಡಿದಾಟ, ಧರ್ಮಯುದ್ಧವೆಂದು ಹೂಡಿದ ಕದನ-ಕಾಳಗ, ಬಲಿದಾನ ಮುಂತಾದವುಗಳಲ್ಲಿ ಅಸು ನೀಗಿದೆ. 'ಧರ್ಮ' ದಮದ ಮೂಲವೇ ಆಗಿದೆ ಅಹಿಂಸೆಯ ಪ್ರತಿರೂಪವಾಗಿದೆ, ಸತ್ಯ, ಶಾಂತಿ, ಸಹಕಾರ, ಸಮತ್ವ , ಸಮಾನತೆ, ವಿಶ್ವಾಸ, ಸಹೋದರತ್ವ, ಏಕತೆ, ಅನ್ಯೋನ್ಯತೆ, ಅಂತಃಕರಣ, ಒಳ್ಳೆಯ ನಡತೆ, ರಕ್ಷಣೆ, ಸಂರಕ್ಷಣೆ, ದಾನ, ಉನ್ನತಿ, ಏಳ್ಗೆ, ವಿಕಾಸ, ನಿಸ್ವಾರ್ಥ, ಸಹೃದಯತೆ, ಸುಸಂಸ್ಕೃತಿ, ನಾಗರಿಕ ಜೀವನ, ಪರಹಿತ, ಪರೋಪಕಾರ, ಬಿದ್ದವರನ್ನು ಎಬ್ಬಿಸುವುದು, ಯಾರನ್ನೂ ಯಾವ ಕಾಲಕ್ಕೂ ಶೋಷಿಸದಿರುವುದು, ಮಾನವ ಪ್ರೀತಿ, ದೀನ ದಲಿತರ ಉದ್ಧಾರ, ಸುಖ-ಶಾಂತಿ-ಸಮೃದ್ಧಿ ಜೀವನ , ತ್ಯಾಗ, ವೈರಾಗ್ಯ, ಸಕಲ ಪ್ರಾಣಿಗಳಲ್ಲಿ ಕರುಣೆ, ಮಮತೆ, ಇಂದ್ರಿಯಗಳ ನಿಗ್ರಹ, ನಯ, ನಾಜೂಕತೆ, ತಪ್ಪುಗಳನ್ನು ಮನ್ನಿಸುವುದು, ಕಷ್ಟಗಳನ್ನು

ದೃಢತೆಯಿಂದ ಎದುರಿಸುವುದು, ಯಾರಿಗೂ ತಪ್ಪಿಯೂ ಕೆಡಕು ಮಾಡದಿರುವುದು; ನೀತಿಯುತ ಜೀವನದಲ್ಲಿ ನಂಬಿ ಆಚರಿಸುವುದು, ತಪ್ಪಿಯೂ ವೃದ್ಧರೂ ಮಕ್ಕಳು, ಮಹಿಳೆಯರು, ಗಾಯಾಳುಗಳ ಮೇಲೆ ಕೈ ಮಾಡದಿರುವುದು; ರೋಗಿಗಳ ಸೇವೆ ಮಾಡುವುದು; ಗುರು-ಹಿರಿಯರಿಗೆ ಗೌರವ ಕೊಡುವುದು, ಮೋಸ-ವಂಚನೆ-ವಿಶ್ವಾಸ ದ್ರೋಹಗಳಿಂದ ದೂರವಿರುವುದು, ಕೆಟ್ಟ ಚಟಗಳಿಂದ ಮುಕ್ತರಾಗಿರುವುದು; ಮನಸ್ಸಿನ ಪರಿಶುದ್ಧತೆ, ಏಕಾಗ್ರತೆ ಕಾಪಾಡಿಕೊಳ್ಳುವುದು, ನಿರ್ಭಯವಾಗಿ ಇರುವುದರ ಜೊತೆಗೆ ಭಯವನ್ನುಂಟು ಮಾಡದೇ ಇರುವುದು, ಜ್ಞಾನವನ್ನು ಪಡೆದುಕೊಳ್ಳುವುದು, ಜ್ಞಾನವನ್ನು ಪಸರಿಸುವುದು, ಅಧ್ಯಯನ-ತಪ-ಜಪಗಳಲ್ಲಿ ನಿರತವಾಗಿರುವುದು, ಅಯೋಗ್ಯದಿಂದ ದೂರವಿರುವುದು, ಸಜ್ಜನರ ಸಂಗ ಮಾಡುವುದು - ಇಂತಹ ಎಲ್ಲಾ ಸಕಲ ಸಕಾರಾತ್ಮಕ ಗುಣಗಳೆಲ್ಲವೂ ಧರ್ಮದಲ್ಲಿ ಸೇರಿ ಕೊಂಡಿವೆ.

ಧರ್ಮವು ಜೀವದ ದೃಷ್ಟಿಯೇ ಆಗಿದೆ. ಮಾನವನಲ್ಲಿಯ ಪಶುತ್ವವನ್ನು ನಿರ್ನಾಮ ಮಾಡಿ ಅವನನ್ನು ನಾಗರಿಕನನ್ನಾಗಿಸುವ ಸರ್ವಶಕ್ತ ಸಾಧನ ಧರ್ಮವಾಗಿದೆ. ಇನ್ನೊಂದು ಅರ್ಥದಲ್ಲಿ ಸಕಲ ಮಾನವ ಕುಲವನ್ನು ಒಗ್ಗೂಡಿಸುವ, ಅವರಲ್ಲಿ ಇರುವ ಭೇದ-ಭಾವಗಳನ್ನು ನಿವಾರಿಸುವ ಹಾಗೂ ಸಕಲರಿಗೂ ತಮ್ಮ ತಮ್ಮ ಬದುಕನ್ನು ನಿರೂಪಿಸಿಕೊಂಡು ಬಾಳುವ ಅವಕಾಶ ಕಲ್ಪಿಸುವುದು ಧರ್ಮವೆಂದೆನಿಸಿಕೊಂಡಿದೆ. ನ್ಯಾಯ, ನೀತಿ, ಸತ್ಯ, ಶಾಂತಿಗಳೇ ಧರ್ಮಗಳ ತಿರುಳೆಂದು ಸಾರಿರುವ ಮಹಿಮರು ಜಗತ್ತಿನಲ್ಲಿ ಮನುಷ್ಯ ಯಾವುದೇ ಆತಂಕ-ಭಯ-ಅಡತಡೆಯಿಲ್ಲದೆ ಬಾಳುವ ದಾರಿಯನ್ನೇ ಧರ್ಮದ ಹೆಸರಿನಲ್ಲಿ ತೋರಿಸಿದ್ದಾರೆ. ಕ್ರೈಸ್ತ ಅಥವಾ ಕ್ರಿಶ್ಚಿಯನ್ ಧರ್ಮ ಮಾನವೀಯ ಗುಣಗಳಾದ ನೀತಿ, ಶೀಲ, ತ್ಯಾಗ, ಸಮಾನತೆ, ಪ್ರೀತಿ, ಪಶ್ಚಾತ್ತಾಪ, ಸರ್ವರಲ್ಲಿ ಸಹೊದರತ್ವ, ಸ್ವಾರ್ಥ ತ್ಯಾಗವನ್ನು ಆಧರಿಸಿದೆ. ಇಸ್ಲಾಂ ಧರ್ಮವು ಶಾಂತಿ, ಸಮಾನತೆ, ಸಹೋದರತ್ವವನ್ನು ಪ್ರತಿಪಾದಿಸುತ್ತದೆ. ಬೌದ್ಧ ಧರ್ಮವು ಸತ್ಯ ಅನುಕಂಪ, ಅಹಿಂಸೆ, ನೈತಿಕ ಬದುಕು, ದಾನವನ್ನು ಅನುಮೋದಿಸುತ್ತದೆ. ಹಿಂದೂ ಧರ್ಮವು ಸರ್ವ ಜನರು ಸುಖಿಗಳಾಗಲಿ, ಕಲ್ಯಾಣಕರ - ಮಂಗಳಕರ ಕೆಲಸ ಕಾರ್ಯಗಳು ಮಾನವರಿಂದ ಜರುಗಲಿ, ಸಕಲರು ಮುಕ್ತಿಯನ್ನು ಹೊಂದಲಿ ಎಂದು ಹಾರೈಸುತ್ತದೆ. ಸತ್ಯ-ಅಹಿಂಸೆ-ಶಾಂತಿಗಿಂತ ಮಿಗಿಲಾದ ಧರ್ಮ ಮತ್ತೊಂದಿಲ್ಲವೆಂದೂ ಹೇಳಲಾಗುತ್ತಿದೆ. ಇಂದು ಆ ಧರ್ಮ ಈ ಧರ್ಮ ಎನ್ನದೇ ಮಾನವ ಧರ್ಮವೇ ಅತ್ಯಂತ ಸರ್ವಶ್ರೇಷ್ಠವೆಂದೂ ಸಹ ಪ್ರತಿಪಾದಿಸಲಾಗುತ್ತಿದೆ. ವೈಜ್ಞಾನಿಕ-ವೈಚಾರಿಕ ನೆಲೆಗಟ್ಟಿನಲ್ಲಿ ಧರ್ಮಗಳನ್ನು ಅಲ್ಲಗಳೆಯಲಾಗುತ್ತಿದೆ. ಆದರೂ ಧರ್ಮಾಚರಣೆಗೆ ಎಲ್ಲಿಲ್ಲದ ಮಾನ್ಯತೆ ಈ ಯುಗದ್ದಾಗಿದೆ.

ಮಾನವನ ಜೀವನದಲ್ಲಿ ಧರ್ಮ ಪ್ರಮುಖ ಪಾತ್ರ ವಹಿಸುತ್ತದೆ. ಹುಟ್ಟಿದಾಗಿನಿಂದ ಹಿಡಿದು ಸತ್ತ ನಂತರವೂ ಧಾರ್ಮಿಕ ಕಾರ್ಯಗಳು ನಿರಂತರಗೊಂಡಿರುವುದೇ ಇದಕ್ಕೆ ಸಾಕ್ಷಿಯಾಗಿದೆ. ಧರ್ಮವು ಮಾನವರನ್ನು ಸುಸಂಸ್ಕೃತರನ್ನಾಗಿ, ನಾಗರಿಕರನ್ನಾಗಿಸುವ ಹಂಬಲ ಹೊಂದಿದೆ. ಮಾನವನ ಎಲ್ಲಾ ಚಟುವಟಿಕೆಗಳನ್ನು ಕ್ರಮಬದ್ಧ ಸಹ್ಯಗೊಳಿಸುವ ನಿಟ್ಟಿನಲ್ಲಿ 'ಧರ್ಮ' ನಿಯಂತ್ರಕನ, ಸಂಯಮಿಯ ಪಾತ್ರವನ್ನು ನಿರ್ವಹಿಸುತ್ತದೆ. ಧರ್ಮದಿಂದಲೇ ಜೀವನ್ಮುಕ್ತಿ ಎಂದು ಅನೇಕ ಸಿದ್ಧಾಂತಗಳಲ್ಲಿ ಸಹ ಸಾರಲಾಗಿದೆ. ಧರ್ಮದ ಮೂಲ ಬಂಡವಾಳ 1. ದೇವರು, 2. ಇಹಲೋಕ-ಪರಲೋಕ, ಲೌಕಿಕ-ಅಲೌಕಿಕ, 3. ಪಾಪ-ಪುಣ್ಯ ಆಗಿವೆ. ಇವುಗಳಿಂದಲೇ ಮನುಷ್ಯನನ್ನು ಧರ್ಮವು ಆಳುತ್ತಲಿದೆ.

ಧರ್ಮ ವಿಶಾಲವಾದ ಅರ್ಥದಲ್ಲಿ ಮನುಷ್ಯನನ್ನು ಜಾಗೃತಗೊಳಿಸುವ, ಹೆಚ್ಚೆಚ್ಚು ಸುಸಂಗತವಾದ ಮತ್ತು ಎಲ್ಲರಿಗೂ ಕೂಡಿ ಬಾಳುವ ಕಲೆಯನ್ನು ಬಿಂಬಿಸುವ ಸಶಕ್ತ ಮಾಧ್ಯಮವೆಂದು ನಂಬಿಸಲಾಗಿದೆ. ವಾಸ್ತವದಲ್ಲಿ ಧರ್ಮ ಮನುಷ್ಯ ಮನುಷ್ಯರನ್ನು ವಿಂಗಡಿಸಿದೆ, ಗುಂಪುಗಾರಿಕೆಗೆ ದಾರಿ ತೋರಿಸಿದೆ ಅಷ್ಟೇ ಅಲ್ಲ ಇನ್ನೊಂದೆಡೆಗೆ ಇಣುಕಿ ನೋಡದಿರಲು ನಿರ್ದೇಶಿಸಿದೆ. ಧರ್ಮವಿಂದು ಗುಂಪುಗಾರಿಕೆಗೆ, ಜಾತಿ-ಮತ ವಾದಕ್ಕೆ ತಿರುಗಿದೆ. ಜನರು ಗೋಡೆಗಳನ್ನು ಕಟ್ಟಿಕೊಂಡು ಗೋಡೆಗಳಾಚೆ ಇರುವದು ತಾವು ದ್ವೇಷಿಸಲೇಬೇಕಾದ ಅಪರಿಚಿತರೆಂಬಂತೆ ವರ್ತಿಸಲು ಪ್ರೇರೇಪಿಸತೊಡಗಿದೆ. ಧರ್ಮ; ಮತಾಂಧತೆಗೆ ಭಯೋತ್ಪಾದನೆಗೆ ಪ್ರಚೋದನೆ ನೀಡುವ ಮೂಲ ಕೇಂದ್ರವಾಗಿ ನಿಂತಿದೆ. ತಮ್ಮ ತಮ್ಮ ಧರ್ಮ ಶ್ರೇಷ್ಠ; ತಮ್ಮ ಧರ್ಮ ಅನುಸರಿಸುವವರ ಸಂಖ್ಯೆ ಹೆಚ್ಚಾಗಬೇಕು, ರಾಷ್ಟ್ರಕ್ಕೆ ರಾಷ್ಟ್ರ ತಮ್ಮ ಧರ್ಮದ ರಾಷ್ಟ್ರವೆಂದು ಘೋಷಿತವಾಗಬೇಕು; ಜಗತ್ತಿನಲ್ಲಿ ತಮ್ಮ ಧರ್ಮದ ಹೆಸರೆ ಮುಂದಾಗಬೇಕು, ತಮ್ಮ ಧಾರ್ಮಿಕ ರೀತಿ-ನೀತಿಗಳನ್ನು ಎಲ್ಲರೂ ಅನುಸರಿಸಬೇಕು, ಧರ್ಮ ಸಂಸ್ಥಾಪಕರನ್ನು ತಮ್ಮ ಗುರುವೆಂದು ಮಾನ್ಯ ಮಾಡಬೇಕು, ತಮ್ಮ ಧರ್ಮಕ್ಕೆ ಕಿಂಚಿತ್ ವಿರುದ್ಧ ನಡೆಯುವವರನ್ನು ಹತ್ತಿಕ್ಕಬೇಕು ಎಂಬ ಅನೇಕಾನೇಕ ಗೊಂದಲಗಳು ಧರ್ಮದ ಹೆಸರಿನಲ್ಲಿ ಎದ್ದು ನಿಂತಿವೆ. ಧರ್ಮ ಪ್ರಸಾರ, ಧರ್ಮ ಪರಿವರ್ತನೆಗೆ ಅನ್ಯ ಧರ್ಮೀಯರಿಗೆ ಪ್ರಲೋಭನೆ ತೋರಿಸಿ ಮತಾಂತರಗೊಳಿಸುವಿಕೆ ಧರ್ಮದ ದೊಡ್ಡ ದುರಂತಗಳಲ್ಲಿ ಒಂದಾಗಿದೆ. ಜಗತ್ತಿನ ಮೂಲದಲ್ಲಿ ಮಾನವ-ಮಾನವರಲ್ಲಿ ಧಾರ್ಮಿಕ ಭಾವನೆಗಳಿಗಿಂತ ಬಾಳುವ ಪ್ರಶ್ನೆಗೆ ಆದ್ಯತೆ ಇತ್ತು. ಈವತ್ತು ಧಾರ್ಮಿಕ ಮದ ಮನ-ಮನವನ್ನು ಆವರಿಸಿ ಅನ್ಯ ಧರ್ಮೀಯರನ್ನು ಹೇಗಾದರೂ ಮಾಡಿ ನಿರ್ನಾಮ ಮತ್ತು ಸಂಕಟಕ್ಕೆ ಗುರಿಪಡಿಸುವ ಹುನ್ನಾರಕ್ಕೆ ವ್ಯವಸ್ಥಿತ ತರಬೇತಿಯನ್ನು ನೀಡಲಾಗುತ್ತಿದೆ. ಜಗತ್ತಿನ ತುಂಬೆಲ್ಲ ಇಂದು ಧರ್ಮಾಂಧರು, ಮತಿಯವಾದಿಗಳು ಮೇಲುಗೈ ಸಾಧಿಸಿದ್ದಾರೆ. ಅವರು ನಿಜವಾದ ಧರ್ಮವನ್ನು ತಮ್ಮ ಮನಸ್ಸಿಗೆ ಬಂದಂತೆ ತಿರುವುಮುರುವುಗೊಳಿಸಿ ಧಾರ್ಮಿಕ ಸಿದ್ಧಾಂತಗಳನ್ನು ತಿರುಚಿ ಧರ್ಮಸಂಕಟ-ಧರ್ಮಯುದ್ಧಕ್ಕೆ ಅಣಿಯಾಗಲು ಕೂಗುತ್ತಿದ್ದಾರೆ. ಯಾವುದೇ ರೀತಿಯ ನಿರ್ದಯತೆ ಮತ್ತು ಕ್ರೂರತೆ-ಕೊಲೆ ಎಂದೂ ಧಾರ್ಮಿಕವಾಗದು.

ಈ ಜಗತ್ತಿನಲ್ಲಿ ಇಂದು ನಡೆಯುತ್ತಿರುವ ಹಿಂಸಾಚಾರಕ್ಕೆ ಧರ್ಮ ಮೂಲ ಕಾರಣವಾಗುತ್ತಿದೆ. ಧರ್ಮದ ಹೆಸರಿನಲ್ಲಿ ಅತ್ಯಾಚಾರ - ಅನಾಚಾರಗಳನ್ನು ಭಯ-ಭಯಾನಕತೆಯನ್ನು ವ್ಯಾಪಕಗೊಳಿಸಲಾಗುತ್ತಿದೆ. ವಾಣಿಜ್ಯೀಕರಣ, ಕೈಗಾರೀಕರಣ ಮತ್ತು ಉದಾರೀಕರಣ ಹಾಗೂ ಜಾಗತೀಕರಣ ಹಿನ್ನೆಲೆಯಲ್ಲಿ ಮಾನವನ ಜೀವನವು ರಮ್ಯ-ಗಮ್ಯಗೊಳ್ಳುವುದೆಂದು ಭಾವಿಸಲಾಗಿತ್ತು. ಇಡೀ ಜಗತ್ತೇ ಒಂದು ಹಳ್ಳಿಯನ್ನಾಗಿಸಿದ ಸಮೂಹ ಮಾಧ್ಯಮಗಳು, ವಿಜ್ಞಾನ ಆವಿಷ್ಕಾರಗಳು ಮಾನವನ ಜೀವನದ ಮೇಲೆ ಅಗಾಧ ಪರಿಣಾಮ ಬೀರಿದ್ದರೂ ಧರ್ಮ, ಧರ್ಮದಾಹ, ಧರ್ಮ ಸಂಕಟ, ಧರ್ಮಕ್ಕೆ ಆತಂಕ, ಧರ್ಮ ಅಳಿಯುತಿದೆ, ಧರ್ಮವನ್ನು ಕಾಪಾಡಿರಿ ಎನ್ನುವ ಪಂಡಿತ, ಪುರೋಹಿತ, ಪಾದ್ರಿ, ಮುಲ್ಲಾ... ಮುಂತಾದವರು ಕಟ್ಟುಕಥೆಗಳನ್ನು ಹಬ್ಬಿಸಿ ಜನರನ್ನು ರೊಚ್ಚಿಗೆಬ್ಬಿಸುತ್ತಿದ್ದಾರೆ; ಅಧಿಕಾರದ ಚುಕ್ಕಾಣಿ ಹಿಡಿದವರು ಇವರ ಕೈಗೊಂಬೆಗಳಂತೆ ಗದ್ದಲ ಎಬ್ಬಿಸುವುದಕ್ಕೆ ಸಹಾಯ ಹಸ್ತ ಚಾಚುತ್ತಿದ್ದಾರೆ. ಇಂದಿನ ಎಲ್ಲ ಧರ್ಮಗಳು ಮುಖವಾಡಗಳಾಗಿ ಜನರ-ಜನರ ಮಧ್ಯೆ ಅವಿಶ್ವಾಸ, ಅಪನಂಬಿಕೆ, ಸಂಶಯ ಮತ್ತು ಮೋಸ-ವಂಚನೆಯಿಂದ ಬಾಳುವ ಹಾಗೂ ಅನ್ಯ ಧರ್ಮ-ಧರ್ಮೀಯರನ್ನು ಅವಮಾನಿಸುವ ಎಲ್ಲ ಹಂತಗ

ಳನ್ನು ಬಳಸಿಕೊಳ್ಳುವ ಅಖಾಡಗಳಾಗಿ ನಿಂತಿವೆ. ಧರ್ಮ ಅಂದರೆ ಹೊಡೆದಾಡುವುದೆಂದು ಭಾವಿಸಿದಂತೆ ಸಕಲರಿಂದು ವರ್ತಿಸುತ್ತಿದ್ದಾರೆ. ಧರ್ಮದ ಪೂಜಾ ಸ್ಥಾನಗಳು ಸ್ಫೋಟಕ-ವಿಧ್ವಂಸಕ ಸಾಹಿತ್ಯ-ಸಲಕರಣೆಗಳನ್ನು ಸಂಗ್ರಹಿಸುವ ಮತ್ತು ಆತ್ಮಾಹುತಿ ದಳಗಳಿಗೆ ತರಬೇತಿ ನೀಡುವ ಕೇಂದ್ರಗಳಾಗಿವೆ. ಭಯೋತ್ಪಾದನೆಗೆ ಮೊದಲ ಪ್ರೇರಣೆಯೆಂದು ಧರ್ಮವನ್ನು ಹೆಸರಿಸದಿರಲಾರದಷ್ಟು ಸಾರ್ವತ್ರಿಕ ಅಭಿಪ್ರಾಯ ಬಲಗೊಂಡಿದೆ. ಧರ್ಮ ಭಯೋತ್ಪಾದನೆಯ ಪ್ರೇರಕ ಶಕ್ತಿಯಾಗಿಲ್ಲವೇ?

ಭಯೋತ್ಪಾದನೆ ಎಂದರೆ ಮನುಷ್ಯ ತನ್ನ ಯಾವುದೋ ಗುರಿಯನ್ನು ಸಾಧಿಸುವುದಕ್ಕಾಗಿ ಒಂದು ಗುಂಪನ್ನಾಗಲಿ ಅಥವಾ ಮತ್ತೊಬ್ಬ ಮನುಷ್ಯನನ್ನು; ನಿರಪರಾಧಿಗಳನ್ನು ಹಿಂಸಿಸುವ, ಕೊಲೆ ಮಾಡುವ ಅಥವಾ ಹೆದರಿಸುವುದೆಲ್ಲವೂ ಎಂದು ಸರಳವಾಗಿ ಹೇಳಬಹುದಾಗಿದೆ.

ಭಯೋತ್ಪಾದನೆ ಜಗತ್ತಿನ ಕೆಲವೇ ರಾಷ್ಟ್ರಗಳ ಅಥವಾ ಕೆಲವೇ ಗುಂಪಿನ ಚಿಂತೆಯಾಗಿಲ್ಲ. ಎಲ್ಲ ರಾಷ್ಟ್ರಗಳಲ್ಲಿ ಭಯೋತ್ಪಾದನೆ ಒಂದಿಲ್ಲೊಂದು ರೂಪದಲ್ಲಿ ತನ್ನ ಎಲ್ಲ ಕಾರಭಾರವನ್ನು ವ್ಯವಸ್ಥಿತಗೊಳಿಸಿಕೊಂಡಿದೆ. ನಿತ್ಯ ಇಂದು ನಾವು ಕೇಳುತ್ತಿರುವ, ಓದುತ್ತಿರುವ ಬಹಳಷ್ಟು ಸುದ್ದಿಗಳಲ್ಲಿ 'ಭಯೋತ್ಪಾದನೆ' ಪ್ರಮುಖ ಸುದ್ದಿಯಾಗಿರುತ್ತದೆಂದು ಬೇರೆ ಹೇಳಬೇಕಾಗಿಲ್ಲ. ಜನಾಂಗ ಜನಾಂಗದ ದ್ವೇಷದಿಂದ ಹಿಡಿದು ಆರ್ಥಿಕ ಲಾಭದವರೆಗೂ ಭಯೋತ್ಪಾದನೆ ಬಳಕೆಯಾಗುತ್ತಲಿದೆ. ಭಯೋತ್ಪಾದನೆ ಒಂದು ಲಾಭದಾಯಕ ಕಸುಬಾಗುತ್ತಿದೆ; ಎಂತಹ ದುರಂತ!

ಭಯೋತ್ಪಾದನೆಯು ವ್ಯಾಪಕವಾಗಲು ಧರ್ಮ ಕಾರಣವಾದಂತೆ ರಾಜಕಾರಣ ಮತ್ತು ಪ್ರಬಲ ರಾಷ್ಟ್ರಗಳು ಇನ್ನಿತರ ರಾಷ್ಟ್ರಗಳ ಮೇಲೆ ಹಿಡಿತ ಸಾಧಿಸುವ ಆಟವೂ ಇದರಲ್ಲಿ ಸೇರಿಕೊಂಡಿದೆ. ಭಯೋತ್ಪಾದನೆ ಸಾಂಸ್ಕೃತಿಕ ಕ್ಷೇತ್ರವಾದ ಸಿನಿಮಾರಂಗಕ್ಕೂ ತನ್ನ ನಂಟನ್ನು ಬೆಳೆಸಿಕೊಂಡಿರುವುದು ಸಕಲರ ಮನೆಮಾತಾಗಿ ಹೋಗಿದೆ. ಇದಲ್ಲದೆ ಕ್ರೀಡಾರಂಗಕ್ಕೂ ಗಂಟು ಬಿದ್ದಿರುವ ಬಗ್ಗೆ ಆತಂಕವನ್ನು ವ್ಯಕ್ತಗೊಳಿಸಲಾಗಿದೆ. ಇಂದು ಜಗತ್ತಿನ ಬಹು ಮಂದಿಯ ಮನಸ್ಸಿನ ಆಳದಲ್ಲಿ ಭಯೋತ್ಪಾದನೆಯ ಎಲ್ಲ ಬೇರುಗಳು ಗಟ್ಟಿಗೊಳ್ಳುತ್ತ ನಡೆದಿವೆ. ಭಯದ ನೆರಳಿನಲ್ಲಿಯೇ ಇಂದಿನ ಜೀವ ಬದುಕುತ್ತಿರುವುದು ವಿವೇಚನೆಯ ಸಂಗತಿಯಾಗಿದೆ.

ಮನುಷ್ಯನಿಗೆ ಬಾಳಲು ಇರುವ ಒಂದೇ ಒಂದು ತಾಣ, ಯೋಗ್ಯ ಸ್ಥಳ, ಈ ಭೂಮಿಯಾಗಿದೆ. ಮಾನವನು ತನ್ನ ಶಕ್ತಿಯನ್ನು ಮೀರಿ ಈ ಭೂಮಿಯನ್ನು ಅಂದಗೊಳಿಸಲು ಸಾವಿರಾರು ವರ್ಷ ದುಡಿದಿದ್ದಾನೆ; ದುಡಿಯುತ್ತಿದ್ದಾನೆ. ಆದರೆ ಇಂದು ಈ ಜಗದ ಜೀವನದಲ್ಲಿ ಧರ್ಮದ ವಿಸ್ತರಣೆ, ಅಧಿಕಾರ ಚಲಾವಣೆ; ಆರ್ಥಿಕ ಹಿಡಿತ; ಸಾಂಸ್ಕೃತಿಕ ನಿಯಂತ್ರಣ ಮುಂತಾದ ಭ್ರಮೆಗಳನ್ನು ಹುಟ್ಟಿಸಿ ನಿತ್ಯ ಭಯವನ್ನು ಪಸರಿಸುತ್ತಿರುವ ರಾಕ್ಷಸಿ ಶಕ್ತಿಗಳನ್ನು ಇಂದಿನ ನಾಗರಿಕ ಜಗತ್ತು ಪೋಷಿಸುತ್ತಿರುವುದು ಹಾಗೂ ರಕ್ಷಿಸುತ್ತಿರುವ ಭಯಾನಕ ದೃಶ್ಯವನ್ನು ಅಂದೆತು ಸಹಿಸಿ ಪಾರಾಗುವುದೆಂಬುದು ಬಿಡಿಸಲಾಗದ ಕಗ್ಗಂಟಾಗಿದೆ.

ಭಯೋತ್ಪಾದನೆಗೆ ವಿಧ-ವಿಧ ಕಾರಣಗಳೂ ಎದ್ದು ನಿಲ್ಲುತ್ತವೆ. ಮಾನವನ ಸಮಗ್ರ ನಡವಳಿಕೆಯಲ್ಲಿ ಇಂದು ಪರಿವರ್ತನೆ ತರುವ ಅಗತ್ಯವಿದೆ. ಭಯ ಎಂದೂ ತಾರಕಶಕ್ತಿಯಾಗದು.

ಒಬ್ಬ ವ್ಯಕ್ತಿಯನ್ನು ನಾಗರಿಕನನ್ನಾಗಿಸುವಲ್ಲಿ ಎಲ್ಲಕ್ಕಿಂತ ಪ್ರಮುಖ ಪಾತ್ರ ಶಿಕ್ಷಣದ್ದಾಗಿದೆ. ಸಕಲರನ್ನು ನಾಗರಿಕರನ್ನಾಗಿ ಪರಿವರ್ತಿಸುವ ಪಾತ್ರ ನಿರ್ವಹಿಸಬೇಕಾಗಿರುವ ಶಿಕ್ಷಣವನ್ನು ಸುವ್ಯವಸ್ಥೆಗೊಳಿಸಬೇಕಾಗಿದೆ; ಸಾರ್ವತ್ರಿಕಗೊಳಿಸಬೇಕಾಗಿದೆ, ಸುಸಂಗತಗೊಳಿಸಬೇಕಾಗಿದೆ, ಸುನಿಶ್ಚಿತ

ಗೊಳಿಸಬೇಕಾಗಿದೆ. ನಾಗರಿಕತೆಯ ಮಹತ್ತರ ಭಾಗವಾಗಿರುವ 'ಆಡಳಿತ' ತನ್ನ ಕರ್ತವ್ಯವನ್ನು ನಿಭಾಯಿಸುವಂತೆ ಕ್ರಿಯಾಶೀಲಗೊಳಿಸಬೇಕಾಗಿದೆ. ವಿಶಾಲಭಾವ ಆದ್ಯತೆ ಪಡೆಯಬೇಕಾಗಿದೆ.

ನಾಗರಿಕತೆಗೆ ಅಗತ್ಯವಿರುವ ಆರ್ಥಿಕ ಸ್ವಾತಂತ್ರ್ಯ ಆರ್ಥಿಕ ಮಟ್ಟ ಸುಧಾರಿಸಲು ಕ್ರಮ ಜರುಗಿಸಬೇಕಾಗಿದೆ. ಎಲ್ಲದಕ್ಕೂ ಮೊದಲು ಮಾನವೀಯ ಮೌಲ್ಯಗಳನ್ನು ಸಾರ್ವತ್ರಿಕಗೊಳಿಸಲು ಸನ್ನದ್ಧರಾಗಬೇಕಿದೆ. ಜಗತ್ತಿನ ಧಾರ್ಮಿಕ ನೈತಿಕ ಒಳ್ಳೆಯ ಗುಣಗಳೊಂದಿಗೆ ವಿಜ್ಞಾನವನ್ನು ಎಲ್ಲರ ಮನಕ್ಕೆ ತಲುಪಿಸಬೇಕಾಗಿದೆ.

ಪಶು ಸಮಾನ ಜೀವನದಿಂದ ಮುಕ್ತಿ ಪಡೆದು ನಾಡನ್ನು ಕಟ್ಟಿಕೊಂಡು ಶಾಂತಿ ಮತ್ತು ವ್ಯವಸ್ಥೆಗೆ ಹಲವಾರು ಕ್ಷೇತ್ರಗಳನ್ನು ಕಂಡುಕೊಂಡ ಮಾನವ ನಾಗರಿಕ ಜಗತ್ತಿನ ರೂವಾರಿಯಾಗಿದ್ದಾನೆ. ಮಾನವ ಹಂತ ಹಂತಕ್ಕೆ ಹೇಗೆ ಬೆಳೆದು ಈ ಜಗತ್ತನ್ನು ಭವ್ಯ-ದಿವ್ಯ-ವೈಭವಗೊಳಿಸಿದ ಎನ್ನುವ ಇತಿಹಾಸವನ್ನು ಪ್ರತಿಯೊಬ್ಬರು ಅವಲೋಕಿಸಲೇಬೇಕಾದ ಕಾಲವಿದಾಗಿದೆ. ಮಾನವ ಈ ನಾಗರಿಕ ಜಗತ್ತು ನಿರ್ಮಿಸಲು ತೆಗೆದುಕೊಂಡ ಶ್ರಮದ ಹಿಂದೆ ಶಾಂತಿ-ಸತ್ಯ-ಅಹಿಂಸೆ ಹಾಗೂ ಹೆಚ್ಚೆಚ್ಚು ಸಹಕಾರ-ಸಹಾಯ-ಪರೋಪಕಾರದ ಪರಾಕಾಷ್ಠೆ ಇರುವುದನ್ನು ಸಹ ಗಮನಿಸದಿರಲಾಗದು.

ಈ ಜಗತ್ತಿನಲ್ಲಿ ವ್ಯವಸ್ಥಿತ ಭಯೋತ್ಪಾದನೆಯು ಧಾರ್ಮಿಕ ತತ್ವಗಳನ್ನು ಸ್ವಾರ್ಥಕ್ಕಾಗಿ ಸಂಕುಚಿತ ಉದ್ದೇಶಗಳಿಗಾಗಿ ಬಳಸಿಕೊಂಡು; ರಾಜಕೀಯ, ಸಾಂಸ್ಕೃತಿಕ ಎಲ್ಲ ವಹಿವಾಟುಗಳನ್ನು ನಿಯಂತ್ರಿಸುತ್ತಿರುವ ಇಂದಿನ ಕಾಲದಲ್ಲಿ ನಿರ್ಭಯದ ವಾತಾವರಣ ನಿರ್ಮಿಸುವ ಜವಾಬ್ದಾರಿಯು ಕ್ರಿಯಾಶೀಲ ಮತ್ತು ಜಗತ್ತಿನ ಶ್ರೇಯಸ್ಸಿಗಾಗಿ ಪರಿತಪಿಸುವ ಪ್ರತಿಯೊಬ್ಬರ ಮೇಲಿರುವುದನ್ನು ಮರೆಯಬಾರದು.

ಧಾರ್ಮಿಕತೆಯನ್ನು, ರಾಜಕೀಯವನ್ನು ಬಳಸಿಕೊಂಡ ಭಯೋತ್ಪಾದನೆಯು, ಮನುಷ್ಯನ ಅಭ್ಯುದಕ್ಕಾಗಿ ಸಂಶೋಧಿಸಿದ ವಿಜ್ಞಾನ ಆವಿಷ್ಕಾರಗಳನ್ನೂ ಸಹ ದುರುಪಯೋಗ ಪಡಿಸಿಕೊಳ್ಳುತ್ತಿರುವುದು ನಾಗರೀಕತೆಯನ್ನು ಹಾಳು ಮಾಡುವ ಹಂತದ ಕಾರ್ಯವಾಗಿದೆ. ಯಾವುದೇ ಧರ್ಮ, ಅಧಿಕಾರ, ರಾಜಕಾರಣ ಅಥವಾ ವಿಜ್ಞಾನ-ವಿಚಾರ ಮತ್ತೊಬ್ಬರನ್ನು ಕೊಂದು ಬದುಕೆಂದು ಹೇಳುವುದಿಲ್ಲವೆಂಬುದನ್ನು ತಿಳಿದುಕೊಳ್ಳಬೇಕಾಗಿದೆ. ನಾಗರಿಕ ಜೀವನದ ಪರಮ ಮಿತ್ರಗಳಾಗಿರುವ ಸಹನೆ, ಸಾರಾಸಾರ ವಿಚಾರ, ಸಹಕಾರ, ಸಹೋದರತ್ವ, ಕಷ್ಟದಲ್ಲಿರಿದ್ದವರಿಗೆ ಸೂಕ್ತ ಕಾಲದಲ್ಲಿ ಸಹಾಯ, ಮಾನವ ಸಹಜ ಪ್ರೀತಿ ಮಾತ್ರ ಧರ್ಮದ ಮತ್ತು ಭಯೋತ್ಪಾದನೆಯ ರಾಡಿಯನ್ನು ತೊಳೆಯಲು ಶಕ್ಯವೆಂಬುದು ನಿರ್ವಿವಾದ ಸಂಗತಿಯಾಗಿದೆ.

ಪ್ರಲೋಭನೆ; ಸ್ವಾರ್ಥ ಮತ್ತು ಹಾದಿ ತಪ್ಪಿರುವ ಧಾರ್ಮಿಕ ಮತಾಂಧರನ್ನು, ಭಯೋತ್ಪಾದಕರನ್ನು ಸರಿ ದಾರಿಗೆ ತರುವಲ್ಲಿ ಜಗತ್ತಿನ ನಾಗರಿಕ ಅಂಶಗಳು ದಿಟ್ಟವಾದ ನಿಲುವನ್ನು ತಾಳಿ; ಮಾನವೀಯ ಬದುಕಿನಲ್ಲಿಯೇ ಏಳ್ಗೆ ಶ್ರೇಯಸ್ಸು ಅಡಗಿರುವುದುನ್ನು ಮಾನವ ಶಿಕ್ಷಣ ತರಬೇತಿ ಮೂಲಕ ಕೈಗೊಳ್ಳಲು ಮುಂದಾಗಬೇಕಿದೆ. ಮಾನವ ಜೀವನದ ಮೌಲ್ಯಗಳನ್ನು ಜನಮನದ ಮುಂದೆ ಬಿಂಬಿಸುವ ಕಾರ್ಯವು ಪ್ರತಿಯೊಂದು ನಾಗರಿಕ ಕುಟುಂಬ ಮತ್ತು ಸಮಾಜದಿಂದ ಪ್ರಾರಂಭವಾದಾಗ ಧಾರ್ಮಿಕ ಮತಾಂಧತೆ ಮತ್ತು ಭಯೋತ್ಪಾದನೆ ಹೇಳಹೆಸರಿಲ್ಲದಂತಾಗುತ್ತವೆ; ಅಂತಹ ಕಾಲ ದೂರಿಲ್ಲ. ಏಕೆಂದರೆ [illegible] ಅದೆಷ್ಟೋ ಸಂಕಟಗಳನ್ನು ಗೆದ್ದು ನಿಂತಿದ್ದಾನೆ; ಇಲ್ಲಿಯೂ ಅವನಿಗೆ ಗೆಲುವಿದೆ, ಭವ್ಯತೆಯ ಗೌರವವಿದೆ.


ಮಿತ ಎಸ್.

ಮುಖ

ರಮೇಶ ಎಚ್.ಆರ್

ನಟ್ಟನಡುವಲ್ಲೇ ಅರೆಬೆತ್ತಲೆ ಹುಚ್ಚಿಯ ಫುಲ್
ಸ್ಟಾಪಿಲ್ಲದ ಮಾತು
ಹಾಡು ಮೌನಗಳೊಳಗೆ ಮುಖಗಳೋ ಮುಖಗಳೂ.
ಕೆಲವು ವಾಚ್ಯ. ಕೆಲವು ಸಿಂಬಾಲಿಕ್.
ಕೆಲವು ಮಗು ಆ ಈ ನೆಪದಲ್ಲಿ ಬರೆದ ರೇಖಾ ಚಿತ್ರಗಳು.

ಸೃಷ್ಟಿಯ ಚರಾಚರ ಜೀವ ಸಂಕುಲಗಳೆಲ್ಲಾ ಮುಖಗಳಲ್ಲಿ
ಮೂಡಿ - ಕೆಲವು ಹಾವು ಮುಂಗುಸಿ ನರಿ ತೋಳ
ನವಿಲು.
ಸೂರ್ಯ ನರ್ತನ
ಭೂಮಿ ನರ್ತನ
ಚಂದ್ರ ನರ್ತನ
ಇತ್ಯಾದಿ ಇತ್ಯಾದಿ ಗ್ರಹತಾರೆಗಳೇ ಮುಖಮಂಟಪದ ಮೇಲೆ
ನರ್ತನ. ಸುಳಿವೇ ಇಲ್ಲದೆ ಮುಖದೊಳಗೆ
ಕಾಲ ನರ್ತನ.
ಕೆಲವು ಮುಖಗಳಿಗೇನಾಗಿದೆ ಅಜ್ಜಿಯ ಮೊಲೆಗಳಂತಾಗಿದ್ದಾವಲ್ಲ...

ಒಂದು ಮುಖ ಹೂವೇ ಆಗಿದೆ.
ಅದ ಮುಟ್ಟಲು ಅರೆಕ್ಷಣ ದೇವರಾಗಿ ಬಿಟ್ಟರೆ
ದೇವರಾಗುವುದೆಂದರೆ ಕಲ್ಲಾಗುವುದು.
ದುಂಬಿಯೋ ಚಿಟ್ಟೆಯೋ ಚಿಕ್ಕ ಗುಬ್ಬಿಯೋ
ರೂಪಾಂತರವಾಗುವಂತಿದ್ದರೆ... ಆಗಲು ಹೋಗಿ
ಯಃಕಶ್ಚಿತ್ ಕಾಫ್ಕನ ಒಂದು ಹುಳು ಆಗಿಬಿಟ್ಟರೆ

ಉತ್ತರ ಎಲ್ಲಿ

■ ಡಿ. ಸಂಧ್ಯಾ ಹೊನಗುಂಟಿಕರ್

ಗೌರಿಗೆ ಭಾಳ ಬೇಚೈನಿ ಆಗಿತ್ತು. ಕುಂತರೂ ಸಮಾಧಾನಿಲ್ಲ, ನಿಂತ್ರೂ ಸಮಾಧಾನಿಲ್ಲ. ಗಿರಿಜವ್ವಗ ಈ ಮೊದಲೇ... ಅಂದ್ರ ಮೂರ್ನಾಕು ದಿನದ ಹಿಂದೇ ಅನುಮಾನಾಗಿತ್ತು. 'ಗೌರಿ ಒಂದು ನಮೂನಿ ಸುಸ್ತಾಗ್ಯಾಳ' ಅಂತ ಮನಸ್ನಾಗೇ ಅಂದುಕೊಂಡಿದ್ದು ಇವತ್ತೇ ಮುಂಜಾನೆ ಸಣ್ಣ ಬ್ಯಾನಿ ಸುರು ಆಗಿತ್ತು. ಚೊಚ್ಚಲು ಬ್ಯಾರೇ, ಹೆಂಗಾತದೋ ಏನೋ... ಅಂತ. ಬಾಲದ ಒಟ್ಟಿಗಿ ಒತ್ತಿ ನೋಡಿದ್ರ 'ಬೆನ್ನ ಹಲಗಿ ಮುರದಾವ, ಹೆಂಡಿನೂ ಅಳ್ಳಕ ಎಚಗೊಂಡದ. ಇನ್ನೇನು ದಿನಾ ಹೋಗಾವಿಲ್ಲ' ಅಂತನಿಸಿ ಗೌರಿಯ ಗುಡ್ಡದಂತಹ ಹೊಟ್ಟಿ ಕಡೆ ನೋಡಿದ್ರ ಅದುನೂ ಬಿಗಿ ಕಳಕೊಂಡು ಜರದಿತ್ತು. ಒಲಿ ಮುಂದ ಕುಂತಿದ್ರು ಕೊಟಗ್ಯಾಗೇಽ ನಿಗಾ, ಪಂದ್ರಾ ಬೀಸ್ ನಿಮಿಷಕ್ಕೊಮ್ಮೆ ಬಂದು ನೋಡ್ತಿದ್ದಳು.

ಜಾರಾಬಡ್ಕ ಹೊತ್ತಿಗಿ ಏಕದಂ ಬ್ಯಾನಿ ಜೋರಾಗಿದ್ದವು. ಮುಂಜಾನಿಂದ ಬಾಯಾಗ ಹುಲ್ಲು ಸೈತ ಹಿಡಿದಿರಲ್ಲಿಲ್ಲ ಅದಕ್ಕಽ ಮಾರಿನೂ ಸಣ್ಣದಾಗಿತ್ತು. ವಾಣಿ ಗೌರಿ ಉಪಾಸಿದ್ದದಕ್ಕ ಚಡಪಡಸ್ತಿದ್ದಳು. ತನ್ನ ಊಟದ ಕಡೆ ಖಬರಿಲ್ಲದಂಗ ಅದರ ಮುಂದಽ ಕುಂತು ನೀರು, ರೊಟ್ಟಿ.. ಏನರಽ ತಿನಿಸ ಪ್ರಯತ್ನದಾಗೇ ಇದ್ದದ್ದು ನೋಡಿ ಗಿರಜವ್ವ,

'ನೀ ರೊಟ್ಟಿ ತಿನು. ಅದಕೇನಾತದ ಏನಾಗಂಗಿಲ್ಲ' ಅಂತ ಜಬರಿಸಿದ್ರೂ ವ್ಯವ... ವ್ಯವ... ಅಂತ ಮತ್ತಽ ಕೊಟಗ್ಯಾಗ ಓಡಿದ್ಲು. ಗೂಟಕ್ಕ ಕಟ್ಟಿದ್ದ ಗೌರಿ ಒಂದೇಸಂವಽ ಅಕ್ಕಡಿಂದ ಇಕ್ಕಡಿ, ಇಕ್ಕಡಿಂದ ಅಕ್ಕಡಿ ತಿರುಗ್ತಿತ್ತು. ಒಮ್ಮೊಂದೊಮ್ಮೆ ಗೋಣು ಕೆಳಕ ಮಾಡಿ ಸುಮ್ನೆ ನಿಂತಿದ್ದು ಏಕದಂ ಚಣ... ಚಣ... ಹೆಗರಿತ್ತು. ವಾಣೀನ್ನ ನೋಡಿ ಗೋಣ ಅಲ್ಲಾಡಿಸಿ ಕಿವಿ ಎರಡೂ ಫಟ ಫಟ ಜಾಡಿಸಿದಾಗ ಆಕಿಗೆ ಒಂತರಹಾ ಅಂತಕರಣ. ಕಣ್ಣಿಂದ ಸುರಿದ ನೀರನ್ನು ಲಂಗದ ತುದಿಲಿಂದ ಒರಿಸಿ ಬ್ಯಾ... ಬ್ಯಾ... ಅಂತ ರಮಿಸುವಾಗ ಗೌರಿ ಸಮಾಧಾನಗೊಂಡಿತ್ತೇನೋ.

ಕೋಲಮಾಸ ಆಡಿದ ಒಂದು ತಾಸಿಗಿ ಮೇಲ್ಗಚ್ಚಿಯಿಂದ ಉಚಬುಡ್ಡಿ ಹೊರಗ ಬರ್ತಿತ್ತು. ತೆಳ್ಳಗ ಬೆಳ್ಳಗಿನ ಪಿಲ್ಯಾಸ್ಟಿಕ್ಕಿನ ಚೀಲದಾಗ ನೀರು ತುಂಬಿ ಇದ್ದ ಉಚಬುಡ್ಡಿಯೊಳಗ ಎರಡು ಬೆಳ್ಳಗ ಉಗುರು ಕಾಣಿಸಿ ವಾಣಿ 'ವ್ವಾ... ವ್ವಾ... ಗಗ... ಗ... ಅಂಬ್ಯಾ... ಎಂದೆಲ್ಲ ಒದರಿದಾಗ ಮಗಳ ಗದ್ದಲಿಗಿ ಕೈಯಾನ ಕೆಲಸ ಬಿಟ್ಟು ಬಂದಳು. ಗೌರಿ ದೊಪ್ಪಂತ ಕುಂತ ಬಳೀಕ ಉಚಬುಡ್ಡಿ 'ಚಳ್' ಅಂತ ಒಡದ್ದು ನೀರು ಹರಿದೋಯ್ತು. ಬ್ಯಾನಿ ಜೋರಾಗಿ ಒಂದೇಸಂವಽ ತಿಣಕತ್ತಾಗ, ವಾಣಿಗಿ ಗಾಬರಿಯಾಗಿ ಅದರ ಸನೀಕ ಹೋದ್ಲು. ಗಿರಿಜವ್ವ ಮಗಳ ಕೈ ಜಗ್ಗಿ 'ಚೊಚ್ಚಲ ದನಾ, ಕೆಲದ ದನ ನಾಚಕೊಂತಾವ. ಬ್ಯಾನಿ ಉಡಗ್ತಾವ, ಮರೀಗಿ ನಿಂದ್ರು ಇಲ್ಲೇ'.

ಮುಂಗಾಲಿನ ಪಾದದ ಮ್ಯಾಲ ಮುಸಡಿ ಇಟಗೊಂಡು ಅರ್ಧಕರ್ಧ ಹೊರಬಂತು. ಮತ್ತೊಮ್ಮೆ ಗೌರಿ ಚಣ್ಣಕ್ಕನೇ ಹಾರಿ ಕುಣ್ಯಕತ್ತು. ವಾಣಿ ಲಬ... ಲಬ.. ಬಾಯಿ ಬಡಕೊಂಡು ಅಳುವಾಗ ಗಿರಿಜವ್ವಗ ಚಿರಡಿಗಿ ಬಂದು 'ಏಯ್! ನಿನ, ಸುಮ್ಮಕ ಕುಂದ್ರು. ಅದಕೇನಾಗಣಿಲ್ಲ, ಸುಮ್ಮ ಯಾಕ ಬಾಯಿ ಬಡಿತಿ' ಎಂದು ಜಬರಿಸಿ ಆಕಳ ಕೆಚ್ಚಿ ಕಡೆ ನಿಗಾ ಇಟ್ಟು ಇದರದೊಂದು

ಕಿರಿಕಿರಿ' ಅಂತ ಗೊಣಗಿದಳು. ಮೊದಲು ಕುತೂಹಲ ಪುಟದಿದ್ದು ಆಮ್ಯಾಲ ಕಣ್ಣಿನೊಳಗ ದುಃಖ ನೀರಾಗಿತ್ತು. ಆಟರೊಳಗೆ ಕೆಳಗ ಕುಂತ ಗೌರಿ ಎಡ್ಡಬ್ಯಾರಿ ತಿಣಕದ್ರೊಳಗ ಕರಾ ಕಡೀಕೆ ಆಯ್ತು. ಕರ ನೋಡಿ ವಾಣಿ ಖುಸಿಯಾಗಿ ಒದರೋದು, ಕುಣಿಯದು ನೋಡಿ -

'ಆಯ್ತಿಲ್ಲೋ, ನಾ ಏಟ ಹೇಳಿದ್ರೂ ತಿಳೀಲಿಲ್ಲ. ಏನು ಆಗದಿಲ್ಲ... ಅಂತ, ಈಗ ನೋಡು ಏಟು ಖುಸಿಯಾಗ್ಯದ ಹುಚಗೊಟ್ಟಿಗಿ' ಅಂತ ನಕ್ಕೋಂತ ಕರದ ಬಾಲ ಎತ್ತಿ ಕೆಳಗ ನೋಡಿ,

'ಮಣಕಾನೇ ಐತೆ, ಅಂತೂ ಹೈನಾ ಕಡಿಯಾಂಗಿಲ್ಲ' ಖುಸಿಲಿಂದ ಕರುವಿಗೆ ತಾಯಿ ಮಾರಿ ಮುಂದ ದಬ್ಬಿದಳು. ನಾಲಿಗಿಲಿಂದ 'ಚರಾ ಚರಾ' ನೆಕ್ಕಿ ಕರಕ್ಕ ಹತ್ತಿದ ರಗತ, ಹೊಲಸ ಎಲ್ಲಾ ಸಾಫ್ ಮಾಡಕತ್ತಿತ್ತು. ಕರ ಮುಟ್ಟಲಿಕ್ಕಿ ವಾಣಿ ಸಮೀಪ ಹ್ವಾದ್ರ ಗೌರಿ ಭುರ್ರ... ಅಂತ ಕೋಡು ಮುಂದ ಮಾಡಿ ಇರಿಲಿಕ್ಕಿ ಬಂದದ್ದು ನೋಡಿ

'ಜರಾS ನಿಂದ್ರು, ಈಗ ಅದಕ್ಕS ಮೈಯಾಗ ದಳ ಹೊಕ್ಕೊಂಡದ. ಯಾರರ ಕರಕ್ಕ ಏನ ರS ಮಾಡಗಿದ್ಯಾರು ಅಂತ ಹೂಂಕರಿಸ್ತದ' ಅಂತ ಗಿರಿಜವ್ವ ಮಗಳಿಗಿ ಜತಲಾಯಿಸಿದಳು. ವಾಣಿ ಅಲ್ಲೇ ಗ್ವಾದ್ಲಿ ಕಲ್ಲಿನ ಮ್ಯಾಲ ಕುಂತು ಮನಸ್ನಾಗಿನ ಪ್ರಶ್ನೆಗಳಿಗೆ ಉತ್ರ ಹುಡುಕತೊಡಗಿದಳು. ನಿಸರ್ಗದ ಹಲವಾರು ಕುತೂಹಲಗಳನ್ನು ನೋಡಿ ಆನಂದಿಸಿದವಳಿಗೆ ಈ ಕುತೂಹಲದ ಭಾಳ ದುಃಖದನ್ನಿಸಿತ್ತು. ಗೌರಿಯ ಬ್ಯಾನಿ ನೆಪ್ಪಾಗಿ ನೋಡಿದಳು. ಅದು ಹಾಯಾಗಿ ಕರ ನೆಕ್ಕೋಂತ ಅತ್ಯಂತ ಸುಖಿ ನಾನು ಅನ್ನುವಂಗ ಇತ್ತು. ಕೊರೆರ ಶಿವಮ್ಮ ದೀಡತಿಂಗಳ ಕೂಸಿಗಿ ಉದ್ಯಾಗ ಕಟಗೊಂಡು ತೆಲಿಮ್ಯಾಗ ಕಡ್ಡಿಭಾರಗಿ ಗಂಟು ಇಟಗೊಂಡು ಮಾರಲಿಕ್ಕಿ ಬಂದಾಗ, ಆಕಿ ಕಣ್ಣು ಕೂಸಿನ ಮ್ಯಾಲೇ. ಕಣ್ಣು ಮುಚ್ಚಿ ಎರಡು ಪುಟ್ಟ ಮುಷ್ಟಿ ಬಿಗಿ ಮುಚಗೊಂಡ ಮಲಗಿದ್ದು ಒಮ್ಮಿಂದೊಮ್ಮೆ ಹಣಿಯಾಗ ಗೆರಿ ಮೂಡಿಸಿ ತುಟಿ ಅರಳಿಸಿ ನಕ್ಕಿದ್ದು ಯಾರಿಗೂ ತಿಳಿಯಲಿಲ್ಲ. ಅದರ ಅವ್ವ ರೊಟ್ಟಿ ತಿನ್ನುತ್ತ ಕುಂತಾಗ ವಾಣಿ ಆ ಕೂಸಿನ ಮುಂದ ಕುಕ್ಕರಗಾಲಿನ್ಯಾಗS ಕುಂತಿದ್ದಳು. ಕೈ ತೋಳೀಲಿಕ್ಕೆ ತಲಬಾಗಲು ದಾಟಿ ಹೊರಹೋಗದೇ ನೋಡ್ತಿದ್ದು, ಕೂಸಿನ ಮುಷ್ಟಿ ನೇವರಿಸಿ ಉಪ್ಪಿಕೊಟ್ಟಾಗ ಅದು ಭಂಗನೇ ಬೆಚ್ಚಿತ್ತು. ಶಿವಮ್ಮ ಎಲ್ಲಿ ಬೈತಾಳೇನೋ ಅಂತ ಗಾಬರಿ ಆಗದ್ರೊಳಗ

'ಯವ್ವಾ... ತಂಗ್ಯೋರಿಗಿ ಮಗಾ ಅಂದ್ರ ಎಟ್ಟ ಪಿರೂತಿ ಐತಿ ನೋಡ್ರಿ, ಅವರ ಮ್ಯಾಗ ನಿಮಗ ಇನ್ನೊಂದು ಆಗದ್ರ ಪಾಡಿತ್ತು' ಅಂತ ಕಿಸಬಾಯಿ ತೆಗೆದು ಹೇಳಿದಳು.

ಅವ್ವ ಶಿವಮ್ಮ ಹ್ವಾದಮ್ಯಾಲ

'ಹಂಗS... ಕೊರೆರ ಪಾರಗೋಳಿಗಿ ಮುಟ್ಟಬಾರದು. ಕೂಸುಗಳಿಗಿ ಎಂದನS ಕಂಡೀದS ಇಲ್ಲ...' ಅಂತ ಬೈದಾಗ ಸಿಟ್ಟು ಬಂತು, ಆಕಿ ಇಲ್ಲಿತನ ಖುಸಿಪಟ್ಟದ್ದು ಜರ್ರಂತ ಇಳಿಸಿದ್ಹಕ್ಕ.

ಹಾಲು ಕುಡದ ಕರಾ ಮೈಯಾಗ ಗಾಳಿ ಹೊಕ್ಕವರಂಗ ಬಾಲಾ ಎತ್ತಿ ಕುಣಿತಿದ್ರ ವಾಣಿನೂ ಅದರ ಜೊತಿ ಕುಣಿತಿದ್ದಳು. ದುಕಾನದಿಂದ ಬಂದ ಶಂಕ್ರಪ್ಪಗ ತನ್ನ ದೊಡ್ಡ ಕಣ್ಣರಳಿಸಿ 'ವವ... ಗಗ... ಬ್ಯಾ...' ಅಂತ ಸುದ್ದಿ ಹೇಳಿದ್ದೇ ಹೇಳಿದ್ದು.....

'ಹೌಂದS ಮಗಾS... ಕರಾ ಚಂದಾದಿಲ್ಲ' ಅಪ್ಪ ಕೇಳಿದಾಗ 'ಹ್ಞೂಂ' ಅಂತ ಮಾರಿ ಮಾಡಿ ಅದರ ಕೊಳ್ಳಾಗ ಕಟ್ಟಾಕ ಒಂದು ಗಂಟಿ ಬೇಕು ಅಂತ ಈಸ್ಯಾರಿ ಮಾಡಿದ್ಹಕ್ಕ

'ಆತು ಬಿಡು. ಪುಕಾಸನ ಸಂಗ್ತಿ ಕಳಸ್ತೀನಿ, ನಿಮ್ಮವ್ವಗ ಉಳ್ಳಾಕ ಕೊಡಂತೇಳು'

ಗಂಗಾಳದಾಗ ರೊಟ್ಟಿ ಗಟ್ಟಿಬ್ಯಾಳಿ ತಂದುಕೊಟ್ಟ ಹೆಂಡ್ತಿಗಿ 'ಅಂತೂ ಮಾಣೇಕನ ಬಾಣಂತ

ನದಾಗ ಹೈನಾ ಆತು. ಈದು ಏಟೊತ್ತಾಯ್ತು ಮಾಸ ಬಿತ್ತಿಲ್ಲ?'

'ಈಗಿನ್ನ ಅದ್ವಾಗಂಟಾ ಆಯ್ತು. ಇನ್ನಕ ಬಿದ್ದಿಲ್ಲಾ. ವಾಣ್ಯವ್ವಗ ನಿಗಾ ಇಡಾಕ ಹೇಳೀನಿ. ಕಾಗಿ ಬಂದ್ರ ಹೊಡಿ ಅಂತ ಕುಂದ್ರಿಸಿನಿ' ಎಂದಳು.

'ಇನ್ನೊಂದು ತಾಸು ನೋಡು. ಮಾಸ ಜೀಳೀಕ್ರ ತಿನ್ನಾಕ್ಕ ಒಂಜರಾ ಅಗಸಿ ಇಡು. ಗಥಾನ ಜೀಳೈತಿ. ಆ ಪೋರಿ ಮ್ಯಾಗೇ ಬಿಡಬ್ಯಾಡ. ಒಂದ್ಸಾಳೆ ಮಾಸ ಬಿದ್ದು ತಾನೇ ತಿಂದ್ರ ಹೈನಾ ಕೈಗಿ ಹತ್ತಲ್ಲ' ಎಂದು ಜತಲಾಯಿಸಿದ. ಮೇಲ್ಗೆಚ್ಚಿಮ್ಯಾಗ ಕಾಗಿ ಕುಂತದ್ದು ನೋಡಿ 'ಹುಶ್ಯಾ... ಹುಶ್ಯಾ...' ಅಂತ ಒಡಿಸಿ ಗಿರಿಜವ್ವನೂ ಬಿಸಲ ಕಾಸ್ಗೋಂತ, ಮಾಸ ಬೀಳದೇ ನೋಡಕತ್ತಳು.

★★★

ದೊಡ್ಡ ಮಗಳು ಬಾಣಂತನಕ್ಕ ಬಂದಿದ್ದಳು. ದಿನ ತುಂಬಿತ್ತು. ಅಕ್ಕ ಊರಿಂದ ಬಂದದ್ದು ವಾಣಿಗಿ ಭಾಳ ಖುಶಿ. ಮಾತು ಸ್ಪಷ್ಟ ಇರದಿದ್ದರೂ ತನ್ನದೇ ಮಾತನ್ಯಾಗ ಅಕ್ಕನ ತೆಲಿ ತಿಂತಿದ್ದಳು. ಮಾಂವಾ ಯಾಕ ಬಂದಿಲ್ಲಾ... ಜಗಳಾ ಆಡಿರೇನು... ಅಂತ ಕೆಣಕತ್ತಿದ್ದಳು. ಅಕ್ಕ, ಮಾಂವಾ ಬೆಂಗಳೂರಿನ್ಯಾಗ ಫೋಟು ತೆಗಿಸಿದ್ದು ನೋಡಿ ನಾನು ಊರಿಗಿ ಬರ್ತೀನಿ ನಂಗೂ ಅಲ್ಲಿ ಫೋಟು ತೆಗಸು ಅಂತ ಅಂದಾಗ

ಹುಚಗೊಟ್ಟಿ ಮಾಂವನ ಮುಂದಽ ಹಂಗೇಽ ಅಂದಿಗಿ. ಮುಂದ ನಿನ್ನ ಗಂಡಾ ಎಲ್ಲಾ ಕರ್ಕೊಂಡು ಹೋತಾನು' ಗಿರಿಜವ್ವ ಕೈದಾಗ ಮಾರಿ ಸಣ್ಣ ಮಾಡಿ, ನಿಚ್ಚಣಿಕಿ ಏರಿ ಮಾಳಿಗಿ ಮ್ಯಾಲ ಕುಂತಬಿಟ್ಟಳು. ಸೂಲುವ ಹೊತ್ತಿನ್ಯಾಗ ಪಾರಿವಾಳಕ್ಕ ಕಾಳು ಹಾಕಬೇಕಂತ ಕೆಳಗಿಳಿದು ಬಂದಳು.

ವಾಣಿ ಹುಟ್ಟಿದಾಗ ಆಕಿ ಅಳು ಕೇಳಿ ಮಳ್ಳಾಗಿದ್ದ ಬಸ್ರಾಜ ಆಕಿ ಮುಂದ ಭೊಲೊ ಹಾಡಗಾರತಿ ಆಗ್ತಾಳ ಅಂತ 'ವಾಣಿ' ಅಂತ ಹೆಸರಿಟ್ಟಿದ್ದ. ಆದ್ರ ಆಕಿ ಹೀಂಗ ಮಾತಿಲ್ಲದೆ ಬರೀ ಧ್ವನಿ ಹೊರಡಸ್ತಾಳ ಅಂತ ಯಾರಿಗೊತ್ತು. ಚೆಲುವಿ ಮಗಳಾಗಿದ್ರೂ ಮಾತಿಲ್ಲದ್ದಕ್ಕ ತಾಯಿ-ತಂದಿಗಿ ಎದಿಮ್ಯಾಗಿನ ಹುಣ್ಣಾಗಿದ್ದಳು. ಕಂಡ ದವಾಖಾನಿ ತೋರಿಸಿದ್ರೂ ಏನೂ ಪ್ರಯೋಜನ ಆಗ್ಲಿಲ್ಲ. 'ತಿಂಗಳಾನುಗಟ್ಟಲೇ ಊರು-ಕೇರಿ ಬಿಟ್ಟು ಪರೂರಾಗ ಇರಾದು ನಮ್ಮ ಕೈಲೇ ಆಗಾಲ್ಲ' ಅಂತ ದೇವರ ಮ್ಯಾಲ ಭರವಸಿಲಿಂದ 'ಎಲ್ಲಾ ಸಿವ ಇಚ್ಚಾ' ಅಂತ ವಾಪಾಸು ಬಂದಿದ್ದರು. ಬಸ್ರಾಜ ಗಿರಿಜವ್ವನ ತಮ್ಮ. ಶಂಕ್ರಪ್ಪನೇ ಐ.ಟಿ.ಐ ಓದಿಸಿದ್ದ. ಬೆಂಗಳೂರಾಗ ನೌಕರಿ ಆಗಾಣ ಮಗಳು ಮಾಣೀಕಗ ಕೊಟ್ಟು ಲಗ್ನ ಮಾಡಿದ್ದ.

★★★

ಐದು ತಿಂಗಳ ಕೂಸು ತೊಟ್ಟಿಲ ತುಂಬಾ ಮಲಗಿ ಕೈಕಾಲು ಬಡದು ಆಡಾಗ ನೋಡಿದ್ರ ಸಂತೋಸಾಗ್ತಿತ್ತು. ವಾಣಿಯ ಜಗತ್ತಿಗಿ ಅಂದ್ರ ಗೌರಿ, ಚೆಂದ್ರಿ, ಪಾರಿವಾಳ, ಪಂಚರಂಗಿ ಬಣ್ಣದ ಬೆಕ್ಕು, ಹೂವಿನ ಗಿಡ, ರೊಟ್ಟಿ ಹಾಕಿ ಹಾಕಿ ರೂಢಿಯಾಗಿದ್ದ ಓಣ್ಯಾನ ನಾಯಿ ಈ ಸದಸ್ಯರೊಂದಿಗಿ ರಾಕೇಶನೂ ಹೊಸ ಸದಸ್ಯ ಆಗಿದ್ದ ಎದಿಯಾಗಿನ ಮಾತೆಲ್ಲ ಮೂಕರಾಗವಾಗಿ ಬಿತ್ತರವಾಗುತ್ತಿತ್ತು. ಮೌನ ಸಂಭಾಷಣೆ ದೀರ್ಘವಾಗಿ ನಡೆದು ಧ್ವನಿ ಅನಾವಶ್ಯಕವೆನಿಸಿತ್ತು.

ರಾಕೇಶನ ಜರದಂಚಿನ ಕುಲಾಯಿ ತರಲಿಕ್ಕಿ ದರ್ಜಿ ಭಾಗಪ್ಪನ ದುಕಾನಕ್ಕ ಹ್ವಾದಾಗ ಅಲ್ಲಿ ಯಾರೂ ಇಲ್ಲದ್ದು ನೋಡಿ ವಾಣಿಯ ಕೈ ಹಿಡಿದೆಳೆದಿದ್ದು ಆಕಿಗಿ ಭುಗಲಾಗಿತ್ತು. ಬಂದು ಅವ್ವನ ಮುಂದ ಎಷ್ಟು ಈಶಾರಿ ಮಾಡಿದ್ರೂ ಅರ್ಥ ಆಗದೇ 'ಏನು ಹೇಳ್ತದೋ ಏನೋ. ಮಾತಿ

ಲ್ಲದ್ರೂ ಕಾರಬಾರ ಭಾಳ' ಅಂತ ಅಲಕ್ಷ್ಯ. ವಾಣಿಗೆ ಭಾಳ ಬ್ಯಾಸರಿಕಿ. ಯಾಕೋ ಏನೋ ದುಗುಡ. ಭಾಗಪ್ಪ ಕೈ ಎಳದದ್ದು ಛೊಲೊ ಅನ್ನಿಸಲಿಲ್ಲ. 'ಇನ್ನೊಮ್ಮೆ ಅವನ ದುಕಾನಕ್ಕ ಹೋಬಾರದು. ಅಪ್ಪ ಲಂಗದ ಬಟ್ಟಿ ತಂದ್ರ...? ಊರಾಗ ಆತ ಒಬ್ಬಾತನೇ ಏನು' ಭಾಗಪ್ಪನ ನೆನಪು ಬಂದ್ರ ಮಂಕಾಗುತಿತ್ತು. ಅವ್ವ ಕೇಳಲಿಕ್ರ ಏನಾಯ್ತು. ಸೀದಾ ಕೊಟಗಿಗಿ ಹೋಗಿ ಗೌರಿ ಮುಂದ ಕುಂತು ಅತ್ತಿದ್ದೇ ಅತ್ತಿದ್ದು. ಗೌರಿನೂ ಆಕಿಗಿ ಸಮಾಧಾನ ಮಾಡೋ ಹಂಗ ತನ್ನ ಮುಸಡಿಯಿಂದ ಆಕಿ ಮೈ ಒರುಸ್ಕೋತ, ನಾಲಿಗಿ ಹೊರಳಿಸಿ ಹೊರಳಿಸಿ ಮುಂಗೈ ನೆಕ್ಕತಿತ್ತು. ಆ ಸ್ಪರ್ಶದಿಂದ ಭಾಗಪ್ಪ ಕೈ ಎಳೆದ ದುಃಖ ಕಡಿಮಾಗಿತ್ತು.

'ಏs ವಾಣಿs... ನಿಮ್ಮಪ್ಪಗ ರೊಟ್ಟಿ ಕುಡು ಹೋಗು' ಅಂತ ಕುಳ್ಳು ಬಡಿತ್ತಿದ್ದ ಗಿರಿಜವ್ವ ಜೋರಾಗಿ ಒದರಿದ್ದು ಕೇಳ್ಸಿ ಚಟಕ್ಕನೆ ಎದ್ದು ಗೌರಿ ಕೊಳ್ಳಾಗ ಕೈಹಾಕಿ ಗಂಗಿದೊಗಲು ನೇವರಿಸಿ, ಎಲ್ಲೂ ಕೈಲಿಂದ ಕಣ್ಣನ್ನ ಕಿವಿಗುಂಟ ಒರಸಿಕೊಂಡು ಒಳಗ ಓಡಿದಳು.

★★★

ಮೊದಲೇ ಚಳಿದೇಸ, ಸಣ್ಣ ಕೂಸಿನ ಜೊತಿ ಮಾಣೇಕಗ ತ್ರಾಸಾತದ. ಆಕಿ ಜೋಡಿ ಯಾರು ಹೋಬೇಕು ಅಂತ ಮನ್ಯಾಗ ಮಾತುಕತೆ ನಡೀತು. ನಾ ಹೋಗ್ತಿನಿ ಅಂತ ವಾಣಿ ಒಂದೋಸಂವ ಎದಿ ಬಡಕೊಂಡು ಹೇಳಿದ್ರೂ ಗಿರಿಜವ್ವಗ ಆಕಿನs ಕಳಸೋದು ಒಪ್ಪಿಗಿ ಇಲ್ಲ. ಅವ್ವನ ಮನಸು ತಿಳಿದು ಮಾಣೇಕ ಒಬ್ಬಾಕಿನ ಇದ್ದಾಗ ಅವಳ ಕಾಲಿಗಿ ಬಿದ್ದು ನನ್ನ ಕರ್ಕೊಂಡು ಹೋಗು ಅಂತ ಗ್ಗಗ್ಗ... ಬಾ... ವೂ ಅಂತ ರೈಲು ಗಾಡಿ ಈಶಾರಿ ಮಾಡಿ ಬೇಡಿಕೊಂಡದಕ್ಕ

'ಬರ್ಲೇಳು, ಆಕಿಯೇನು ಬ್ಯಾರೇನ? ಆಕಿಗೂ ಸ್ವಾದರಮಾವನ ಮನಿ ನಾಕದಿನ ಇದ್ದಂಗಾತದ. ರಾಕೇಶನ್ನ ಭಾಳ ಹಚಗೊಂಡಾಳ' ಅಂದಾಗ ಶಂಕ್ರಪ್ಪನು ಹೂಂಗುಟ್ಟಿವ. ಎಲ್ಲಾರೂ ಒಂದಾದಾಗ ಗಿರಿಜವ್ವ ಸುಮ್ಮಕಾದಳು. ವಾಣಿಯ ಸಂತೋಷಕ್ಕ ಪಾರs ಇಲ್ಲದಂಗಾತು. ತನ್ನ ಪ್ರಪಂಚದ ಸದಸ್ಯರಿಗೆಲ್ಲ ತಾ ಊರಿಗಿ ಹೋಗs ಸುದ್ದಿ ಹೇಳಿದಳು. ಚೆಂಡೂಪಗಿ, ಮುಳಜಾಜಿ ಗಿಡ, ಕಣಗಿಲ ಗಿಡಕ್ಕ ನೀರು ಹಾಕಂತ, ಪಾರಿವಾಳಕ್ಕ, ಬೆಕ್ಕಿಗ ಸರಿಯಾಗಿ ಊಟಾ ಕೊಡಲಕ್ಕ ಅವ್ವಗ ಜತಲಾಯಿಸಿದಾಗ, ಹೇಳಿದ್ದೇ ಹೇಳಿದಾಗ ಗಿರಿಜವ್ವಗ ತೆಲಿಚಿಟ್ಟು ಹಿಡಿದು

'ಏs ಇರ್ಲಿಬಿಡs ಮಾರಾಯ್ತಿ ನೀ ಊರಿಗಿ ಹೋಗಾದೆಂಗನ ಇನ್ನಿ ನನ್ನ ತೆಲಿ ಖರಾಬು ಮಾಡ್ತಿ' ಅಂತ ಜಬರಿಸಿದ್ದಳು.

★★★

ಅಕ್ಕನ ಮನಿ ಸಣ್ಣದಿದ್ದರೂ ಅಡಿಗಿ ಮನ್ಯಾಗಿನ ಗ್ಯಾಸು, ಕುಕ್ಕರು ನೋಡಿ ದೊಡ್ಡ ಕಣ್ಣುಗಳನ್ನು ಇನ್ನ ಅರಳಿಸಿದ ವಾಣಿಗೆ ಅವ್ವ ಒಲಿ ಊದಿ ಊದಿ ಕೆಮ್ಮತಿದ್ದುದು ನೆನಪಾಯ್ತು.

ಲಾಲಬಾಗಿನ ಬಣ್ಣ ಬಣ್ಣದ ಹುವಾ, ಗಿಡಾಗಂಟಿ, ಗಿಡ ಕತ್ತರಿಸಿ ಆನಿ, ಕುದರಿ, ಆಕಳು, ಗಿಳಿ ಮಾಡಿದ್ದು ನೋಡಿ ನಮ್ಮನ್ಯಾಗಿನ ಕಣಗಿಲೆ, ಸ್ವಾವಂತಿಗಿ ಗಿಡಕ್ಕ ಹಿಂಗs ಮಾಡಬೇಕಿತ್ತು ಅಂತ ಹಳಹಳಿ. ಅಂಗಳದಾಗಿನ ದೆವ್ವಿನಂತ ಬೇಸ್‌ಗಿಡ ಯಾವ ಆಕಾರ ಇಲ್ಲದೆ ತೆರದ ಛತ್ರಿಯಂತಗ.....

ಅಕ್ಕನ ಮನಿ ಸಣ್ಣದಿದ್ರೂ ಊರು ಮಾತ್ರ ದೊಡ್ಡದು ಅನ್ನಿಸಿತ್ತು. ಇಲ್ಲಿತನಾ ಆಕಾಸದಾಗ ಮಾತ್ರ ಚುಕ್ಕಿ ಅಂತ ತಿಳಿದವಳಿಗೆ ಡಬ್ಬಲ್ ಬಸ್ಸಿನಾಗಿಂದ ಕೋಟಿಗಟ್ಟಲೇ ಮಿನಗೋ ಲೈಟು ನೋಡಿ 'ಭೂಮಿ ಮ್ಯಾಗನೂ ಚುಕ್ಕಿ ಇರ್ತಾವಾ!' ಅಂತ ಅಗಾಧ.

ರಾತ್ರಿ ಮಲಗಿದವಳಿಗೆ ಊರ ಕಡೆ ಧ್ಯಾಸಾಯ್ತು. ನಿದ್ದಿ ದೂರಾಯ್ತು. ಮಗ್ಗಲು ಬದಲಾಯಿಸಿದರೂ, ಮುಸುಕಿನೊಳಗs ಕಣ್ಮುಚ್ಚಿದ್ರೂ ಊರು, ಅವ್ವ, ಗೌರಿ ನೆನಪಾದ್ರು. ಮುಂದಿನ ಖೋಲ್ಯಾಗ ಮಲಗಿದ ಅಕ್ಕ ಮಾಂವನ ಪಿಸಿ ಪಿಸಿ ಮಾತು, ಅಕ್ಕನ ಚುಕ್ಕಿ ಬಳಿ ಸಪ್ಪಳ ಅವಳ ಕಿವಿ ಚುರುಕಾಗಿಸಿತ್ತು. ಒಂದು ಕ್ಷಣ ಉಸಿರು ಜೋರಾಗಿ ಮುಸುಕು ಸರಿಸಿದಳು. ಅಕ್ಕ ಸಣ್ಣಗ ಚೀರಿದ್ಲೂ, ನರಳೋದ ಕೇಳಿ ಎದಿಯೊಳಗ ಧಡ ಧಡ. ಮಾಂವ ಅಕ್ಕಗ ಹೊಡಿಲಿಕ್ಕಿ... ಗಾಬರಿ... ಎದ್ದು ಬಾಗಿಲು ಸಂದಿನ್ಯಾಗಿಂದ ನೋಡಿದಳು. ಕುತೂಹಲ...ಹೆದರಿಕೆ... ನೋವು. ನಾನು ಈಗಿಂದೀಗ ತನ್ನೂರಿಗಿ ಹೋಗಬೇಕು. ನಾಯಿಲ್ಲಿ ಬರಬಾರದಿತ್ತು. ಯಾಕೋ ಅಕ್ಕ ಮ್ಯಾಂವ ಇಬ್ಬರೂ ಹೊಸಬ್ರು ಅನ್ನಿಸಿತು. ಅಪರಿಚಿತರು ಅಂತ ಅನ್ನಿಸಿ ಆಕಿಗೆ ಒಂತರಹ ಕಸಿವಿಸಿ.

★★★

'ಒಮ್ಮೆದೊಮ್ಮೆ ಹೇಳಾಣಿಲ್ಲ ಕೇಳಾಣಿಲ್ಲ. ಹಿಂಗ್ಯಾಕ್ ಬಂದಿ' ಅಂತ ಗಿರಿಜವ್ವ ಕೇಳಿದಕ್ಕ ವಾಣಿಯ ಉತ್ತರ ಬರಿ ಧ್ವನಿ ತೊಡರಿಸುವಿಕೆ. ಬಸ್ರಾಜಗ

'ಗೊತ್ತಿತ್ತು ಈಟಾತದs ಅಂತ... ಅದಕ್ಕ ಬ್ಯಾಡಂದೆ. ಊರ ಬಿಟ್ಟು ಅಪ್ಪ-ಅವ್ವಗ ಬಿಟ್ಟು ಇರಾದಿಲ್ಲ ಏನಿಲ್ಲ. ಸುಮ್ನೆ ಆ ಪೋರಿಗಿ ಒಬ್ಬಾಕಿಗಿ ಬಿಟ್ಟು ಬಂದಿ. ಒಂದು ಕಾರಡ ಹಾಕಿದ್ರ ನಿಮ್ಮಾವ ಬರ್ತಿದ್ದ'.

'ಇರಲೇಳು. ಹೆಂಗೂ ಸುಟ್ಟಿ ಇತ್ತು. ಬಿಟ್ಟು ಹೋದ್ರಾಯ್ತು ಅಂತ ಬಂದೆ'.

ವಾಣಿ ಮನಿ, ಅಂಗಳ ಎಲ್ಲಾ ತಿರಗಾಡಿ ಎಲ್ಲ ಒಡನಾಡಿಗಳಿಗಿ ಮಾತಾಡಿಸಿ ಚೆಂದ್ರಿನ್ನ ಅಟ್ಟಿಸಿಕೊಂಡು ಎರಡು ಕೈಯಾಗ ಎತ್ತಿದ್ರ ಅದು ಗಾಬರಿಯಾಗಿ ಆ್ಯ... ಅಂತ ಅರಿಚಿತು. ಪಾಪ ಅನ್ನಿಸಿ ಕೆಳಗ ಬಿಟ್ಟು ಅದರ ಕುಂಡಿಗಿ ಪಟ್ಟಂತ ಏಟು ಕೊಟ್ಟಾಗ ಅದು ಓಡಿ ಹೋಯ್ತು.

ರಾಕೇಶನ್ನ ಬಿಟ್ಟು ಬಂದದ್ದು ಭಾಳ ದುಃಖ ಆಗಿತ್ತು. ಅವನಿಗಿ ಕರ್ಕೊಂಬರದಿತ್ತು. ನೋಡ್ಬೇಕನ್ನಿಸ್ಯಾದ. ಅವ್ವಗ ಹೇಳಿದ್ರ ಹೇರಳ್ತಾಳ. ಇವೆಲ್ಲದ ಜೊತಿಗಿ ಅಕ್ಕ ಮಾವಾನ ಚ್ಯಾಷ್ಟಿ, ನೋಟ, ನಗು... ಮನದಾಗ ಯಾಕೋ ತಳಮಳ. ಗೌರಿಗಿ ಚುನ್ನಿ ಹೊಟ್ಟು ಕಲಸಿ ಅದರ ಮುಂದಿಟ್ಟು ಬುಟ್ಟಿ ಖಾಲಿಯಾಗತನ ಕುಂತವಳಿಗಿ ಖಾಲಿ ಬುಟ್ಟಿ ಚರ ಚರ ಅಂತ ಮಗ್ನಾಗಿ ನೆಕ್ಕುವ ಗೌರಿ ಮ್ಯಾಲ ವಾಣಿಗಿ ಸಿಟ್ಟು, ಕಸಕ್ಕನೇ ಬುಟ್ಟಿ ಸರಿಸಿ ಎತ್ತಿ ದೂರ ಒಗದಳು. 'ನಾ ಯೇನು ತಪ್ಪು ಮಾಡಿದ' ಅನ್ನವಂಗ ಗೌರಿ ಆಕಿನ ಮುಖ ನೋಡ್ತು ನಾಲಿಗಿಲಿಂದ ಮುಸಡಿ ಸವರ್ಕೋಂತ ಪಟ್ಟಕ್ಕನೇ ಅದರ ಕೊಳ್ಳಿಗಿ ಜೋತು ಬಿದ್ದು ಅಪ್ಪಿಕೊಂಡಾಗ ಕಣ್ಣಂಚಿನ ನೀರು ಗೌರಿ ಹೆಗಲಿನ ಮ್ಯಾಲ ಇಬ್ಬನಿ ಹಂಗ ಕೂತಿತ್ತು.

★★★

'ಹಂಗ್ಯಾಕ ಬಸರ್ಹೆಂಗುಸ್ರು ನಡದಂಗ ನಡೀತಿs' ಅಂತ ಗಿರಿಜವ್ವ ಮಗಳಿಗಿ ಸಿಡುಕಿದಾಗ ವಾಣಿ ಮಾಡಿದ ಈಶಾರಿ ತಿಳಿಲಿಲ್ಲ. 'ಅಕ್ಕನ ನೆಪ್ಪಾಗ್ಯದ ಹೋಡೀಗಿ' ಅಂತ ಅನ್ನುತ್ತ ಜ್ವಾಳದಾಗಿನ ಗುನಿ ಸವರಿದಳು. ಅಪ್ಪನ ಖೋಲ್ಯಾಗ ಹಾಕಿದ್ದ ಕನ್ನಡಿ ಮುಂದ ನಿಂತು ತನ್ನ ಹೊಟ್ಟಿ ನೋಡಿಕೊಂಡಾಗ ಕಾಣಸ್ಲಿಲ್ಲ, ಅಪ್ಪನ ಮಂಚಾ ದರ.., ದರ... ಎಳದು ಮಂಚದ ಮ್ಯಾಗ ನಿಂತು...

'ಏನದು ಸಪ್ಪಳಾ... ಏನ್ ಮಾಡಕತ್ತಿದ್ದೀs...' ಗಿರಿಜವ್ವನ ಕೂಗಿಗಿ ಉತ್ತರ ಕೊಡೋ ಗೊಜು ಬ್ಯಾಡನ್ನಿಸಿ ಕನ್ನಡಿಯೊಮ್ಮೆ ಹೊಟ್ಟಿಯೊಮ್ಮೆ ನೋಡಿದಳು. ಸ್ವಲ್ಪ ದೊಡ್ಡೊದನ್ನಿಸಿತ್ತು.

ಹೊಟ್ಟಿ ಮ್ಯಾಲ ಕೈಯಾಡಿಸಿಕೊಂಡಳು. ಯಾವಾಗ ದೊಡ್ಡದಾಗ್ತದೋ ಅನ್ನೋ ಚಿಂತಿ. ಈ ಚಿಂತಿ ಸುರುವಾಗಿ ಹದಿನೈದು ದಿನಾಯ್ತು. ಒಮ್ಮಿದೊಮ್ಮೆ ಈರಭದ್ರ ದೇವರ ಜಾತ್ರಾಗಿನ ಪುಗ್ಗಾ ನೆನಪಾಯ್ತು. ನನ್ನ ಹೊಟ್ಟೀನೂ ಹಂಗೇ ಆಗಬೇಕು. ಆಗ ಇನ್ನೊಬ್ಬಾತ, ರಾಕೇಸನ ಬರ್ತಾನ. ರಾಕೇಶ ಬ್ಯಾಡ... ರಮೇಶ... ಉಮೇಶ... ಯಾಕೊ ಏಕಾಏಕಿ ಮಂಕು ಕವಿತು. ಏನು ಹೆಸರಿಟ್ರೂ ನಂಗs ಕರಿಲಿಕ್ಕೆ ಬರಲ್ಲ. ಬ್ಯಾಸರಿಕೆ ಆದ್ರೂ ಇನ್ನೊಬ್ಬರು ಕರದ್ರ ನಂಗ ಕೇಳಸ್ತದಲ್ಲ ಅಂತ ಸಮಾಧಾನ. ಗೌರೀಶ ಏನಂತ ಕರಿತಾನೋ... ಆದ್ರ ಅಂವಾ ಇನ್ನ ಯಾಕ ಬರ್ಲಿಲ್ಲ...?

ಅಪ್ಪನ ಜೋಡಿ ಉಳ್ಳಕ ಕುಂತಾಗ ಗಿರಿಜವ್ವಗs ಭಾಳ ಅಚ್ಚರಿ. 'ಉಣು, ಉಣು, ಅಂದ್ರ ಉಣ್ತಿರಲಿಲ್ಲ. ಇವತ್ಯಾಕ ಹ್ವಟ್ಟಿ ಹಿಗ್ಗಿಸಿ ಏಳ್ಳಕತ್ತಿದಿ...' ಅವ್ವನ ಮಾರಿ ನೋಡಿ ಸುಮ್ಮಗೆ ಮಳ್ಳ ನಗಿನಕ್ಕಳು. ಊಟಾ ಆದಮ್ಯಾಗ ಖೋಲ್ಯಾಗ ಹೋಗಿ ಹೊಟ್ಟಿ ನೋಡಿಕೊಂಡಳು. ದೊಡ್ಡದಾಗೇ ದೆನಿಸಿ ಖುಸಿಯಾಯ್ತು. ಕಣ್ಣು ನಕ್ಷತ್ರದಂಗ ಹ್ವಳದವು. ಗೌರೀಶನ ನೆನಪಾತು. ಇನೂ ಯಾಕ ಬರಲಿಲ್ಲ...? ಅವನ ನೆನಪಾಗಿ ಮೈಯೆಲ್ಲ ಅರಳಿತು. ಕೈಕಾಲು ಮೈಯೆಲ್ಲ ಬಿಸಿ. ಅವನ ಚಿತ್ರ ಕಣ್‌ಕಟ್ಟಿದಂಗ ಒಡಮೂಡಿತು. ಏನು ಹಿತ ಅವನ ಜೋಡಿ ಇದ್ದಾಗ... ಎಷ್ಟು ಪ್ರೀತಿ ಮಾಡ್ತಾನ. ನಾನ ಗೌರೀಗಿ ಮಾಡಿದಂಗೆ..... ನಾಚಿಕಿನೂ ಆಯ್ತು. ಅವನ ಚ್ಯಾಷ್ಟಿ ನೆನಪಾಗಿ.

★★★

ವಾಣಿ ಬಿಕ್ಕೋದು ನಿಂತಿರಲಿಲ್ಲ. ಗೌರಿ ಕೊಟಗ್ಯಾಗ ಅಂಬ್ಯಾ... ಅಂತಿತ್ತು. ಅದರ ಕೊಳ್ಳಿಗಿ ಬಿದ್ದು ಹೋ ಅಂತ ಅತ್ತಳು. ನಾನು ಗೌರಿಯಂಗ ದನಾ ಆಗೇ ಹುಟ್ಟಬೇಕಿತ್ತು. ಇಲ್ಲಕ್ರ ಮಾತರs ಬರದಿತ್ತು. ಮೂಕ ದನ, ಮೂಕ ಜಾನವರ ಅಂತ ಅವುಕ್ಕ ಸುಮ್ಮಾಗ್ತರ. ಆದ್ರ ನಂಗ... ಗೌರೀಶ ಇರದಿತ್ತು. ಇವರ ಬಾಯಿ ಮುಚ್ಚಸ್ತಿದ್ದ. ಹೌಂದು... ಅಂವ ನನ್ನ ನೋಡಿ ಏಟ ಚೆಂದ ಮಾತಾಡ್ತಿದ್ದ. ನಂಗ ಬೇಕನ್ನಿಸಿದ್ದು ಕೊಡಸ್ತಿದ್ದ. ನನ್ನ ಮಾತು ಯಾರು ಕೇಳ್ತಾರ? ಆದ್ರ ಗೌರೀಶ... ನಾನು ಆ ದಿನ ಅಕ್ಕನ ಸುದ್ದಿ ರಾಕೇಶನ ಸುದ್ದಿ ಹೇಳಿದ್ರ... ಗೌರಿ ಚೆಂದ್ರಿಗಿ ಈದದ್ದು ಹೇಳಿದ್ರ ಖುಷಿಯಿಂದ ಕೇಳಿದ್ದ. ನಿಂಗೂ ರಾಕೇಶನಂಗ, ಚೆಂದ್ರಿಯಂಗ ಪುಟ್ಟದು ಬೇಕೇನು ಅಂದ. ಹೀಂಗ ಅವ್ವ... ಅಪ್ಪ..., ಬಸ್ರಾಜ ಮಾಂವಾ, ಅಕ್ಕಾ ಯಾರೂ ಕೇಳಿಲ್ಲ. ಯಾರೂ ಕೊಡಲಿಲ್ಲ. ಆದು ಗೌರೀಶ 'ನಾನು ರಾಕೇಶನ ನಿನ್ನ ಹೊಟ್ಟಿಗಿ ಕಳಸ್ತೀನಿ' ಅಂದ.

ಅವ್ವನ ಸಿಟ್ಟು ನೋಡಿ ವಾಣಿಗಿ ವಿಚಿತ್ರ ಅನ್ನಿಸಿತ್ತು. ರಾಕೇಶನಂತವ ನಂಗ ಹುಟ್ತಾನ, ಈಗ ನನ್ನ ಹೊಟ್ಟಿ ದೊಡ್ಡದಾಗ್ಯದ ಅಂತ ಅವ್ವಗ ತೋರಿಸಿದ್ರ ಹುಚ್ಚಿಯಂಗ ಆಡ್ತಾಳ. ಗೌರೀಶ ಹ್ವಾದ್ರೇನಾಯ್ತು ರಾಕೇಶನಂತವ ಬರ್ತಾನಲ್ಲ. ಗಲ್ಲದ ಮ್ಯಾಗ ಕೈ ಹೋಯ್ತು. ಅವ್ವನ ಬಟ್ಟು ಮೂಡಿದ್ದು ಕೈಯಾಡಿಸಿದಾಗ ಉಬ್ಬಿದ್ದು ತಿಳಿತು. ಗೌರೀಶಗೂ ಸುಮ್ನೆ ಬೈಯ್ತಾರ... ಗೌರಿಗಿ ಹೋರಿ ಹಾಯ್ಸರ ಇನ್ನೊಂದು ಕರ ಹುಟ್ತದೆ ಅಂತ ಅವ್ವ ಹೇಳಿದ್ದು ನೆನಪಾಯ್ತು. ಈ ಆ ಹೋರಿ ಎಲ್ಲದೇನೋ. ನಡು ನಡುವೆ ಬಿಕ್ಕು ಬರ್ತಿತ್ತು. ಒಂದೊಂದು ಬಿಕ್ಕಿಗಿ ದುಃಖ ಕಮ್ಮಿಯಾಗ್ತಿತ್ತು. ಗೌರಿ ಗಬ್ಬಾದಾಗ, ಅಕ್ಕ ಹಡದಾಗ ಎಷ್ಟು ಖುಸಿ. ಆದ್ರ ನಂಗ ಯಾಕ ಹೀಂಗ ಹೊಡೆದಳು. ಕೈ ಮ್ಯಾಲಿನ ಬರಿಗಳನ್ನ ನೋಡಿಕೊಂಡಾಗ ಮತ್ತ ಕಣ್ಣು ಹನಿಗೂಡಿದವು. ಗೌರಿ ನನ್ನ ಗೆಳತಿ ಇದ್ರೂ ಆಕಿಗೂ ಮಾತು ಬರಂಗಿಲ್ಲ. ಮಾತಾಡೋರನ್ನ ಗೆಳತಿ ಮಾಡ್ಕೋದಿತ್ತು. ಗೌರೀಶನ ನೆನಪಾಯ್ತು. ಹೌದು ಆತ ಮಾತಾಡೋ ಗೆಳತಿ ಇದ್ದಂಗ. ಎಲ್ಲಿ ಹೋದ್ನೋ. ಆತ ಇದ್ರ ನನಗ ಉತ್ತರ ಹೇಳ್ತಿದ್ದ. ಅವ್ವಗು ಬೈಯ್ತಿದ್ದ. ಆತ ಇನ್ನೂ ಯಾಕ ಬರ್ಲಿಲ್ಲ...? ■

ಸೂತಕದ ಸಂಜೆಯಲ್ಲಿ

- ಡಿ.ಎಸ್. ರಾಮಸ್ವಾಮಿ

ಕಾಲನ ಕೈಯಲ್ಲಿರುವ ಯಮಗೋಲು
ತಳಾಯಿಸಿ ಊರೂರು, ಶೋಧಿಸಿ ಮನೆಮಾರು
ಮುಗಿಲು ಮುಟ್ಟಿದ ಅಳುವೇ ತಿಳಿಸುತ್ತೆ
ಆ ಮನೆಯ ಒಂದು ಘಟ ಇನ್ನು ಮಣ್ಣುಪಾಲು.

ಕದಬಾಗಿಲಗೂಡು ಮುಚ್ಚಿದ್ದರೂ ಭದ್ರ
ಕಳ್ಳ ಬೆಕ್ಕಿನ ಹೆಜ್ಜೆ ಸದ್ದೇ ಮಾಡುವುದಿಲ್ಲ
ಒಳಗಿಟ್ಟಿದ್ದ ಹಾಲು, ಮೊಸರು, ಬೆಣ್ಣೆ
ಕಣ್ಣು ರೆಪ್ಪೆಯಾಡಿಸುವಷ್ಟರಲ್ಲಿ ಮಂಗ ಮಾಯ!

ಮನೆಯ ಸೂರಲ್ಲಿ ಧಡ ದಢ ಓಡಿ
ಪಣತದೊಳಗಿಟ್ಟಿದ್ದ ಕಾಳು ಕಡಿ
ಮುಕ್ಕಿ ಮೆರೆಯುವ ಹೆಗ್ಗಣಗಳೂ
ಅಪರೂಪಕ್ಕೆ ನುಗ್ಗುವ ಹಾವಿಗೆ ಹೆದರುತ್ತವೆ.

ಕದ್ದು ಹಾಲು ಕುಡಿದು, ಛಂಗನೆ ನೆಗೆದ ಬೆಕ್ಕು
ಸದ್ದಿಲ್ಲದೇ ಕಾದಿದ್ದ ನಾಯಿ ಬಾಯಿಗೆ ಸಿಕ್ಕು
ಹೇಗೋ ಗೊತ್ತಾಗುತ್ತೆ ಕಿರುಬಕ್ಕೆ ನಾಯಿ ಇರುವ ದಿಕ್ಕು
ಅಂತೂ ನಡೆಯುತ್ತಾನೆ ಕಾಲಪುರುಷ ಒಂದು ಮಿಕವ ಹೊತ್ತು.

ಬದುಕ ಕಾಡುತ್ತಲೇ ಇರುವ ಸಾವು
ಸಾವಿಗೆ ಚಳ್ಳೆ ತಿನ್ನಿಸುವ ಹಾಗೆ ಬದುಕು
ಹಿಡಿದೇ ಹಿಡಿಯುತ್ತೇನೆಂಬ ಹಟ ಅದಕ್ಕೆ
ಗೆಲ್ಲದಿದ್ದರೂ ಸೋಲಬಾರದೆಂಬ ಚಟ ಇದಕ್ಕೆ

ನಿನ್ನೆಯವರೆಗೂ ಇದ್ದುದಿನ್ನಿತಿಹಾಸ
ಸಂಚಯನಕ್ಕುಳಿಯುವುದು ಬರಿ ಬೂದಿಕೆಂಡ
ವಪನಶಿರದ ತುಂಬಾ ತುಂಬಿದ್ದು ಸ್ಮಶಾನ ವೈರಾಗ್ಯ
ಮುಗಿಯುವುದು ಖಚಿತ, ಈ ಭುವನದೊಂದಿಗೆ ಭಾಗ್ಯ

ಹೋದವರು ಹೋದುದೆಲ್ಲಿಗೆ ತಿಳಿದವರಿಲ್ಲ
ಇದ್ದವರಿಗೂ ಕರೆಗಂಟೆ ತಪ್ಪುವುದಿಲ್ಲ
ಸೂತಕದ ಸಂಜೆಯಲ್ಲಿ ಹಚ್ಚಿಟ್ಟ ಹಣತೆ
ಉರಿಯುವುದು ಕಡ ತಂದ ಎಣ್ಣೆ ತೀರುವವರೆಗೆ!

ಚಿನ್ನದ ಜಿಂಕೆಯ ಬೆನ್ನತ್ತಿ

- ಶಂಕರಯ್ಯ ಆರ್. ಘಂಟಿ



ಊರ್ದು ಊರಿಗ್ಹತ್ತಿದರೆ
ನಿನ್ನ ಲಂಗೋಟಿಗೇ ಉರಿಹತ್ತಿದ್ದು
ಹುಡುಗಾಟಿಕೆಯೆಂದರೂ ನಿಜತಾನೆ?
ಎಲ್ಲರೊಳಗಿದ್ದೂ ಎಲ್ಲರಂತಲ್ಲದ ಗುಣ
ನಿನ್ನೊಳಗಿನೊಳಗೇ ಮೈಗೂಡಿದ್ದು ಯಾವ ಜೇನ್ನೊ?

ಶಬ್ದ ಶಬ್ದಕೆ ಬಣ್ಣ
ಬಣ್ಣ ಬಣ್ಣಕೆ ಚಿನ್ನ
ಚಿನ್ನದ ಜಿಂಕೆ ಬೆನ್ನತ್ತಿ ಸುತ್ತಿ
ಸುತ್ತೇ ಸುತ್ತಿತು ಸುರಳಿ ಸುಂಟರಗಾಳಿ
ಕ್ಷಣ ನಿಂತು ನಿರುಕಿಸೆ
ಭರವಸೆಯ ಬಾಲ ಮರೀಚಿಕೆ

ದೆಸೆಗೆಟ್ಟರೂ ದಕ್ಕದಾದಳು
ಮನಸ ಮಂದಾರ ಕನ್ನೆ
ಎದೆಯ ಬಾಂಡಲೆಯಲಿ
ರಕ್ತ ಕೊತ ಕೊತ
ಡಾಂಟೆಯ ಬಿಯಾಟ್ರಿಸ್ ಆಗದೆ ಬೆಂಬತ್ತಿದಳು
ಭವಿಷ್ಯವಾಗಬೇಕಾದವಳು ಭೂತವಾಗಿ

-2-

ಕತ್ತಲಲಿ ಬೆತ್ತಲಾಗಿ
ಕಳಕೊಂಡ ಬೆಳಕ ಮೊಳಕೆಗೆ
ಐರ್ಲೆಂಡಿಗರು ಇಂಗ್ಲೆಂಡಿಗೆ ಸಡ್ಡೊಡೆದು
ಆಘಾತಕ್ಕೆದೆಯೊಡ್ಡಿ
ಹರೆಮಾಗಿ ಮುದಿ ಬಂದು
ಬದುಕಿನಡೆಯಲಿ ಸಿಕ್ಕು ಬಿಕ್ಕುವಾಗೂ
ಪರತಂತ್ರ ಪಾರುಪತ್ಯದ ಗೂಟ ಕಿತ್ತು
ಸ್ವಾಭಿಮಾನದ ಸ್ವದೇಶಿ ಬೆಣೆ ಜಡಿಯೆ
ಭರವಸೆಯ ಬೆಳಕು ಪವಡಿಸಲು
ವಾಸ್ತವ ತಂದ ಅರೆಬೆತ್ತಲೆಗ್ಯಾಕವಮಾನ?


ಒಬ್ಬೊಬ್ಬರಂತರಾಳದಲೂ ಅವರದೇ ಪರಡಿ
ಎಲ್ಲಿಂದ ಹುಡುಕಿದೆ ಮಾರಾಯ ತಾಯ್ನೆಲದ ಪಾತಾಳಗರಡಿ?
ರಣರಂಗದಲ್ಲೂ ಬದುಕ್ಹಿಡಿದ ಜರಡಿ
ಆಗೂ ಕಾಡುತಿದ್ದಳಂತರಾಳದ ಕನ್ನೆ
ಭವಿಷ್ಯವಾಗಬೇಕಾದವಳು ಭೂತವಾಗಿ

-3-



ಮಾಡ್‌ಗಾನ್! ಮಾಡ್‌ಗಾನ್! ಎಂದು
Mad women ಹಿಂದ್ಹೋದಿ
ಅವಳ ಬೆಳಕಿಂಡಿಗೊ
ಚಂದ್ರಬಿಂಬ ಚುಂಬನದ ಕನಸ ಕಾವಲು

ಪ್ರೇಮಯಾತನೆ, ಎದೆಯ ಬಡಿತ, ಕಾಯದ್ಹಂಬಲಕೆ
ಜಿಂಕ, ಜಿನ್ನಾಣ, ತಾತ್ಸಾರದ ಕುಣಿಕೆ ಹಾಕಿದ
ನಿನ್ನ ಮೋಹದ ಗಿಣಿ ಮೋಹಿನಿಯಾಗುಳಿದೇ
ಜಿಂಬತ್ತಿದಳು ಭವಿಷ್ಯವಾಗಬೇಕಾದವಳು ಭೂತವಾಗಿ



-4-

ಇಪ್ಪತ್ತರಿಂದ ಎಪ್ಪತ್ತಾದರೂ
ನಿನ್ನಂತರಂಗದ ಹುಡುಗ ಕುಣಿಯುತ್ತಿದ್ದ
ವಯಸ್ಸಿನ್ಹೊಗರಿನ ತುಂಟತನ ಬಿಡದೆ
ಸತ್ಯದೆಳೆಗುಂಟ ಚೇತನಕನಿಕೇತನ ತುಂಬುತಿದ್ದ
ಮುಪ್ಪಿನ ಜ್ಞಾನದ
ಹುಡುಗಾಟದುಲ್ಲಾಸಕೆ ಕಸಿಮಾಡಿ
ಜೀವ ನಿರ್ಜೀವಕ್ಕಮರತ್ವದ ಗೆರೆ ಎಳೆದು
ನಿರ್ಲಿಪ್ತತೆಯಿಂದ ಏನಂದೆ?
'I forget all a while
upon a woman's breast!'
ನಮ್ಮೆದೆಯೊಳಗೆ ನೂರಾರು
ಸೋಗಲಾಡಿತನಗಳು ಮೆದೆಮಾಡಿ
ಮೆದುವಾಗಿ ಚಿಟುಕು ಮುಳ್ಳಾಡಿಸುವಾಗ
ನಿಷ್ಠುರವಾದರೂ ನಿರ್ಭಯದಿ
ನಿನ್ನ ಹಾಗೇ ಬದುಕಲು
ಘೂರಿಗಿದೆ ಎದೆಗಾರಿಕೆ ಏಟ್ಸ್?

(ಪ್ರೇರಣೆ: ಪಿ. ಲಂಕೇಶರ 'ಟೀಕೆ ಟಿಪ್ಪಣಿ-1' ರ 'ಮನಕ್ಕೆ ಕಾರಂಜಿಯ ಸ್ಪರ್ಶ)

ಕಥೆ

'ಸುರಿಯುತ್ತಿರುವ ಬೆಳುದಿಂಗಳ ಹಾಲನ್ನೇ ನೋಡುತ್ತಿರುವ ಮುದುಕರಿಬ್ಬರ ಸ್ವಗತ'

■ ಕನಕರಾಜು ಬಿ.

ಆತನೊಂದು ಛೇರಲ್ಲಿ, ಈತನೊಂದು ಛೇರಲ್ಲಿ, ಎದುರುಬದುರು ಕೂತಿದ್ದರು. ಇಬ್ಬರೂ ತಲೆಕೆಳಗಾಕಿದ್ದರು. ಪ್ರಾಣವ ಹಿಂಡೋ ಮೌನ. ಒಂದೇ ವಾರಿಗೆಯವರು ಇಬ್ಬರು, ಬೆಳ್ಳಗಾದ ಕೂದಲು, ಗುಳಿಬಿದ್ದ ಕೆನ್ನೆ, ಸುಕ್ಕುಸುಕ್ಕಾದ ಚರ್ಮ, ನಡುಗುತ್ತಿರುವ ಮೈ. ಈತನ ಹೆಸರು ಅಬ್ದುಲ್ಲಾ, ಆತನ ಹೆಸರು ರಾಮ್ಸ್ವಾಮಿ. ರೂಮಿಗೆ ಚಿಲಕ ಹಾಕಿ ಅವರು ಹೊರಟು ಹೋಗಿದ್ದರು. ಕೋಪದಿಂದ ಕುದಿಯುತ್ತಿದ್ದ ಅಬ್ದುಲ್ಲಾನೆದುರಿಗೆ ರಾಮ್ಸ್ವಾಮಿಯನ್ನು ತಂದು ಕುಳ್ಳಿರಿಸಿದ್ದರು ಅವನ ಮಕ್ಕಳು. ಹದಿನೆಂಟು ವರ್ಷಗಳ ನೋವು, ಅವಮಾನ, ದ್ವೇಷ, ಸೇಡು ತೀರಿಸಿಕೊಳ್ಳಬೇಕೆಂಬ ತುಡಿತ. ಅಂದು ಜಾತ್ರೇಲಿ ಕಾಣೆಯಾದವ ಇವತ್ತು ಸಿಕ್ಕಿದ್ದಾನೆ. ತನ್ನ ಒಂದೊಂದು ಉಗುರೂ ಅವನ ರಕ್ತ ಕೇಳುತ್ತಿದೆ. ಅಂದು ಇದೇ ಕೈಗಳ ಉಗುರುಗಳನ್ನು ಕಿತ್ತು ಬಿಸಾಡಿದವ. ಕಣ್ಣುಗಳಿಗೆ ಖಾರದಪುಡಿ ಎರಚಿ ದೇಹದಿಂದ ರಕ್ತವ ಹೀರಿದವ. ಇಂದು ಒಬ್ಬನೇ ಸಿಕ್ಕಿದ್ದಾನೆ. ಅಂದು ತಾನೂ ಒಬ್ಬಂಟಿ ತಾನೆ? ವಯಸ್ಸಾಗಿದೆ. ಆ ಘಟನೆಯಾದಾಗ ತಮ್ಮಿಬ್ಬರಿಗೂ ಒಂದೇ ವಯಸ್ಸು. ಮೌನದಿಂದಿದ್ದ ಅಬ್ದುಲ್ಲಾನ ಒಳಗೆ ಹದಿನೆಂಟು ವರ್ಷದ ಹಿಂದಿನ ಆ ಕರಾಳ ನೆನಪು ಅಸ್ಪಷ್ಟವಾಗಿ ಕಣ್ಮುಂದೆ ಬರುತ್ತಿತ್ತು.

ಇಬ್ಬರೂ ತಲೆಯೆತ್ತಿ ನೋಡಿಕೊಂಡರು. ಮತ್ತೆ ತಲೆತಗ್ಗಿಸಿ ಕೂತರು. ರಾಮ್ಸ್ವಾಮಜ್ಜನ ಜೀರ್ಣ ಶರ್ಟು ಹರಿಯಲ್ಪಟ್ಟಿತ್ತು. ಅವನ ಮೈಗೆ ಬಿದ್ದ ಏಟುಗಳು ಎದ್ದು ಕಾಣುತ್ತಿದ್ದವು. ಗಂಟೆ ಒಂದಾಗಿರಬೇಕು. ಪಿಟ್ಲಾಲಿಯ ಮಸೀದಿಯಲ್ಲಿ 'ಅಲ್ಲಾ' ಕೂಗಲು ಟವೆಲೊಂದನ್ನು ಹಾಸಿ, ತಲೆಗೆ ಕರವಸ್ತ್ರವನ್ನಾಕಿ ಅಬ್ದುಲ್ಲಾ ನಮಾಜಿಗೆ ಕೂತ. ರಾಮ್ಸ್ವಾಮಜ್ಜನಿಗೆ ಈಗ ಸ್ವಲ್ಪ ಧೈರ್ಯ ಬಂದಂತಿತ್ತು. ಆ ಘಟನೆಯನ್ನು ಈತ ಮರೆತಿರುವಂತೆ ಕಾಣಿಸುತ್ತಿಲ್ಲ. ಸೇಡು ಕಟ್ಟಿಕೊಂಡಿದ್ದಾನೆ. ಮುದುಕನಾದರೂ ತಾನೇನು ಕಮ್ಮಿ, ತನ್ನ ಬಗಲಲ್ಲಿ ಅಂದಿನಂತೆ ಇಂದೂ ಒಂದು ಚಾಕು ಇದೆ. ಎಷ್ಟು ಪೊಗರು ಈ ಸಾಬಿಗೆ? ತನ್ನ ಪಾಡಿಗೆ ತಾನು ದಾರಿಯಲ್ಲಿ ಹೋಗುತ್ತಿದ್ದವನನ್ನು ಮಕ್ಕಳ ಕಳುಹಿಸಿ ಹೊಡೆದು ಎಳೆದುಕೊಂಡು ಬಂದಿದ್ದಾನೆ. ಮುಗಿಸಿ ಹಾಕಲೇ ಅವರು ತನ್ನನ್ನು ಈ ರೂಮಿಗೆ ತಳ್ಳಿದ್ದಾರೆ. ಈ ಸೊಣಕಲ ಸಾಬಿಯ ಕೈಯಲ್ಲಾಗುತ್ತದೆಯೇ? ಗಟ್ಟಿಮುಟ್ಟಾಗಿದ್ದ ದಿನವೇ ತನ್ನನ್ನು ಮುಟ್ಟಲಾಗಲಿಲ್ಲ ಇವನಿಗೆ, ಇವತ್ತು ನನ್ನನ್ನು ಕೊಂದುಬಿಡ್ತಾನ? ರಾಮ್ಸ್ವಾಮಜ್ಜ ನೆನಪುಗಳ ಕದಕುತ್ತಿದ್ದ. ನಮಾಜಿಗೆ ಕೂತಿದ್ದ ಅಬ್ದುಲ್ಲಾನನ್ನುಸೂಕ್ಷ್ಮವಾಗಿ ಗಮನಿಸಿದ. ಅವನ ಜುಬ್ಬಾದೊಳಗೆ ಉದ್ದನೆಯ ಚಾಕು ಇರುವಂತೆ ಕಾಣಿಸಿತು. ತನ್ನ ಚಾಕನ್ನು ಹೊರತೆಗೆದ. ಅಬ್ದುಲ್ಲಾ ನಮಾಜು ಮಾಡುತ್ತಿದ್ದ.

★★★

ರಾಮ್ಸ್ವಾಮಜ್ಜ ಈ ರೋಡಿಗೆ ಬಂದು ಸುಮಾರು ಇಪ್ಪತ್ತು ವರ್ಷಗಳೇ ಆಗಿರಬೇಕು. ತನ್ನ ನಾಲ್ಕನೇ ಮಗಳ ಜತೆ ಯಾವುದೋ ಚಿಕ್ಕ ಕಾರಣವೊಂದಕ್ಕೆ ಅಂದು ಜಗಳವಾಡಿ ವಾಪಸ್ ಬಂದದ್ದೇ ಕಡೆ, ನಿನ್ನೆಯವರೆವಿಗೂ ಅತ್ತ ತಲೆಹಾಕಿಯೂ ಮಲಗಿರಲಿಲ್ಲ. ಹೆಂಡತಿ, ಮಕ್ಕಳಿಗೆ

ಅಲ್ಲಿಗೆ ಹೋಗಬೇಡಿ ಎಂದು ಎರಡು ಮೂರು ಬಾರಿ ಹೇಳಿ ಸುಮ್ಮನಾಗಿದ್ದ. ಮಗಳು-ಅಳಿಯ ತನ್ನ ಮನೆಗೆ ಬಂದ ದಿನ ಎತ್ತ ಕಡೆಯಾದರೂ ಕಣ್ಣು ಕೀಲುತ್ತಿದ್ದ. ಒಣಜಂಭಗಳನ್ನು ಧರಿಸಿ ನಡೆದಾಡುತ್ತಿದ್ದ ರಾಮ್ಣಾಮಿಗೆ ಅಂದು ಕೋಪ ಮೂಗಿನ ತುದಿಯಲ್ಲೇ ಇರುತ್ತಿತ್ತು. ಆದರೀ ಹದಿನೈದು ವರ್ಷಗಳು ಆತನನ್ನು ತೀರಾ ಕುಬ್ಜಗೊಳಿಸಿಬಿಟ್ಟಿವೆ. ಪ್ರಪಾತದಂಚಿಗೆ ನೂಕಿವೆ. ತನ್ನ ಎಂಟು ಮಕ್ಕಳು ಎಂಟೆಂಟು ದಿಕ್ಕಿಗೆ ದಿಕ್ಕಾಪಾಲಾಗಿರುವುದ ನೆನೆ ನೆನೆದು ದಿನವೂ ಕ್ಷೀಣಿಸುತ್ತಿದ್ದ. ಅದಕ್ಕಿಂತ ಮಿಗಿಲಾಗಿ, ಅಂದಿನ ತನ್ನ ರಾಜವೈಭವದ ಗಳಿಗೆಗಳಿಗೆ ಇಂದನ್ನು ಹೋಲಿಸುತ್ತಾ ತನ್ನೆರೆಡು ಗಂಡುಮಕ್ಕಳನ್ನು ಕಂಡೊಡನೆ ಕೊತ ಕೊತ ಕುದಿಯುತ್ತಿದ್ದ. ತನ್ನಪ್ಪ ಸಂಪಾದಿಸಿದ್ದ ಮೂವತ್ತೆಕರೆ ಹೊಲವನ್ನು ಈ ಪಾಪಿಗಳು ಹತ್ತೆಕರೆಗೆ ಇಳಿಸಿರುವುದರ ಬಗ್ಗೆ ದಿನಕ್ಕೊಮ್ಮೆಯಾದರೂ ಪ್ರಸ್ತಾಪಿಸದಿರಲು ಆತನಿಗೆ ಸಾಧ್ಯವಿರುತ್ತಿರಲಿಲ್ಲ. ಗಂಡುಡ್ರು ಓದಲಿ ಎಂದು ಸಾಲೀಗೆ ಕಳಿಸಿದ್ರೆ ತಾವು ಚಲ್ಕೇನೆ ಓಡೀತಿವಿ ಎಂದು ವಾಪಸ್ ಬಂದುಬುಟ್ರು. ಇಬ್ಬರಿಗೂ ಮದುವೆ ಮಾಡಿಸಿ ತೋಟವನ್ನೆಲ್ಲ ಪಾಲು ಮಾಡಿ, ಅವುಗಳಲ್ಲರ್ಧವನ್ನು ಪೇಟೆಯ ಜನಕ್ಕೆ ಮಾರಿಬಿಟ್ಟಿದ್ದಾರು. ಬಾವಿ ಬತ್ತಿಹೋಗಿ, ಮಳೆರಾಯನೂ ಇವರ ಮೇಲೆ ಕೋಪಿಸಿಕೊಂಡಿದ್ದರಿಂದ ಇಬ್ಬರು ಬಾಳಾಟ ನಡೆಸಲು ಯಪ್ಪಾಯವ ಬುಟ್ ಬಿಟ್ಟು ಬೇರೆನ್ನೇನೂ ಮಾಡಿ ಮಾಡಿ ಸುಸ್ತಾಗಿದ್ದರು. ಈ ಆರೇಳು ವರ್ಷದಿಂದ ತನಗೊಂದು ಕುದುರೆಗಾಡಿ ಕೊಡಿಸ್ರೊ ಎಂದೇಳುತ್ತಿದ್ದರೂ ಕಿವಿಗೆ ಹಾಕಿಕೊಳ್ಳದ ಆ ನರಪ್ರಾಣಿಗಳ ಕಂಡು ರಾಮ್ಣಾಮಜ್ಜನಿಗೆ ಕೋಪದ ಕಟ್ಟೆ ನಿತ್ಯವೂ ಒಡೆದು ಬೈಗುಳುಗಳು ಪ್ರವಾಹದಂತೆ ಉಕ್ಕುತ್ತಿದ್ದವು. ತಾನು ಕಟ್ಟಿಸಿದ್ದ ಬಂಗಾರದಂಥ ಮನೆ ಇವತ್ತು ಪಾಳು ಬಿದ್ದಿದೆ. ಹದಿನಾರು ಕೋಣೆಗಳುಳ್ಳ ಭವ್ಯವಾದ ಮನೆಯಲ್ಲಿಂದು ಮೇಲ್ಛಾವಣಿಗಳು, ಜಂತೆಗಳು, ಹೆಂಚು ಎಲ್ಲವೂ ನಾಳೆಯೇ ನಾಡಿದ್ದೋ ಎನ್ನುತ್ತಿದ್ದವು. ಎತ್ತ ನೋಡಿದರತ್ತ ಕಸ, ಗಲೀಜು. ಮನೆಯನ್ನೇ ಸರಿಮಾಡಲಾಗದ ಇವರಿಗೆ ತನ್ನ ಕೊನೆಗಾಲದ ಆಸೆಗಳಿನ್ಯಾವ ಲೆಕ್ಕ.

ಮಕ್ಕಳನ್ನು ಬೈದುಕೊಳ್ಳುತ್ತಲೇ ಮೆಲ್ಲಗೆ ನಡೆಯುತ್ತಿದ್ದ. ಮಗಳ ಮನೆ ಇನ್ನೂ ಮೂರು ಮೈಲಿ ಇರಬಹುದು. ಮಗಳನ್ನು ನೆನಸಿದಾಕ್ಷಣ ಕಿಬ್ಬೊಟ್ಟೆಯೊಳಗೆ ಛಳುಕ್ ಎಂದಿತು. ಇಷ್ಟು ವರ್ಷಗಳು ತನ್ನ ಪ್ರೀತಿಯ ಮಗಳನ್ನು ಮಾತನಾಡಿಸದೆ ಎಂಥ ಅನ್ಯಾಯ ಮಾಡಿದೆ ಎಂದುಕೊಂಡ. ತನ್ನ ಮಡದಿ ಸತ್ತಾಗ ಆಕೆ ರೋಧಿಸುತ್ತಾ ತವರುಮನೇಲಿ ತನಗಿನ್ನು ಯಾರೂ ಇಲ್ಲ ಎಂದು ಹೇಳುತ್ತಿದ್ದುದ ಜ್ಞಾಪಿಸಿಕೊಂಡಾಗ ಅವನ ಕಣ್ಣುಗಳು ನೀರಿನಿಂದ ತುಂಬಿಕೊಂಡವು. ಇವತ್ತು ನಿರ್ಧಾರ ಮಾಡಿಯೇ ಬಂದಿದ್ದ, ಅವಳ ಮನೆಗೆ ಹೋಗಬೇಕು, ಅವಳ ಮಕ್ಕಳ ನೋಡಬೇಕು, ಸಂತೋಷದಿಂದ ಇಂದಾದರೂ ಎಲ್ಲರ ಜೊತೆ ಕಾಲ ಕಳೆಯಬೇಕೆಂದು. ಅಂದೆಲ್ಲ ಹಾಲ್ಕರೆದು ಕೊಟ್ಟು ತಾನು ಕುದುರೆಗಾಡಿ ಹತ್ತಿ ಮಗಳ ಮನೇಲಿ ಇಳಿಯುವಾಗ ಆಗ ತಾನೆ ಸೂರ್ಯ ಹುಟ್ಟುತ್ತಿದ್ದ. ಈ ಮಧ್ಯೆ ಇಲ್ಲಿ ಇಷ್ಟೊಂದು ವ್ಯತ್ಯಾಸಗಳು. ರೋಡಿಗೆ ಡಾಂಬರು ಹಾಕಿದ್ದಾರೆ. ಯಳನಡು ಎರಡಾಗಿದೆ, ಹೊಲಗಳಲ್ಲಿ ಅಂದಿನಂತೆ ಬೆಳೆಗಳೇ ಕಾಣುತ್ತಿಲ್ಲ. ಅತ್ತಿತ್ತ ನೋಡುತ್ತಾ ಉಸಿರೆಳೆದುಕೊಳ್ಳುತ್ತಾ ಕೆಮ್ಮುತ್ತಾ ಮೆಲ್ಲಗೆ ಹೆಜ್ಜೆಯನ್ನೆತ್ತಿ ಇಡುತ್ತಿದ್ದ. ರಸ್ತೆ ನಿರ್ಜನವಾಗಿತ್ತು. ಮುಳ್ಳು ಪೊದೆಯ ಬಳಿ ಬಂದಾಗ ಸುಸ್ತಾಗಿ ಕೂರಬೇಕೆನಿಸಿತು. ಕೂತ. ಅಣತಿ ದೂರದಲ್ಯಾರೊ ತನ್ನಂತೆ ನಡೆಯಲು ತಿಣುಕಾಡುತ್ತಾ ಬರುತ್ತಿರುವಂತೆ ಕಾಣಿಸಿತು. ಎದ್ದು ಮತ್ತೆ ಹಾದಿ ಹಿಡಿದ. ಆ ವ್ಯಕ್ತಿಯ ನೋಡುವ ಕುತೂಹಲ. ಆತ ಸರಿಸುಮಾರು ತನ್ನ ವಯಸ್ಸಿನವನೆ ಇರಬೇಕು ಎನಿಸಿತು ರಾಮಜ್ಜನಿಗೆ. ಆ ವ್ಯಕ್ತಿ ಬಣ್ಣದ ಲುಂಗಿಯುಟ್ಟಿದ್ದ ಜುಬ್ಬಾ ಹಾಕಿದ್ದ ತಲೆಗೆ ಟವಲ್ ಸುತ್ತಿ

ಕೊಂಡಿದ್ದ. ಇಬ್ಬರೂ ಹತ್ತಿರವಾದರು. ಈರ್ವರಿಗೂ ಯಾರೆಂದು ನೋಡುವ ತವಕ. ದೃಷ್ಟಿ ಹಾಯಿಸಿದರು. ದಂಗು ಬಡಿದವರಂತೆ ನಿಂತರು. ಕೆಕ್ಕರಿಸಿ ಪರಸ್ಪರ ನೋಡಿಕೊಂಡರು. ಇಬ್ಬರ ಮೈಗಳೂ ಸುಡಲಾರಂಭಿಸಿದವು. ಏನೊಂದೂ ಮಾತಿಲ್ಲ. ಆಗ ರೊಂಯ್ಯನೆ ಬೀಸಿದ ಗಾಳಿಗೆ ಇಬ್ಬರ ದೇಹಗಳೆಂಬ ಆ ದೇಹಗಳು ಅಲುಗಾಡಿ ತಮ್ಮ ತಮ್ಮ ಹಾದಿ ಹಿಡಿದರು. ರಾಮ್ಸ್ವಾಮಜ್ಜನ ಕಣ್ಣು ಕೆಂಪಗಾಗಿದ್ದವು. 'ಅವನೆ...? ಅಂದು ಕೊಡ್ಲಹಳ್ಳಿ ಜಾತ್ರೇಲಿ ಮೂಳೆ ಮುರಿದಿದ್ದೇನಲ್ಲ ಅವನೇ? ಇನ್ನೂ ಬದುಕಿದ್ದಾನೆಯೇ? ಅವನ ಹೆಸರೂ ಮರೆತು ಹೋಗಿದೆ. ಯಾವುದೋ ಸಾಬರ ಹೆಸರು ಜ್ಞಾಪಕಕ್ಕೆ ಬರಲಿಲ್ಲ. ಆದರೆ ಆ ಘಟನೆ ಅಸ್ಪಷ್ಟವಾಗಿ ಕಣ್ಮುಂದೆ ಬಂತು.

★★★

ನಮಾಜು ಮುಗಿಸಿ ಅಬ್ದುಲ್ಲ ಕಣ್ಣು ತೆರೆದಾಗ ರಾಮ್ಸ್ವಾಮಜ್ಜ ಕಣ್ಣು ಮುಚ್ಚಿ ಕುಳಿತಿದ್ದ. ಅಬ್ದುಲ್ಲಾನ ಕಿವಿಗೆ ಸ್ಪಷ್ಟವಾಗಿ ಕೇಳಿಸುತ್ತಿತ್ತು. ಆತನ ಉಸಿರು, ಅಡಿಯಿಂದ ಮುಡಿವರೆಗೆ ಗಮನಿಸಿದ, ಅವನ ಬಗಲಲ್ಲಿದ್ದ ಚಾಕುವಿನ ಹಿಡಿ ಕಂಡಿತು. ಎದ್ದು ಕುರ್ಚಿಯಲ್ಲಿ ಕೂತ. ಒಮ್ಮೆ ಜೋರಾಗಿ ಕೆಮ್ಮಿದ. ರಾಮ್ಸ್ವಾಮಜ್ಜ ಮೆಲ್ಲಗೆ ಕಣ್ತೆರೆದ. ಕಣ್ಣುಗಳಿಂದ ನೀರ ಹನಿಗಳು ಜಾರಿ ಕೆನ್ನೆಗೆ ಬಿದ್ದವು. ಅಬ್ದುಲ್ಲಾ ತಲೆತಗ್ಗಿಸಿದ. ನೀರವತೆ. ಯಾರೋ ಸುತ್ತಲೂ ನಡೆದಾಡುತ್ತಿದ್ದಾರೆ, ತರಗೆಲೆಗಳ ಪರಪರ ಸದ್ದು. ಅದೊಂದು ದಿನ ಪಿಟ್ಲಾಲಿಯ ಬಸೇಗೌಡನಿಗೂ ತನಗೂ ವ್ಯವಾರದಲ್ಲಿ ಏರು-ಪೇರಾದಾಗ ಇದೇ ರಾಮ್ಸ್ವಾಮಜ್ಜ ಮಧ್ಯಸ್ತಿಕೆ ವಯಿಸಿ ತನಗೆ ಮೋಸ ಮಾಡಿದ. ನ್ಯಾಯವಾಗಿ ಸಿಗಬೇಕಿದ್ದ ಮೂವತ್ತು ಸಾವಿರ ನೀರು ಪಾಲಾಯಿತು. ಕಳ್ಳನ ಜತೆ ಈ ಸುಳ್ಳ ಅವತ್ತು ಸೇರಿಕೊಂಡು ತನಗೆ ಬಾವಿ ತೋಡಿದ್ದ. ಇವನನ್ನು ಬಿಡಬಾರದು. ಕೂದಲುಗಳನ್ನೆಲ್ಲ ಕಿತ್ತು ನರಕ ಹಿಂಸೆ ಕೊಡಬೇಕು. ಆಗಲೇ ಇವನಿಗೆ ತಾನಂದು ನರಳಿದ್ದು ಗೊತ್ತಾಗುತ್ತೆ. ಅಣುವಣುವಾಗಿ ಇವನನ್ನು ಹಿಂಸಿಸಬೇಕು. ತನ್ನಷ್ಟೇಗೆ ಅಷ್ಟು ಜನರ ನಡುವೆ ಸಾಯಿಸಲು ಯತ್ನಿಸಿದ. ಇಂದು ಬಿಡಬಾರದು. ಇಂಥ ಅವಕಾಶ ಇನ್ನೆಂದಿಗೂ ತನಗೆ ಸಿಗದು. ಹಿಂಸಿಸಿ ಹಿಂಸಿಸಿ ಕೊನೆಗೆ ಅವನೇ ನರಳುತ್ತಾ ಪ್ರಾಣ ಬಿಡುವುದು ತಾ ನೋಡಬೇಕು. ಅಬ್ದುಲ್ಲಾ ತಲೆಯೆತ್ತಿದ. ರಾಮ್ಸ್ವಾಮಜ್ಜನ ಕಣ್ಣುಗಳು ಆರ್ತತೆಯಿಂದ ಏನನ್ನೋ ಹೇಳಲು ಹವಣಿಸುವಂತಿತ್ತು. ಅಬ್ದುಲ್ಲ ಉದ್ದನೆಯ ಚಾಕಿಗೆ ಕೈ ಹಾಕಿದ. ಎದ್ದು ನಿಂತ.

★★★

ತನ್ನ ನಾಲ್ಕು ಹೆಣ್ಣು ಮಕ್ಕಳಲ್ಲಿ ಇಬ್ಬರನ್ನು ದೂರದ ಬಾಂಬೆಗೆ ಕೊಟ್ಟಿದ್ದ ಅಬ್ದುಲ್ಲಾನಿಗೆ ಒಟ್ಟು ಏಳು ಮಕ್ಕಳು. ಮೂವರು ಗಂಡು ಮಕ್ಕಳಲ್ಲಿ ಒಬ್ಬ ಬೆಂಗಳೂರಿನ ಖಾಸಗಿ ಆಸ್ಪತ್ರೆಯೊಂದರಲ್ಲಿ ಕಾರ್ಡಿಯಾಲಜಿಸ್ಟ್ ಆಗಿದ್ದ. ಇನ್ನಿಬ್ಬರು ಡಿಗ್ರಿ ಮುಗಿಸಿ ಮನೆಯಲ್ಲೇ ಇದ್ದರು. ಚೂರುಪಾರು ವ್ಯವಸಾಯ ನೋಡಿಕೊಳ್ಳುತ್ತಿದ್ದರು. ಉಳಿದ ಹುಡುಗಿಯರು ಹಿರಿಯೂರಿನ ಆಜಾದ್ ನಗರದಲ್ಲಿ ಆತ ಗಂಡು ಹುಡುಕಿ ಮದುವೆ ಮಾಡಿಸಿದ ಆರಂಭದಲ್ಲಿ ಸುಖವಾಗಿಯೇ ಇದ್ದರು. ಅಬ್ದುಲ್ಲಾ ಈ ಊರಿನವನೇನೂ ಅಲ್ಲ. ಹಾಗೆ ನೋಡಿದರೆ ಈ ಊರಲ್ಲಿರುವವರೆಲ್ಲರೂ ಈ ಊರಿನವರಲ್ಲ. ಏನೇನೋ ಕಾರಣಗಳಿಗೆ ಗುಳೇ ಹೊರಟು ಈ ದಿನ್ನೆಗೆ ಬಂದು ಬೀಡುಬಿಟ್ಟಿದ್ದರು. ಅದೇ ರೀತಿಯಲ್ಲಿ ಆಂಧ್ರದಿಂದ ಬಂದಾಗ ಅಬ್ದುಲ್ಲಾ ತಾಯಿಯ ಉದರದಲ್ಲಿ ನಾಲ್ಕು ತಿಂಗಳ ಕೂಸಾಗಿದ್ದ. ಯಾರ್ಯಾರದೋ ಹೊಲದಲ್ಲಿ ಕೂಲಿನಾಲಿ ಮಾಡುತ್ತಾ ಜೀವನ ದೂಕುತ್ತಿದ್ದ ಅಬ್ದುಲ್ಲಾನ ತಂದೆ ಹುಸೇನನಿಗೆ ಸುತ್ತಲಿನ ಜನ ಆಸ್ತಿ ಮಾಡಿರುವುದ ಕಂಡು ತಾನೂ ಹೊಲ

ಮಾಡಿಕೊಳ್ಳಬೇಕೆಂಬ ಒಂದು ಸಣ್ಣ ಆಸೆ ಮೂಡಿ ಇದೇ ರಾಮ್ಸಾಮಜ್ಜನ ದೊಡ್ಡಪ್ಪನ ಸಹಾಯದಿಂದ ಜಮೀನು ಖರೀದಿಸಿದ್ದ. ತೆಂಗು ನೆಡಿಸಿದ, ಬಾಳೆ ಹಾಕಿದ, ಪಕ್ಕದ ಹೊಲವನ್ನು ಗೋರಿಗಗೆ ಹಿಡಿದು ಕಬ್ಜು ಹಾಕಿದ. ಅಬ್ದುಲ್ಲಾ ಮಾತಾಡಲು ಕಲಿತ ದಿನ ಹುಸೇನ ಆ ತೋಟದ ನಡುವಲ್ಲಿ ಒಂದು ಪುಟ್ಟ ಅರಮನೆಯೊಂದನ್ನು ಕಟ್ಟಿಸಿದ್ದ. ಅಬ್ದುಲ್ಲಾ ವಯಸ್ಸಿಗೆ ಬಂದು ನಿಂತಾಗ ಏಕೋ ಹುಸೇನನಿಗೆ ದೇಶಾಂತರ ಹೋಗಬೇಕು ಎನಿಸಲು ಶುರುವಾಯಿತು. ಅಬ್ದುಲ್ಲಾನ ಲೀಲೆಗಳು ಹೆಚ್ಚಾದಂತೆ ಹೊಲದ ಉಸಾಬರಿಯನ್ನೆಲ್ಲ ಅವನಿಗೊಪ್ಪಿಸಿ ತನ್ನ ಹಳೆಯ ಬಲೂನ್ ವ್ಯಾಪಾರಕ್ಕೆ ಮರಳಿದ. ಮಗನ ಅಡ್ಡಿಯನ್ನು ತುಚ್ಛೀಕರಿಸಿ ಹಿರಿಯೂರಿನಲ್ಲಿ ಬಲೂನು ಕೊಂಡು ಹೊಸದುರ್ಗದ ಹಳ್ಳಿಗಳ ಕಡೆ ಹೊರಟುಬಿಟ್ಟ. ವಾರಕ್ಕೊಮ್ಮೆಯೋ ತಿಂಗಳಿಗೊಮ್ಮೆಯೋ ಮಾತ್ರ ಮನೆಗೆ ಬರುತ್ತಿದ್ದ ಅಪ್ಪನನ್ನು ತಿರಸ್ಕಾರ-ಪ್ರೀತಿ ಬೆರೆತ ಭಾವದಿಂದಲೇ ನೋಡುತ್ತಿದ್ದ ಅಬ್ದುಲ್ಲಾ ಕೊನೆಗೆ ತನ್ನ ಅಮ್ಮನ ಗೋರಿಯ ಬಳಿಯೇ ಅಪ್ಪನನ್ನೂ ಹೂತ. ಆಕಾಶಕ್ಕೆ ಏಣಿ ಹಾಕಿ ತಾರೆಗಳ ಹಿಡಿಯುವ, ಭೂ ಗರ್ಭವನ್ನು ಸೀಳಿ ಬಂಗಾರದುಂಡೆಗಳ ಆರಿಸುವ, ಸಮುದ್ರಕ್ಕೆ ಹಣ ಚೆಲ್ಲಿ ಮೀನ ಹಿಡಿಯೋ ಛಾತಿಯುವನಾದ ಅಬ್ದುಲ್ಲಾ ಮೆಲ್ಲಗೆ ಕರಗ ಹತ್ತಿದ್ದು ಮದುವೆಯಾಗಿ ಇಪ್ಪತ್ತು ವರ್ಷಗಳ ನಂತರ.

ಮಾರಿಕಣಿವೆ ಡ್ಯಾಂ ಬತ್ತಿ ಹೋಗಿ ತನ್ನ ಹೊಲವನ್ನು ಬರಡಾಗಿಸಿತ್ತು. ತೆಂಗು ಉರುಳಿದವು. ಇದು ಸಾಲದೆಂಬಂತೆ ಬಾಂಬೆಗೆ ಕೊಟ್ಟಿದ್ದ ತನ್ನೊಬ್ಬ ಮಗಳು, ಮೊಮ್ಮಕ್ಕಳು, ಅಳಿಯ ಎಲ್ಲರನ್ನೂ ಬಾಂಬೆಯ ಕೋಮುಗಲಭೆ ಆಹುತಿ ಹಾಕಿಕೊಂಡಿತ್ತು. ಇನ್ನೊಬ್ಬ ಮಗಳು ಬಾಂಬೆ ಬಿಟ್ಟು ಡೆಲ್ಲಿಗೆ ಹೋಗಿ ಆರು ವರ್ಷವಾದರೂ ಅವರಿಂದ ಒಂದು ಪತ್ರದ ಸುಳಿವೂ ಇಲ್ಲ. ತನ್ನೆರೆಡು ಗಂಡುಮಕ್ಕಳು ಪುಂಡು ಪೋಕರಿಗಳಾಗಿ ಅಂಡಲೆಯುತ್ತಿದ್ದರು. ಒಬ್ಬ ಮಾತ್ರ ಓದಿ ಮುಂದೆ ಬಂದಿದ್ದ. ಇರುವ ಇಪ್ಪತ್ತೆಕರೆ ಹೊಲದಲ್ಲಿ ಅರ್ಧದಷ್ಟು ಸೀಮೆಜಾಲಿಯೇ ತುಂಬಿವೆ. ಇನ್ನು ತನ್ನ ಕೊನೇ ಹೆಣ್ಣು ಮಕ್ಕಳಿಬ್ಬರ ಬದುಕೋ ಹೇಳಬಾರದು. ಅವರ ಗಂಡಂದಿರಿಬ್ಬರೂ ರಣಕುಡುಕರು. ಇದ್ದ ಚೂರುಪಾರು ಆಸ್ತಿಗಳೆಲ್ಲ ವೇದಾವತಿ ನದಿಯಂತೆ ಇಂಗಿ ಹೋಗಿ ಒಬ್ಬ ಗುಜರಿಯಲ್ಲಿ ಕೆಲಸಕ್ಕೆ ಸೇರಿದ್ದರೆ, ಇನ್ನೊಬ್ಬ ವರ್ಕ್‌ಶಾಪ್‌ನಲ್ಲಿದ್ದ. ಮಕ್ಕಳನ್ನೂ ಅಲ್ಲಿಗೆ ತಳ್ಳಿದ್ದಾರೆ. ಓದಿಸಬೇಕೆಂಬ ಆಸೆ ಯಾರಿಗೂ ಇಲ್ಲ. ಬೆಂಗಳೂರಿನಲ್ಲಿರೋ ಮಗನೋ ಇವರ್‍ಯಾರ ಉಸಾಬರಿಯೂ ಬೇಡವೆಂದು ಬಸವನಗುಡಿಯಲ್ಲಿ ಫ್ಲಾಟ್ ಕಟ್ಟಿಸಿ ಹೆಂಡ್ರು-ಮಕ್ಕಳೊಡನೆ ಹಾಯಾಗಿದ್ದಾನೆ. ಈ ಇಬ್ಬರು ಸೈತಾನ್‌ಗಳಂತೆ ದಿನದಿನಕ್ಕೆ ಬೆಳೆಯುತ್ತಲೇ ಇದ್ದಾರೆ.

ಈ ದಿನ ತನ್ನ ಕೊನೇ ಮಗಳು ನಫೀಜಾ ಮನೆಗೆ ಬರುತ್ತೇನೆಂದು ಪಾತ್ರೆ ಮಾರೋ ಆಸೀಫ್‌ನ ಬಳಿ ಹೇಳಿ ಕಳುಹಿಸಿದ್ದಳು. ಪಾಪ! ಏನು ಕಷ್ಟವೋ ಏನೋ! ಮಕ್ಕಳನ್ನೂ ಕರೆದುಕೊಂಡು ಬರುತ್ತಾಳೋ ಏನೋ...ಗಂಡ ಹೊಡೆದು ಬಡಿದು ಹೊರದಬ್ಬಿದ್ದರೆ?! ಕಳೆದ ಸರ್ತಿ ಬಂದಾಗ ಆ ಹರಿದ ಕುಪ್ಪಸವ ಕಂಡು ದುಃಖ ತಾಳಲಾಗಲಿಲ್ಲ. ಈ ಸರ್ತಿಯಾದರೂ ಅವಳಿಗೆ ಒಂದು ಹೊಸ ಸೀರೆ, ಕುಪ್ಪಸ ತೆಗೆದುಕೊಡಬೇಕು ಎಂದುಕೊಳ್ಳುತ್ತಾ ಭೀಮನಬಂಡೆ ಕಡೆ ಹೆಜ್ಜೆ ಹಾಕುತ್ತಿದ್ದ ಅಬ್ದುಲ್ಲಾ. ತನ್ನ ಊರಿಗೆ ಈ ಹೊತ್ತಲ್ಲಿ ಬಸ್ ಇಲ್ಲ. ಮಸ್ಕಲ್ ಕಡೆಯ ಬಸ್ಸಿಗೆ ಬಂದು ಭೀಮನಬಂಡೇಲಿ ಇಳಿದು ನಡೆದು ಬರುವಳೇನೋ ಎಂದು ಅತ್ತ ಜೋರಾಗಿ ಹೆಜ್ಜೆ ಹಾಕಲೂ ಆಗದೆ ಉಸಿರೆಳೆದುಕೊಳ್ಳುತ್ತಾ ಮೆಲ್ಲಗೆ ನಡೆದು ಹೋಗುತ್ತಿದ್ದ. ಎದುರಿಗೊಂದು ಆಕೃತಿ! ಹಾಂ... ಅವನೇ?! ಅವನ ಹೆಸರು... ಹೌದು ಅವನೆ. ಆ ಏನ ಜಾತ್ರೇಲಿ ತನಗೆ ನರಕ ಹಿಂಸೆ ಕೊಟ್ಟವನು.

★★★

ತಾನೂ ಸಿದ್ಧನಿರಬೇಕು. ಕೊಲ್ಲಲು ಯತ್ನಿಸಿದರೆ ಅವನಿಗಿಂತ ಮೊದಲು ತಾನು ಚಾಕು ಹಾಕಬೇಕು. ಏನೋ ವಿಷಮ ಗಳಿಗೆ ಅಂತ ಆದದ್ದನ್ನೆಲ್ಲ ಮರೆಯಲಿಲ್ಲವಲ್ಲ ಈ ಸಾಬಿ. ಈ ಇಳಿವಯಸ್ಸಲ್ಲೂ ಎಷ್ಟು ಪದರಗುಟ್ಟಿಸುತ್ತಿದ್ದಾನೆ. ಎಷ್ಟು ಪೊಗರು! ಬಿಡಬಾರದು. ಅಂದು ಜಾತ್ರೇಲಿ ಕೊಟ್ಟಿದ್ದನ್ನು ಇನ್ನೂ ಇವ ಮರೆತಿಲ್ಲವೆಂದ್ರೆ ಈ ಕೊನೇಗಾಲದಲ್ಲಿ ಭಯಂಕರವಾದ ಏಟನ್ನೇ ಕೊಡಬೇಕು. ಅದನ್ನು ಇವನ ವಂಶಜರೆಲ್ಲರೂ ನೆನಪಲ್ಲಿಟ್ಟುಕೊಳ್ಳಬೇಕು. ಅಂತಹ ಏಟೇ ಕೊಡಬೇಕು. ಬರಲಿ, ಪುರುಗೈಯಲ್ಲೇ ಅವನನ್ನು ನೆಲಕ್ಕುರುಳಿಸಿ ಬತ್ತಲೆಗೊಳಿಸಿ ಚಾಕು ಹಾಕಿದರೆ ಇವನ ಮಕ್ಕಳಲ್ಲ ಮೊಮ್ಮಕ್ಕಳ ಮಕ್ಕಳೂ ಗ್ಯಾಪಕದಲ್ಲಿಟ್ಟುಕೊಳ್ಳಬೇಕು. ತನ್ನ ಬಳಿಯೇ ಬಾಲ ಅಲ್ಲಾಡಿಸುತ್ತಾನಲ್ಲ!

ಬಾ... ಬಾರೋ ಸಾಬಿ, ಕಾದೈತೆ ಬಾ. ಈ ಸಾಯೋ ವಯಸ್ಸಲ್ಲೂ ನಿಂಗೆ ನರಳ್ತಾ ಸಾಯಬೇಕೂಂತ ಆ ಪರಮಾತ್ಮ ಬರೆದಿದ್ರೆ ನಾ ಏನ್ನ ಮಾಡೋಕಾಗುತ್ತೆ. ಬಾ ಒಂದ್ಕೈ ನೋಡ್ತೀನಿ.

ಬಂದ.... ಸಾಬಿ ಬಂದ. ಯಾಕೀ ಭಯ ನನ್ನೊಳಗೆ. ಕೈ ಎತ್ತಿದ್ದೆ ಅವನ ತೊಡೆಗಳ.....

★★★

ವಿಷಯ ಬೇಗನೆ ಪಸರಿಸಿತ್ತು. ರಾಮ್ಲಾಮಜ್ಜನ ಮಕ್ಕಳು ಹೌಹಾರತೊಡಗಿದಾಗ ಇಕ್ಕನೂರಿನ ವೀರೇಶ ಮಾತಿನಲ್ಲಿ ಅವರನ್ನು ಕುಣಿಯುವಂತೆ ಮಾಡುತ್ತಿದ್ದ. 'ಇರುವ ಒಂದೇ ಒಂದ್ಮನೇರು ಹೀಗಾಡಿದ್ರೆ, ನಾವು ನೂರ್ಮನೇರು, ಎಷ್ಟು ಧೈರ್ಯ ಆ ತುರ್ಕರಿಗೆ. ಅತಿಯಾಗ್ತ ಇದೆ. ಇನ್ನು ನಾವು ಬಿಡಬಾರ್ದು' ಎಂದು ವೀರೇಶ ಬಂದವರೆಲ್ಲರಲ್ಲೂ ಗಮನ ಸೆಳೆಯಲು ಪ್ರಯತ್ನಿಸುತ್ತಿದ್ದ. ಸೇರಿದ್ದ ಜನ ವೀರೇಶನ ಬಿರುಬಿರು ಮಾತುಗಳ ಕೇಳಿಸಿಕೊಂಡಿದ್ದು ಮಾತ್ರವಲ್ಲದೆ ಅವನ ಅರ್ಧದಿಗಂಬರತ್ವವನ್ನು ನೋಡದೆ ಕಣ್ಮುಚ್ಚಿರಲು ಅವರಿಗೆ ಸಾಧ್ಯವಾಗಲಿಲ್ಲ. ವೇಲ್ಸಾಮಿಯ ಹೆಗಲಲ್ಲಿದ್ದ ಅವನ ಆರುವರ್ಷದ ಮೊಮ್ಮಗು ವೀರೇಶನ ಪಂಚೆ ಉದುರಿಬಿದ್ದು ಆತ ಅರ್ಧಗೊಮ್ಮಟನ ಪ್ರತಿರೂಪವಾಗಿರುವುದ ಕಂಡು ಕಿಟಾರನೆ ನಕ್ಕು 'ಶೇಮ್ ಶೇಮ್' ಎಂದು ಕೂಗಿಕೊಂಡಿತು. ಮಗುವಿನ ಕೇಕೆಗೆ ಬೆಚ್ಚಿ ಎಲ್ಲರ ತುಟಿಗಳಲ್ಲಿ ನಗು ಲಾಸ್ಯವಾಡುತ್ತಿರುವುದು ಕಂಡು ವೀರೇಶ ಕೆಳಗೆ ದೃಷ್ಟಿ ಹಾಯಿಸಿದ. ಅಬ್ದುಲ್ಲಾನ ವಿಷಯ ಕೇಳಿದ್ದೇ ತಕ್ಷಣ ಸ್ನಾನ ಮಾಡುತ್ತಿದ್ದವನು ಹಾಗೇ ಪಂಚೆಯೊಂದನ್ನು ಮಾತ್ರ ಸೊಂಟಕ್ಕೆ ಸುತ್ತಿಕೊಂಡು ಬಂದಿದ್ದ. ಪಂಚೆಯನ್ನೆತ್ತಿಕೊಂಡು ಮತ್ತೆ ಮಾತುಗಳ ಶುರುವಚ್ಚಿಕೊಂಡ.

'ವೀರೇಶ ಹೇಳೋದ್ರಲ್ಲೂ ನ್ಯಾಯ ಇದೆ. ಯೋಚ್ನೆ ಮಾಡಿ. ಇವರನ್ನು ಹೀಗೇ ಬಿಡಬಾರ್ದು. ದೇಶ ಬಿಟ್ಟು ಓಡಿಸಬೇಕು' ಎಂದು ಊರಿನ ಯಾವುದೋ ಹೊಸ ಸಂಘದ ಅಧ್ಯಕ್ಷ ಕುಮರೇಷ ಹೇಳಿದ್ದನ್ನು ಕೆಲವರು ಗಂಭೀರವಾಗಿ ತೆಗೆದುಕೊಂಡರು. ಪಡ್ಡೆಗಳೆಲ್ಲರೂ ವೀರೇಶ-ಕುಮರೇಶರ ನಾಯಕತ್ವದಲ್ಲಿ ಸೇನೆ ಕಟ್ಟಿಕೊಂಡರು. ರಾಮ್ಲಾಮಜ್ಜನ ಮಕ್ಕಳ ಮುಖದಲ್ಲಿ ಸೂತಕದ ಕಳೆ ಇದ್ದಂತಿತ್ತು.

ಇತ್ತ ಹಿರಿಯೂರಿನಲ್ಲಿ ಆಟೋಗಳಲ್ಲಿ ಅಬ್ದುಲ್ಲಾನ ಮನೆ ಮುಂದೆ ಜನ ಬಂದಿಳಿದಿದ್ದರು. ಅವನ ಕಿರಿಮಗ ವಾಸಿಮ್ ನೇರ ಮಸೀದಿಗೆ ಹೋಗಿ ನಮಾಜು ಮುಗಿದದ್ದೇ ತಡ ಕೆಲ ಪೋಕರಿಗಳ ಕರೆತಂದಿದ್ದ. ಒಣಗಿ ನಿಂತಿದ್ದ ಹುಣಸೆಮರದ ಬುಡದಡಿ ಎಲ್ಲರೂ ಗುಂಪುಗೂಡಿ ತಮ್ಮ ತಮ್ಮೊಳಗೆ ಮಾತನಾಡಿಕೊಳ್ಳುತ್ತಿದ್ದರು. ಅಬ್ದುಲ್ಲಾನ ಮಕ್ಕಳು ರೂಮಿನ ಕಡೆ ನೋಡಿದರು. ಅವ

ರೊಳಗೆ ಈಗ ಒಂದು ತೆರನಾದ ತಳಮಳ ಶುರುವಾದಂತೆ ಕಂಡಿತು.

ಈ ನಾಲ್ವರ ಬಗ್ಗೆ ಒಂದು ಮಾತನ್ನಾದರೂ ಹೇಳಲೇಬೇಕು. ಅಬ್ದುಲ್ಲಾನ ಎರಡು ಗಂಡುಗಳು ಹಾಗೂ ರಾಮ್ಲಾಮಜ್ಜನ ಎರಡು ಗಂಡುಗಳು ಸೋಮಾರಿಗಳೆಂದರೂ ಅವರ‍್ಯಾರೂ ಹುಟ್ಟಾ ಸೋಮಾರಿಗಳಲ್ಲ. ಅವರ ಬದುಕಿನ ಪ್ರಯತ್ನಗಳೂ ಪರಸ್ಪರ ಭಿನ್ನವಾಗಿದ್ದರು ಕೆಲವೊಂದು ವಿಚಾರಗಳಲ್ಲಿ ಸಾಮ್ಯವಾಗಿದ್ದವು. ಬೋರ್ ಹಾಕಿಸಿ 'ಕೃಷಿ' ಮಾಡಲು ಯತ್ನಿಸಿ ಕೊನೆಗೆ ಕೈಚೆಲ್ಲಿ ಕುಳಿತ್ತಿದ್ದರು. ದಿನದಿನಕ್ಕೆ ಏರುತ್ತಿದ್ದ ರಸಗೊಬ್ಬರ, ಔಷಧಗಳ ಬೆಲೆ ಅವರನ್ನು ವಿಚಲಿತರನ್ನಾಗಿಸಿದ್ದವು. ಹಾಕಿದ ದುಡ್ಡೆಲ್ಲವೂ ಹೊಲದಲ್ಲಿ ಇಂಗಿ ಹೋಗುತ್ತಿದ್ದವು. ಬ್ಯಾಂಕ್‌ನವರ ಕಾಟ ತಪ್ಪಿಸಲು ಹೆಣಗಾಡುತ್ತಲೇ ಇದ್ದರು. ಅವರ ಕೆನ್ನೆಗಳ ನೋಡಿದರೆ ಅವರ‍್ಯಾರೋ ಮಧ್ಯಕಾಲೀನ ಯುಗದ ನರಮಾನವರಂತೆ ಕಾಣುತ್ತಿದ್ದರು. ಬಾಳಾಟವ ನಡೆಸಲು ಹೊಸೊಸ ತಂತ್ರಗಳ ಕ್ಷಣಕ್ಷಣಕೆ ಹೊಸೆಯುತ್ತಲೇ ಹೋಗುತ್ತಿರುವಾಗ ಈ ಘಟನೆ ನಡೆದು ಅವರನ್ನಿನ್ನೂ ಖಿನ್ನರಾಗಿಸಿ ಘಾತಗೊಳಿಸಲು ಮುಂದಾಯಿತು.

★★★

ಅಬ್ದುಲ್ಲಾ ಎದ್ದವನೆ ನೇರ ರಾಮ್ಲಾಮಜ್ಜನ ಮುಂದೆ ನಿಂತ. ಕೈಯಲ್ಲಿ ಚಾಕು. ರಾಮ್ಲಾಮಜ್ಜನೂ ಎದ್ದ. ಚಾಕು ಆಗಲೇ ಅವನ ಎಡಗೈಯಲ್ಲಿ ರಾರಾಜಿಸುತ್ತಿತ್ತು. ಇಬ್ಬರೂ ದುರುಗುಟ್ಟಿದರು. ಉಸಿರನ್ನೊಮ್ಮೆ ಜೋರಾಗಿ ಒಳಗೆ ಎಳೆದುಕೊಂಡು ಹೊರಬಿಟ್ಟರು. ಏನನ್ನೂ ಮಾತನಾಡಲಿಲ್ಲ. ಕೈಯನ್ನೆತ್ತಲೂ ಇಲ್ಲ. ವಾಪಸ್ ಬಂದು ಛೇರ್‌ನಲ್ಲಿ ಕೂತ ಅಬ್ದುಲ್ಲಾ. ರಾಮ್ಲಾಮಜ್ಜನೂ ಕೂತ. ಕೆಕ್ಕರಿಸಿ ಪರಸ್ಪರ ನೋಡುತ್ತಲೇ ಇದ್ದರು.

ಜಾತ್ರೇಲಿ ಅಷ್ಟು ಜನರ ಮುಂದೆ ರಕ್ತ ಹರಿಸಿದ್ದು ಜ್ಞಾಪಕಕ್ಕೆ ಬಂತು. ಉರಿಯ ಹತ್ತಿದ ಅಬ್ದುಲ್ಲಾ. ಉಗುರುಗಳ ನೋಡಿಕೊಂಡ. ಅಂದು ಕಿತ್ತು ಹೋದ ಚರ್ಮಗಳ ಗುರುತನ್ನು ನೋಡಿಕೊಂಡ. ಇವನೇ ಅಲ್ಲವೆ ಅಂದು ತನ್ನ ಉಗುರುಗಳ ಕಿತ್ತು ನರಕ ಹಿಂಸೆ ಕೊಟ್ಟವ. ಇವನನ್ನು ಬಿಡಬಾರದು ಎಂದುಕೊಂಡ, ರಾಮ್ಲಾಮಜ್ಜನ ಮುಖ ನೋಡಿದ. ಆತ ತಲೆ ಕೆಳಗೆ ಹಾಕಿದ, ಅಳುತ್ತಿದ್ದ. ಅವನ ಅಳುವಿನ ದನಿ ಈತನಿಗೆ ಕೇಳಿಸುತ್ತಿತ್ತು. ಇಬ್ಬರ ಹೃದಯಗಳೂ ಜೋರಾಗಿ ಬಡಿದುಕೊಳ್ಳುತ್ತಿದ್ದವು. ಹೊರಗೆ ಏನೋ ಸದ್ದು. ಮತ್ಯಾರದೋ ಅಳುವ ದನಿ. ಆಲಿಸಿದ. ತನ್ನ ಮಗಳ ದನಿ. ಏಕಕ್ಕೋ ಜೋರಾಗಿ ಅಳುತ್ತಿದ್ದಾಳೆ. ಅವಳನ್ಯಾರೋ ಸಮಾಧಾನಿಸುತ್ತಿದ್ದಾರೆ. ಇನ್ಯಾರೋ ಕೂಗಿಕೊಳ್ಳುತ್ತಿದ್ದಾರೆ. ಏನು ವಿಷಯವೋ ಏನೋ? ತಾನೂ ಹೋಗಲಾ ಎಂದು ಎದ್ದ. ರಾಮ್ಲಾಮಜ್ಜನ ಕಡೆ ನೋಡಿದ. ಆತ ಈಗ ಅಳುವುದ ನಿಲ್ಲಿಸಿದ್ದ. ಅವನ ಕಣ್ಣುಗಳು ಈಗ ಬೇರೆ ತೆರನಾಗಿ ಕಾಣಿಸುತ್ತಿತ್ತು. ಸೂಕ್ಷ್ಮವಾಗಿ ಗಮನಿಸಿದ. ಅವನ ಕಣ್ಣನ್ನು ದಿಟ್ಟಿಸುತ್ತಿದ್ದ. ಹೊರಗೆ ಮಗಳ ಕೀರಲು ದನಿ ಕೇಳಿಸುತ್ತಲೇ ಇತ್ತು. ಅವನ ಕಣ್ಣುಗಳಲ್ಲಿ ಯಾವುದೋ ಅಪರಿಚಿತ ಭಾಷೆಯ ಪದಗಳು ಕಾಣಿಸಿದಂತಿತ್ತು. ಚಾಕುವನ್ನು ಮತ್ತೆ ಹೊರತೆಗೆದ, ರಾಮ್ಲಾಮಜ್ಜನ ಕಡೆ ನಡೆಯತೊಡಗಿದ. ರಾಮ್ಲಾಮಜ್ಜನೂ ಚಾಕುವನ್ನು ಎತ್ತಿಕೊಂಡ. ಇಬ್ಬರೂ ಎದುರುಬದುರು ನಿಂತರು. ಒಂದೆಜ್ಜೆ ಹಿಂದೆ ಸರಿದರು...

ಕೈಯೆತ್ತಿದರು... ಒಂದೇ ರಭಸ... ಚಾಕು ಹೊಟ್ಟೆಗೆ ಚುಚ್ಚಿಕೊಂಡಿತು.

ಅವರಿಬ್ಬರು ತಮ್ಮನ್ನು ತಾವೇ ಕೊಂದುಕೊಂಡರು.

ಸುತ್ತಲೂ ಕವಿದ ಮೌನ ಹೊರಗಿನ ಸದ್ದನ್ನು ಅಣಕಿಸುವಂತಿತ್ತು.

ಯುದ್ಧ ಗೆಳೆಯರು ಮತ್ತು ನಾನು

- ಕಿರಣ ಹೆಗಡೆ, ಮೆಣಸಿ

ಕಿವಿ ಒಳಗೆ ಮೆದುವಾಗಿ
ಪಿಸುಗುಟ್ಟುವ ಮಾತು
'ಬಾ ಹೊರಗೆ'

ಚಳಿ ಗಾಳಿ, ಬೆಳಗಿನ
ಮಬ್ಬು ಇಬ್ಬನಿ
ನಿನ್ನೆಯ ದುಃಖ, ಸಂತಾಪಗಳು
ಮರಗಟ್ಟಿವೆ
ಹೀಗೆ ಆಗುತ್ತದೆ - ನಾಲ್ಕಲ್ಲ ಮೂರಲ್ಲ
ಎರಡಲ್ಲ ದಿನಕ್ಕೊಮ್ಮೆ
ಸತ್ತು ಕಾಡುತ್ತಾರೆ.

ಅಲ್ಲಿ ಕಾದಾಡುವ ಮನುಷ್ಯರು
ನನ್ನ ಆಪ್ತರು, ಪ್ರೀತಿ ಪಾತ್ರರು
ನನ್ನ ಎದೆ ಒಳಗೆ ಸುಂದರವಾದ
ಮನೆ ಕಟ್ಟಿ 'ಇಲ್ಲೇ ಇರು, ಹೊರಗೆ
ಬರಬೇಡ' ಎಂದು ಅವರು
ಹೇಳಿ ಹೋಗಿದ್ದಾರೆ.

ನಿಜಕ್ಕೂ, ಅವರು ಸತ್ತ ಮೇಲೆ
ನಾನು ಒಬ್ಬನೆ ಅವರಿಗಾಗಿ ಸಂತಾಪ
ಅರ್ಪಿಸುವವನು, ಎಲ್ಲ ದಿನ
ದುಃಖಿಸುವವನು
ಆದ್ದರಿಂದ ನನ್ನ ಕರೆಯಬೇಡ
ಕರೆದು-ಕರೆದೂ ಅವರಿಗೆ ನನ್ನ ಮೇಲೆ
ಇದ್ದ ಪ್ರೀತಿ
ಇಲ್ಲದಂತೆ ಮಾಡಬೇಡ
ನನ್ನ ಕ್ಷಮಿಸು.

★★★

ಕಣ್ಣು ಮುಚ್ಚಿದಾಗ ಕಿವಿ ಒಳಗೆ
ತಣ್ಣನೆ ಗಾಳಿ ಸೇರಿತು
ಮತ್ತೆ ಅದೇ ಧ್ವನಿ:
'ಬಾ ಹೊರಗೆ'

ಈ ಸಲ - ಈ ಸಲ ದೃಢವಾಗಿ ಹೇಳಿದೆ
ನನ್ನವರು ನನಗಾಗಿ
ಅನ್ನ, ಬಟ್ಟೆ ಮನರಂಜನೆ
ನೀಡಿದ್ದಾರೆ. ಸುಂದರ ಕನಸು
ಬೀಳುವಂತೆ ಮನೆ- ಮಹಡಿ
ಕಟ್ಟಿಸಿದ್ದಾರೆ
ಈಜಲು ತಿಳಿಯಾದ ಕೊಳವಿದೆ
ಆಡಲು ವಿಶಾಲವಾದ ಮೈದಾನವಿದೆ
ಕೀಲಿ ಕೊಟ್ಟರೆ ಬೊಂಬೆಗಳು
ನನ್ನ ಜೊತೆ ಮಾತನಾಡುತ್ತವೆ
ಬಹುಶಃ ಸುಳ್ಳಲ್ಲ
ನಾನು ಸುಖಿ ಇದ್ದೇನೆ.

ನಾನು ದುಃಖಿಯಾಗುವುದು
ಅವರೆ - ನನ್ನವರು ಸತ್ತಾಗ ಮಾತ್ರ
ದಯವಿಟ್ಟು ಮತ್ತೆ - ಮತ್ತೆ ಕರೆದು
ನೋಯಿಸಬೇಡ
ನಿನ್ನೆ ಸತ್ತ ಗೆಳೆಯನ ದುಃಖದಿಂದ
ಚೇತರಿಸಿಕೊಳ್ಳುತ್ತಿದ್ದೇನೆ
ಪ್ರಾಯಶಃ ದೂರವಿಲ್ಲ
ಮತ್ತೊಬ್ಬ ಗೆಳೆಯನ ಸುದ್ದಿ ಬರಬಹುದು.



ಕಲೆಯನ್ನು ಕುರಿತ ವ್ಯಯಕ್ತಿಕ ಮತ್ತು ಸಾಮುದಾಯಕ ನಿಲುವುಗಳು

- ಮೂಲ ಸಫ್ದರ್ ಹಶ್ಮಿ

ಅನು- ಡಾ॥ ಹೆಚ್. ಎಸ್. ರಾಘವೇಂದ್ರರಾವ್

ಈಚೆಗೆ, ಬೀದಿರಂಗಭೂಮಿಯಲ್ಲಿ ನಾಟಕಗಳನ್ನು ಕರಡು ಪ್ರತಿಗಳನ್ನು ತಯಾರು ಮಾಡುವಾಗಿನ ಸಮಸ್ಯೆಗಳನ್ನು ಕುರಿತ ಚರ್ಚೆಯೊಂದು ನಡೆಯಿತು. ಅದನ್ನು ಪ್ರಾರಂಭ ಮಾಡಿದ ಸುಪ್ರಸಿದ್ಧ ಮರಾಠೀ ಯುವ ನಾಟಕಕಾರರೊಬ್ಬರು ಈ ಹೇಳಿಕೆಯನ್ನು ಮಾಡಿದರು. 'ಬೀದಿ ರಂಗ ಭೂಮಿಗೆ ಬಹುಕಾಲ ಉಳಿಯುವಂತಹ ಪರಿಣಾಮವನ್ನು ಬೀರುವ ಶಕ್ತಿಯಿಲ್ಲ. ಅದು ಪ್ರೇಕ್ಷಕರ ಅಂತರಂಗವನ್ನು ತೀವ್ರವಾಗಿ ಕಲಕಲಾರದು. ಏಕೆಂದರೆ ಅದು ಪ್ರೊಸೀನಿಯಂ ರಂಗ ಭೂಮಿಯ ಹಾಗೆ, ಜೀವನದ ಮೂಲಭೂತ ಸಮಸ್ಯೆಗಳಾದ ಸಾವು, ಪ್ರೀತಿ, ಮುಂತಾದವನ್ನು ಒಳಗೊಳ್ಳಲಾರದು. ಆ ಮಾತನ್ನು ಕೇಳುತ್ತಾ ಕುಳಿತವರಲ್ಲಿ ಅನೇಕರು ಹೌದು, ಹೌದು ಎನ್ನುವಂತೆ ಗೋಣು ಹಾಕಿದರೆ ಕುತೂಹಲದ ಸಂಗತಿಯೆಂದರೆ ಅವರ ಪೈಕಿ ಬಹುಭಾಗ, ಇಂಡಿಯಾದ ಬೇರೆ, ಬೇರೆ ಭಾಗಗಳಿಂದ ಬಂದ ಬೀದಿ ರಂಗಭೂಮಿಯ ಸಕ್ರಿಯ ಕಾರ್ಯಕರ್ತರಾಗಿದ್ದರು. ಬೀದಿ ರಂಗಭೂಮಿಯಲ್ಲಿ ಕೆಲಸ ಮಾಡುತ್ತಿರುವ ನಮ್ಮಂಥವರಿಗೆ, ಈ ರೀತಿಯ ಮಾತುಗಳನ್ನು ಎದುರಿಸುವುದು ದಿನನಿತ್ಯದ ಅನುಭವವಾಗಿಬಿಟ್ಟಿದೆ. ಹೀಗೆ ಮಾತನಾಡುವವರು ಕೇವಲ ಪ್ರೊಸೀನಿಯಂ ರಂಗಭೂಮಿಯ ಬೆಂಬಲಿಗರು ಮಾತ್ರವಲ್ಲ, ನಮ್ಮ ಅನೇಕ ಸಂಗಡಿಗರೂ ಕೂಡ.

ಇಂಥ ಟೀಕೆಗಳನ್ನು ಅವು ಗಂಭೀರವೇಲ್ಲವೆಂಬ ಕಾರಣದಿಂದ ನಾವು ನಿರ್ಲಕ್ಷಿಸುತ್ತಾ ಬಂದಿದ್ದೇವೆ. ಇದು ಇನ್ನು ಸಾಕು ಎಂದು ನನಗೆ ತೋರುತ್ತದೆ. ನಾವು ಅದನ್ನು ರಂಗ ಕರ್ಮಿಗಳಿಗೆ ಸಹಜವಾದ ಹೊಟ್ಟೆಕಿಚ್ಚಿನ ಫಲವೆಂದು ತಿರಸ್ಕರಿಸುತ್ತೇವೆ. ಅಥವಾ ಒಳಗೊಳಗೇ ಅವರ ಟೀಕೆ ನಿಜವಂದು ಒಪ್ಪಿಕೊಂಡು, ಆ ಮೇಲೆ, ನಮ್ಮ ಬೀದಿರಂಗ ಭೂಮಿಯ ಸಮಕಾಲೀನ ಮಹತ್ವ, ಜೀವಂತತೆ ಹಾಗೂ ರಾಜಕೀಯ ಪ್ರಭಾವಗಳನ್ನು ಸಮರ್ಥಿಸುವ ಬಿಸಿಬಿಸಿ ವಾದವಲ್ಲಿ ತೊಡಗುತ್ತೇವೆ. ನಾವು ನಮ್ಮ ರಂಗ ಭೂಮಿಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕಾದರೆ, ಈ ರೀತಿಯ ಟೀಕೆ ಟಿಪ್ಪಣಿಗಳ ಚಾರಿತ್ರಿಕ ಮತ್ತು ತಾತ್ವಿಕ ತಳಹದಿಯನ್ನು ಗ್ರಹಿಸಬೇಕೆಂದು ನನಗೆ ತೋರುತ್ತದೆ.

ಒಂದು ಹಂತದಲ್ಲಿ ಅಂಥ ಟೀಕೆಗಳು ಯುಯುಗಗಳಿಂದ ಉಳಿದುಕೊಂಡು ಬಂದಿರುವ ತಪ್ಪು ತಿಳಿವಳಿಕೆಯೊಂದರಿಂದ ಹುಟ್ಟಿಕೊಳ್ಳುತ್ತವೆ. ಉತ್ಪಾದನೆಯ ಸಾಧನಗಳಿಗೆ, ಈ ಸಂದರ್ಭದಲ್ಲಿ ಕಲಾತ್ಮಕ ಅಭಿವ್ಯಕ್ತಿಯ ಸಾಧನಗಳಿಗೆ - ತಮ್ಮಷ್ಟಕೆ, ತಾವೇ,ಏನೋ ಒಂದು ನಿಗೂಢ ಮಂತ್ರ ಶಕ್ತಿಯಿದೆಯೆಂದು ಭಾವಿಸುವುದು ಅಂಥ ತಪ್ಪುಗ್ರಹಿಕೆ. ಇಲ್ಲಿ ಪ್ರೊಸಿನಿಯಂ ಎಂದರೆ ಯಾವುದೋ ಸ್ವರ್ಗದ ಪ್ರವೇಶದ್ವಾರವೆಂದು ನೋಡಲಾಗುತ್ತದೆ. ಅದನ್ನು ದಾಟಿದರೆ ಸಾಕು, ದೈವಿಕ ಸ್ಫೂರ್ತಿ, ಸೃಜನಶೀಲತೆ ಹಾಗೂ ಮನುಷ್ಯಮೃತ್ಯು ಮತ್ತು ಪ್ರೀತಿಗಳ ಗಹನ ವಿಶ್ಲೇಷಣೆ ಮಾಡುವ ನಾಟಕಗಳನ್ನು ರಚಿಸಲು ಬೇಕಾದ ಸಕಲ ಸಲಕರಣೆಗಳು ಸಿಕ್ಕಿಯೇ ಬಿಡುತ್ತದೆಯೆಂದು ಅವರು ತಿಳಿಯುತ್ತಾರೆ. ಆಗ ಪ್ರೊಸೀನಿಯಂ ರಂಗ ಭೂಮಿಯು ಒಂದು ಬೋಧಿವೃಕ್ಷವಾಗುತ್ತದೆ. ಅದರ ಕೆಳಗೆ ಕುಳಿತ ಪ್ರತಿಯೊಬ್ಬ ಗೌತಮನೂ ಬುದ್ಧನಾಗಿಬಿಡುತ್ತಾನೆ. ಈ

ಮಾತೆಲ್ಲ ಅಪ್ಪಟ ಬುರುಡೆಯೆಂದು ಹೇಳಬೇಕಾಗಿಯೇ ಇಲ್ಲ. ಹೆಣ್ಣು ಜಾತಿಗೆ ಸೇರಿದೆ ಎನ್ನುವ ಒಂದೇ ಕಾರಣದಿಂದ ಹಸು, ಕರು ಹಾಕುವುದಿಲ್ಲ. ರಂಗ ಮಂಚವೆಂದರೆ ಹೇಳಿ ಕೇಳಿ ಖಾಲಿ ಬಯಲು. ಬೆಳಕು ಅಂದರೆ ಬೆಳಕು ಅಷ್ಟೆ. ಮೇಕಪ್ ಅಂದರೆ ಮೇಕಪ್. ವೇಷ ಭೂಷಣ ಅಂದರೆ ವೇಷ ಭೂಷಣ ಅಷ್ಟೇ. ಖಾಲೀ ಬಯಲಿಗೆ ಜೀವ ಕೊಡುವ ಶಕ್ತಿ ಯಾವುದು? ರಂಗದ ಮೇಲಿನ ದೀಪಗಳಲ್ಲ. ನಟರು ಹಾಕಿಕೊಂಡ ಒಡವೆ ವಸ್ತ್ರ ಅಲ್ಲ. ಅವರ ಮೇಕಪ್ ಅಂತೂ ಮೊದಲೇ ಅಲ್ಲ. ಜೀವನದ ಸಂಕೀರ್ಣತೆಗಳನ್ನು ಪರಸ್ಪರ ವಿರೋಧಗಳನ್ನು ಗ್ರಹಿಸ ಬಲ್ಲ ನಾಟಕಕಾರನ ಪ್ರತಿಭೆಯೇ ಆ ಶಕ್ತಿ. (ನಿಮಗೆ ಅಷ್ಟು ಇಷ್ಟ ಇದ್ರೆ ಜೀವನದ ಜೊತೆ ಸಾವು ಮತ್ತು ಪ್ರೀತಿಗಳನ್ನು ಸೇರಿಸಿಕೊಳ್ಳಿ). ಈ ಪ್ರತಿಭೆಯ ಜೊತೆ ಜೊತೆಗೆ ಜೀವಂತ, ಸೃಜನಶೀಲ ಕಲ್ಪನಾ ಶಕ್ತಿ ಇರಬೇಕು. ಆ ಮೇಲೆ ಬರೋದು ನಿರ್ದೇಶಕನ ಹಾಗೂ ವಿನ್ಯಾಸಕಾರನ ವಿಶಿಷ್ಟ ಕುಶಲತೆ ಮತ್ತು ಶೈಲಿ. ನಟರ ಚೈತನ್ಯಶೀಲ ಪ್ರತಿಭೆ, ಬೆಳಕಿನ ವ್ಯವಸ್ಥೆ ಮಾಡುವವನ ನೈಪುಣ್ಯ ವಗೈರೆ ವಗೈರೆ. ಈ ಸಾಮರ್ಥ್ಯಗಳನ್ನು ಬೆಳೆಸುವುದು ಖಾಲೀ ರಂಗ ಮಂಚವಲ್ಲ. ಇನ್ನೂ ಹಾಗೆ ನೋಡಿದರೆ ಈ ಎಲ್ಲ ಶಕ್ತಿಗಳೂ ಇರೋಕಡೆ, ತನ್ನಷ್ಟಕ್ಕೆ ತಾನೇ , ರಂಗಭೂಮಿಯ ಮೇಲೆ ಸೌಂದರ್ಯ ಚೈತನ್ಯ, ವೈಚಾರಿಕತೆ, ನಾಟಕ, ಕೊನೆಗೆ ಜೀವನ ಕೂಡ ಪ್ರತ್ಯಕ್ಷವಾಗುತ್ತದೆ. ನಿಜ ವಾಗಲೂ ಸುಂದರವಾದ, ಶಕ್ತಿಯುತವಾದ ನಾಟಕ ಯಾವುದೇ ಖಾಲಿ ಜಾಗದಲ್ಲಿ ಬೇಕಾ ದರೂ ಹುಟ್ಟಬಲ್ಲುದು. ರಂಗ ಚೌಕಟ್ಟಾಗಿದ್ದರೂ ಸರಿ, ಆಯಾಕಾರ ಇದ್ದರೂ ಸರಿ, ಗುಂಡಗಿ ದ್ದರೂ ಸರಿ, ಹೇಗಿದ್ದರೂ ಸರಿ ನಾಟಕ ನೋಡುವ ಜನ ರಂಗದ ಒಂದು ಕಡೆ ಕುಳಿತಿದ್ದರು ಅಷ್ಟೆ ಸುತ್ತಲೂ ಕುಳಿತಿದ್ದರೂ ಅಷ್ಟೇ. ಬೆಳಕಿದ್ದರೂ ಅಷ್ಟೆ ಕತ್ತಲಿದ್ದರೂ ಅಷ್ಟೇ. ಒಂದು ನಾಟಕ ಪರಂಪರೆಗೆ ಅಂಟಿಕೊಂಡವರು ಏನೂ ಬೇಕಾದರೂ ಹೇಳಲಿ, ಕಲೆ ಎನ್ನುವುದು ಎಲ್ಲಕಡೆಯೂ ಅರಳುತ್ತದೆ. ಮನುಷ್ಯನಿಗೆ ಗೊತ್ತಿರುವ ನಾಟಕ ಪರಂಪರೆಗಳಲ್ಲಿ ಅತ್ಯಂತ ಶ್ರೇಷ್ಠ ವಾದ ಗ್ರೀಕ್ ಅಭಿಜಾತ ನಾಟಕವನ್ನು ಸುಮಾರು ಹದಿನೈದು ಸಾವಿರ ಜನರಿಗೆ ಏಕಕಾಲದಲ್ಲಿ ನೋಡಿಸುತ್ತಿದ್ದರು. ನಾಟಕವನ್ನು ಆಡುವ ಪ್ರದೇಶದ ಮೂರೂ ಕಡೆ ಅವರುಕುಳಿತಿರುತ್ತಿದ್ದರು. ಮೇಲಿನಿಂದ ರಾಶಿ ರಾಶಿ ಸೂರ್ಯನ ಬೆಳಕು, ಸುತ್ತಲೂ ಹರಡಿ ನಿಂತ ಬೆಟ್ಟ ಗುಡ್ಡಗಳು. ಇನ್ನೂ ಹತ್ತಿರ, ನಮ್ಮ ದೇಶಕ್ಕೇ ಬಂದರೆ, ಅತ್ಯಂತ ಜೀವಂತವಾದ ಅನೇಕ ಸಾಂಪ್ರದಾಯಿಕ ರಂಗರೂಪಗಳನ್ನು ಇಂದಿಗೂ ಪ್ರದರ್ಶಿಸುವುದು ಮೈದಾನಗಳಲ್ಲಿ ಅಥವಾ ಬಯಲು ರಂಗಮಂದಿರಗಳಲ್ಲಿ.

ನಿಜ, ನಾಟಕಮಾಡುವ ಪ್ರೇಕ್ಷಕರು ಕುಳಿತುಕೊಳ್ಳುವ ಸ್ಥಳಗಳು, ಹಲವು ಬಗೆಯ ನಾಟಕತಂ ತ್ರಗಳು ಮತ್ತು ಸಲರಣೆಗಳು , ನಾಟಕಗದ ಅಂತಿಮ ರೂಪ ಮತ್ತು ಲಕ್ಷಣಗಳನ್ನು ನಿರ್ಧರಿಸು ತ್ತದೆ. ಹಾಗೆಯೇ ನಾಟಕದ ರೂಪ, ಲಕ್ಷಣಗಳು ಮೇಲೆ ಪಟ್ಟಿ ಮಾಡಿದ ಇತರ ಸಂಗತಿಗಳನ್ನು ತೀರ್ಮಾನ ಮಾಡುತ್ತದೆ. ಯಾವುದೋಂದು ನಿರ್ದಿಷ್ಟ ಪ್ರಕಾರದ ರಂಗಭೂಮಿಯಲ್ಲಿ ಸಾಧ್ಯ ವಾಗುವ , ಒಂದು ರೀತಿಯ ತೀವ್ರತೆ, ಏಕಾಗ್ರತೆ, ಮತ್ತು ಪರಿಣಾಮಗಳು ಮತ್ತೊಂದು ಪ್ರಕಾರ ದಲ್ಲಿ ಸಾಧ್ಯವಾಗದಿರಬಹುದೆನ್ನುವುದು ನಿಜ. ಆದರೆ, ನಿರ್ದಿಷ್ಟ ರಂಗ ಪ್ರಕಾರವೊಂದರಲ್ಲಿ, ಯಾವುದೇ ಪ್ರಮಾಣದ ವಿಶ್ಲೇಷಣೆಯ ಆಳವನ್ನಾಗಲಿ ಪ್ರದರ್ಶನದ ಶಕ್ತಿ ಸೌಂದರ್ಯಗಳ ನ್ನಾಗಲಿ ಸಾಧಿಸುವುದು ಅಸಾಧ್ಯವೆದು ಹಟ ಹಿಡಿಯುವುದು ತಪ್ಪು. ಅದು ಒಂದು ಕಡೆ, ತನ್ನ ಪ್ರತಿಭೆಯ ಪ್ರದರ್ಶನಕ್ಕೆ ಹಲವು ಹೊರದಾರಿಗಳನ್ನು ಕಂಡು ಕೊಳ್ಳಲು, ಮಾನವನ ಸೃಜನ

ಶೀಲತೆಗಿರುವ ಅಪರಿಮಿತ ಸಾಮರ್ಥ್ಯವನ್ನು ಅಲ್ಲಗಳೇದಂತೆ. ಇನ್ನೊಂದು ಕಡೆ ಯಾವುದೋ ಒಂದು ಬಗೆಯ ರಂಗಾನುಭವವೇ ಸರ್ವಶ್ರೇಷ್ಠ ಮತ್ತು ಅತ್ಯಂತ ಕಲಾತ್ಮಕ ಎಂದು ಒತ್ತಿ ಹೇಳಿದಂತೆ. ತನ್ನ ಕಲಾತ್ಮಕ ಅಭಿವ್ಯಕ್ತಿಗೆಂದು ಉಪಯೋಗಿಸುವ ಸಲಕರಣೆಗಳ ಬಂಧನದಲ್ಲಿ ಸಿಕ್ಕಿಕೊಂಡಿರುವ ಕಲಾವಿದ ಮಾತ್ರ. ಅವುಗಳಿಲ್ಲದ ಪ್ರದರ್ಶನ ತನಗೆ ಸಾಧ್ಯವೇ ಇಲ್ಲವೆಂದು ಹೇಳುತ್ತಾನೆ. ಈ ವಿಷಯದ ಬಗ್ಗೆ ನಾವು ಅತ್ಯಂತ ಸ್ಪಷ್ಟವಾಗಿರೋಣ. ರಂಗ ಭೂಮಿಯು ಎಂದೆದಿಗೂ ತನಗೆ ಅಂಟಿಕೊಂಡಿರುವ ಬಾಜಾಬಜಂತ್ರಿಗಳನ್ನು ಅವಲಂಬಿಸಿ ಬದುಕಿರಬಾರದು. ಒಬ್ಬ ನಾಟಕಕಾರನು ತನ್ನ ಸುತ್ತಲಿನ ಬದುಕನ್ನು ಗ್ರಹಿಸುವ ಸೃಜನಾತ್ಮಕ , ಚಲನ ಶೀಲವಾದ ಬಗೆಯೇ. ಅದಕ್ಕೆ ಅಗತ್ಯವಾದ ತಂತ್ರ ಸಾಧನೆಗಳನ್ನು ಹುಟ್ಟಿಸಿಕೊಳ್ಳುತ್ತದೆ. ಈ ಸತ್ಯವು ತಲೆ ಕೆಳಗಾಗುವುದಿಲ್ಲ. ಒಂದು ಗೊತ್ತಾದ ಬಗೆಯ ನಾಟಕಕ್ಕಿದ್ದ ಐತಿಹಾಸಿಕ ಅಗತ್ಯವು ಪ್ರೊಸಿನಿಯಂ ರಂಗ ಭೂಮಿಗೆ ರಂಗ ಭೂಮಿಗೆ ಜನ್ಮ ನೀಡಿತು. ಈ ಅಗತ್ಯವು ವಿಕಾಸ ಹೊಂದಿ ಹೆಚ್ಚು ಹೆಚ್ಚು ಸಂಕೀರ್ಣವಾದಂತೆಲ್ಲ ಪ್ರೊಸಿನಿಯಂ ರಂಗ ಭೂಮಿ ಕೂಡ ಬೆಳೆಯಿತು. ಚಾರಿತ್ರಿಕವಾಗಿ ಇದಕ್ಕಿಂತ ಭಿನ್ನವಾದ ಮತ್ತು ಹೆಚ್ಚು ತುರ್ತಾದ ಅಗತ್ಯವೊಂದು ಮೂಡಿಬಂದಾಗ ಪ್ರೊಸಿನಿಯಂ ರಂಗ ಭೂಮಿಯೂ ನಿರುಪಯುಕ್ತವಾಗಬಹುದು. ನಾಟಕಕಾರರು ಅದರ ಪರಿಮಿತಿಗಳನ್ನು ಮೀರಿ ಮುಂದೆ ಹೋಗಬಹುದು, ಆದರೂ ಯಾರೋ ಒಬ್ಬ ಕಲಾವಿದನ್ನು ತನಗೆ ವಂಶ ಪಾರಪರ್ಯವಾಗಿ ಬಂದಿರುವ ಅಥವಾ ತಾನು ಕಲಿತುಕೊಂಡಿರುವ ಪ್ರಕಾರವೊಂದರ ಪರಿಮಿತಿಯೊಳಗೆ ಮಾತ್ರ ಸೃಜನಶೀಲನಾಗಿ ಕೆಲಸ ಮಾಡಬಲ್ಲನೆಂದು ಹೇಳಬಹುದು. ನಾವು ಅದರೊಂದಿಗೆ ಜಗಳವಾಡಲು ಸಾಧ್ಯವಿಲ್ಲ. ಆದರೆ ತನ್ನದನ್ನು ಬಿಟ್ಟು ಉಳಿದ ಎಲ್ಲ ಪ್ರಕಾರಗಳನ್ನೂ ಅಸಮಗ್ರವೆಮದೋ ಅಥವಾ ಗಮನಾರ್ಹವಲ್ಲವೆಂದೋ ತಿರಸ್ಕರಿಸುವುದು ವಿನಾಶಕ ಪ್ರವೃತ್ತಿ. ಈ ಪ್ರವೃತ್ತಿಯು ಅತ್ಯಂತ ಸ್ಪಷ್ಟವಾಗಿ ಕಾಣಿಸಿಕೊಳ್ಳುವುದು ತಮ್ಮ ಗತಕಾಲದ ಸಂಕೋಲೆಗಳಿಂದ ಬಂದಿತರಾದ ಕಲಾವಿದರಲ್ಲಿ. ಆದ್ದರಿಂದಲೇ ಅವರ ಕಲೆಗಳಲ್ಲಿ ಬದಲಾವಣೆ ಮತ್ತು ಹೊಸ ಹುಟ್ಟುಗಳು ಸಂಭವಿಸುವುದರ ಐತಿಹಾಸಿಕ ಅನಿವಾರ್ಯತೆಯನ್ನು, ನೂತನವಾದ ಕಲಾತ್ಮಕ ಅಭಿವ್ಯಕ್ತಿಗಳ ಸತತವಾದ ಮೂಡುವಿಕೆಯನ್ನು ಒಪ್ಪಿಕೊಳ್ಳಲಾರರು. ಇನ್ನೊಂದು ಕಡೆ ಬೇರೆ ಬಗೆಯ ಕಲಾವಿದನಿರುತ್ತಾನೆ. ಅವನಿಗೆ ಚಾರಿತ್ರಿಕ ಪ್ರಜ್ಞೆಯಿರುತ್ತದೆ. ವಾಸ್ತವವಾಗಿ ಸಾಮಾಜಿಕ ಕ್ರಾಂತಿಯು ನೀಡುವ ಭವಿಷ್ಯದ ಭರವಸೆಯು ಅವನ ಸೃಜನ ಶೀಲ ಪ್ರೇರಣೆಗಳನ್ನು ಇನ್ನಷ್ಟು ತೀವ್ರವಾಗಿಸುತ್ತದೆ. ಮಂಕಾಗಿಸುವುದಿಲ್ಲ. ಅವನು ಹೊಸದಕ್ಕೆ ಹೊಂದಿಕೊಂಡು ತನ್ನ ಅನುವಂಶಿಕವಾದ ಕಲಾಪ್ರಕಾರದ ಪರಿಧಿಯನ್ನು ಮೀರಿ ಹೆಚ್ಚುಹೆಚ್ಚಿಸಿ ಸೃಷ್ಟಿಕಾರ್ಯಗಳಲ್ಲಿ ತೊಡಗುತ್ತಾನೆ. ಅವನ ಪ್ರಕಾರವೂ ಬಂಜೆಯೂ ಜಡವೂ ಆಗಿಬಿಟ್ಟಿದ್ದರಂತೂ ಈ ಮಾತು ಇನ್ನಷ್ಟು ನಿಜ.

ಪ್ರೊಸೀನಿಯರಂಗ ಭೂಮಿಯ ಬಹಿರಂಗದ ಚೌಕಟ್ಟಿನ ಬಗೆಗಿರುವ ಅತಿಯಾದ ವ್ಯಾಮೋಹದ ಮತ್ತೊಂದು ಹಂತವು. ಅಂಥ ರಂಗಭೂಮಿಯ ಐತಿಹಾಸಿಕ ಬೆಳವಣಿಗೆಯ ಸ್ವರೂಪದಿಂದಲೂ ಉಂಟಾಗುತ್ತದೆ. ಪ್ರೊಸಿನಿಯಂ ರಂಗಭೂಮಿಯು ಹೇಗೆ ಬೆಳೆದು ಬಂದಿದೆಯೆಂದರೆ, ಅದು ಮಾನವಜೀವನದ ಸೂಕ್ಷ್ಮ ಹಾಗೂ ಸಂಕೀರ್ಣ ಅಂಶಗಳ ಮೇಲೆ ಗಮನವನ್ನು ಕೇಂದ್ರೀಕರಿಸುವಂಥ ಸ್ಥಳವಾಗಿಬಿಟ್ಟಿದೆ. ಅದು ಧ್ಯಾನಕ್ಕೆ, ಚಿಂತನಕ್ಕೆ ಮತ್ತು ಅಂತರಂಗ ಪರಿವೀಕ್ಷಣೆಗೆ ಹೇಳಿಮಾಡಿಸಿದ ಜಾಗ. ಇಂಥ ಭಾವನೆಗಳು ನಾಟಕ ಮಂದಿರದಿಂದ, ಸುತ್ತಲಿನ ಕತ್ತಲಿನಿಂದ, ಮೌನದಿಂದ ಇನ್ನಷ್ಟು ಪ್ರಬಲವಾಗುತ್ತದೆ. ಆದರೆ

ಬೂರ್ಜ್ವಾ ಕಲಾವಿದನು ಇದೆಲ್ಲವನ್ನೂ, ಪ್ರೇಕ್ಷಕರನ್ನು ಸಮುದಾಯದ, ಸಾಮೂಹಿಕದ ಮಟ್ಟದಿಂದ ಮೇಲೆ ಎತ್ತುವುದಕ್ಕೆಂದು ಉಪಯೋಗಿಸಿಕೊಳ್ಳುತ್ತಾನೆ. ಆ ಮಟ್ಟಕ್ಕೆ 'ಏರಿದ' ಪ್ರೇಕ್ಷಕನು 'ಕಲೆ'ಯನ್ನು ವೈಯಕ್ತಿಕವಾದ ನೆಲೆಯಲ್ಲಿ ಆಸ್ವಾದಿಸುತ್ತಾನೆ. ಅಂಥ ಕಲಾವಿದನು ರಂಗಭೂಮಿಯನ್ನು, ಅನೇಕ 'ವ್ಯಕಿ'ಗಳ ಅವಿಚ್ಛಿನ್ನ ಗಮನವನ್ನು ಪಡೆಯಬಹುದಾದ ವೇದಿಕೆಯಾಗಿ ಪರಿವರ್ತಿಸಿಕೊಂಡು ಬಿಡುತ್ತಾನೆ. ಹೀಗೆ ಒಂದು ಕಲಾಕೃತಿ ಮತ್ತು ಪ್ರತ್ಯೇಕ ವ್ಯಕ್ತಿಗಳ ನಡುವಿನ ಪರಸ್ಪರ ಕ್ರಿಯೆಯ ಪರಿಕಲ್ಪನೆಯೇ ಒಂದು ಬೂರ್ಜ್ವಾ ಅಗತ್ಯ. ಅದು ವೈಯಕ್ತಿಕ ಉದ್ಯಮಶೀಲತೆಯ ತತ್ತ್ವಜ್ಞಾನದ ಆಧಾರದ ಮೇಲೆ ರೂಪಿತವಾಗಿರುವ ವ್ಯವಸ್ಥೆಯ ಸಂತಾನ. ಸಾಹಿತ್ಯಪ್ರಕಾರಗಳಾಗಿ ಸಣ್ಣಕಥೆ ಮತ್ತು ಕಾದಂಬರಿಗಳ ಉಗಮಕ್ಕೂ, ಪ್ರೊಸೀನಿಯಂ ರಂಗಭೂಮಿಯ ಆವಿರ್ಭಾವಕ್ಕೂ ನಡುವೆ ಕುತೂಹಲಕಾರಿಯಾದ ಸಹಸಂಬಂಧವಿದೆ. ಎಷ್ಟರ ಮಟ್ಟಿಗೆಂದರೆ, ಇಂದು ನಾವು ಎಲ್ಲ ಗಂಭೀರ ಸಾಹಿತ್ಯವೂ, 'ಲಿಖಿತ' ಸಾಹಿತ್ಯವೇ ಆಗಿರಬೇಕೆಂದೂ, ಅದನ್ನು ವೈಯಕ್ತಿಕ ನೆಲೆಯಲ್ಲಿ ಮಾತ್ರ ಆಸ್ವಾದಿಸಲು ಸಾಧ್ಯವಾಗುವಂತಿರಬೇಕೆಂದೂ 'ನಿರೀಕ್ಷಿಸು'ತ್ತೇವೆ. ನಮಗೆ ಇದು ಪ್ರಶ್ನಾತೀತವಾದ ಸತ್ಯ. ಸಮುದಾಯದ ನೆಲೆಯಲ್ಲಿ ಸಾಮೂಹಿಕವಾಗಿ ಸೃಷ್ಟಿಯಾಗುವ, ಸಾಮುದಾಯಿಕ ಕಲೆಗಳೆಯ, ಬೂರ್ಜ್ವಾ ಜೀವನ ವಿನ್ಯಾಸಗಳ ಹರಡುವಿಕೆಯೊಂದಿಗೆ ಮಾಯವಾಗುತ್ತಿವೆ. ಅಂಥ ಕಲೆಗಳನ್ನು ಸಾಮೂಹಿಕವಾಗಿ ಆಸ್ವಾದಿಸುವುದು ಸಾಧ್ಯವಿತ್ತು. ಇದರ ಜೊತೆಜೊತೆಗೆ, ಶೋಷಿತ ಜನಸಮೂಹದ ದೊಡ್ಡ ದೊಡ್ಡ ಅಂಶಗಳು, ವರ್ಗಾಧಾರಿತ ಸಮಾಜವನ್ನು ನಿರ್ನಾಮ ಮಾಡಲೆಂದು ನಡೆಸುವ ಬಗೆ ಬಗೆಯ ಹೋರಾಟಗಳಲ್ಲಿ ತೊಡಗಿಕೊಂಡಂತೆಲ್ಲಾ, ಬೂರ್ಜ್ವಾ-ಭೂಮಾಲಿಕ ರಾಜ್ಯ ವ್ಯವಸ್ಥೆಯೊಳಗಿನ ಆಂತರಿಕ ಸಂಘರ್ಷವು ಪ್ರಬಲವಾದಂತೆಲ್ಲಾ ಬೀದಿರಂಗಭೂಮಿಯಂಥ ಕಲಾರೂಪಗಳು ದೇಶದ ತುಂಬೆಲ್ಲ ಹುಟ್ಟಿಕೊಳ್ಳುತ್ತಿವೆ. ಅವುಗಳ ಉದಯವನ್ನು, ಜಗತ್ತನ್ನು ಕುರಿತು ವೈಯಕ್ತಿಕ ದೃಷ್ಟಿಕೋನದ ಜಾಗದಲ್ಲಿ ಸಾಮೂಹಿಕವಾದ ದೃಷ್ಟಿಕೋನವು ಕ್ರಾಂತಿಕಾರಕವಾಗಿ ಮೈದಳೆಯುತ್ತಿರುವ ಬಗೆಯೆಂದು ತಿಳಿಯಬೇಕು. ಸರಿ, ಹೀಗಾದಾಗ ಬೂರ್ಜ್ವಾ ಕಲಾವಿದನಿಗೆ ತನ್ನ ಜೀವನದ ಕೊನೆಯೇ ಬಂದಂತೆ ಭಾಸವಾಗುತ್ತದೆ. ಏಕೆಂದರೆ ಜಗತ್ತನ್ನು ಕುರಿತ ಅವನ ನಿಲುವುಗಳ ಬುನಾದಿಯನ್ನೇ ಆಮೂಲಾಗ್ರವಾಗಿ ತಿರಸ್ಕರಿಸಲಾಗುತ್ತಿದೆ. ಆಗ ಅವನು ಹತಾಶನಾಗಿ, ತನ್ನ ಪ್ರಕಾರದ ಪರಿಧಿಯೊಳಗೆ 'ತಾನು' ಕೆಲಸಮಾಡುತ್ತಿರುವ ರೀತಿಯೇ, ಕಟ್ಟಕಡೆಯದೆಂದೂ, ಅತ್ಯುತ್ತಮವಾದುದೆಂದೂ ಹಟಹಿಡಿಯುತ್ತಾನೆ. ಸಮುದಾಯ ರಂಗಭೂಮಿಯ ಚಲನಶೀಲ ಚೈತನ್ಯದ ಬಗ್ಗೆ ಅವನಿಗಿರುವ ಅಸಹನೆಯು ಅವನ ಭಯದ ಲಕ್ಷಣ. ಆದ್ದರಿಂದ ನಮ್ಮ ರೀತಿಯ ರಂಗಭೂಮಿಯನ್ನು 'ದಯವಿಟ್ಟು ಕ್ಷಮಿಸಿ ಬಿಡಿ' ಎಂಬ ಪೂರ್ವಪೀಠಿಕೆಯೊಂದಿಗೆ ಸಮರ್ಥಿಸಿಕೊಳ್ಳುವ (ಅಳುಕು ತುಂಬಿದ ಮನಸಿಸನೊಂದಗೆ) ಅಗತ್ಯವೇನೂ ಇಲ್ಲ. ಐತಿಹಾಸಿಕವಾಗಿ ಇದು 'ನಮ್ಮ' ಕಾಲ. ಈ ಅವಕಾಶವನ್ನು ಬಳಸಿಕೊಂಡು ನಾವು ಮುಂದೆ ನುಗ್ಗೋಣ.


ಆದರೆ, 'ಪ್ರೊಸೀನಿಯಂ ರಂಗಭೂಮಿಯನ್ನು ಕಿತ್ತುಹಾಕಿ, ಅದರ ಜಾಗದಲ್ಲಿ ಸಮಕಾಲೀನ ಬೀದಿರಂಗಭೂಮಿಯನ್ನು ಸ್ಥಾಪಿಸಿಬಿಡುವ ಐತಿಹಾಸಿಕ ತುರ್ತು ಅಗತ್ಯವು ಯಾವಾಗಲೋ ಬಂದು ಬಿಟ್ಟಿದೆ' ಎನ್ನುವುದು ಖಂಡಿತವಾಗಿಯೂ ನಮ್ಮ ಅಭಿಪ್ರಾಯವಲ್ಲ. ಅಲ್ಲವೇ ಅಲ್ಲ.

ಅಂಥ ಭಾವನೆ ನಮ್ಮ ಮನಸ್ಸಿನ ಮೂಲೆಯಲ್ಲಿಯೂ ಇಲ್ಲ. ನಾವು 'ಹೇಳುತ್ತಿರುವುದು' ಏನೆಂದರೆ, ಇಂದಿನ ಬೀದಿರಂಗಭೂಮಿಯು, ರಂಗಭೂಮಿಯನ್ನು ಕುರಿತಾದ ಬೂರ್ಜ್ವಾ ಪರಿಕಲ್ಪನೆಯನ್ನು ಪ್ರತಿಭಟಿಸುವ ಹಲವು ಅವತಾರಗಳಲ್ಲಿ ಒಂದು ಎಂದು. ಅದು ಪ್ರೊಸೀನಿಯಂ ರಂಗಭೂಮಿಯನ್ನು ಬೂರ್ಜ್ವಾ ಹಿತಾಸಕ್ತಿಗಳು ತಮ್ಮ ಆಸ್ತಿಯಾಗಿ ಮಾಡಿಕೊಂಡಿರುವುದರ ವಿರುದ್ಧವಾದ ಪ್ರತಿಭಟನೆ. ನಮ್ಮ ದೃಷ್ಟಿಯಲ್ಲಿ ಪ್ರೊಸೀನಿಯಂ ರಂಗಭೂಮಿ ಮತ್ತು ಬೀದಿರಂಗಭೂಮಿಗಳ ನಡುವೆ ಇದೆಯೆನ್ನಲಾದ ಪರಸ್ಪರ ವಿರೋಧದ ಬಗ್ಗೆ ಮಾತನಾಡುವುದು ಅಸಂಗತ. ಎರಡೂ ಅಷ್ಟೇ ಪ್ರಮಾಣದಲ್ಲಿ ಜನರಿಗೆ ಸೇರಿದವು. ಆದರೆ ಕಲೆಯನ್ನು ಕುರಿತ ಬೂರ್ಜ್ವಾ ವೈಯಕ್ತಿಕ ದೃಷ್ಟಿಕೋನಕ್ಕೂ, ಜನತೆಯ, ಸಾಮುದಾಯಿಕ ದೃಷ್ಟಿಕೋನಕ್ಕೂ ನಡುವೆ, ಖಂಡಿತವಾದ, ಎಂದೆಂದಿಗೂ ಬಗೆಹರಿಸಲಾಗದ ಪರಸ್ಪರ ವಿರೋಧವಿದೆ.

(ಏಪ್ರಿಲ್ 1983)



ಪುಸ್ತಕ ಪರಿಚಯ



ಗಣೆಯ ನಾದ

ಲೇಖಕ : ಶಂಕರ ಕಟಗಿ

ಬೆಲೆ : 75/-

ಪ್ರಕಾಶನ : ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ

'ಶಂಕರ ಕಟಗಿ' ಅವರ 'ಗಣೆಯನಾದ' ಮೂರನೆ ಕವನಗುಚ್ಛ. ಈ ಗುಚ್ಛದಲ್ಲಿ ಮೂವತ್ತೇಳು ಪಕಳೆಗಳಿವೆ. ಇವರು ತಮ್ಮ ಕವಿತೆಗಳ ಶುದ್ಧ ಶೈಲಿಯ ಮೂಲಕವೇ ತಮ್ಮ ನಿಗೂಢ ಅನುಭವ ಪ್ರಪಂಚವನ್ನು ಅನಾವರಣಗೊಳಿಸುತ್ತಾರೆ. ಮಾನವೀಯ ಸಂಬಂಧಗಳು, ವಸಾಹತೋತ್ತರ ಸಂವೇದನೆಗಳು, ಮುಖ್ಯವಾಗಿ ಬದುಕಿನ ಮುದ್ರಾಂಕಿತ ಅಂಶವಾದ ಸಾವು, ನಿಸರ್ಗ (ಪ್ರಕೃತಿ)ದೊಡನೆ ಮಾನವನ ಅನ್ಯೋನ್ಯ ಸಂಬಂಧ ಈ ಎಲ್ಲಾ ಅಂಶಗಳೂ 'ಗಣೆಯನಾದ' ವಸ್ತು ಪ್ರಪಂಚದ ಗರ್ಭದಲ್ಲಿ ಸೇರಿಕೊಂಡಿವೆ. ನಮ್ಮ ಭಾರತೀಯ ಸಂದರ್ಭದಲ್ಲಿ ಆರೋಗ್ಯ ಕರವಾದ ನಂಬಿಕೆಗಳನ್ನು ಜನತೆ ಇಂದಿಗೂ ಬಿಟ್ಟಿಲ್ಲ ಎನ್ನಬಹುದು. ಬರಗಾಲದ ವಿಷವೃತ್ತದಲ್ಲಿ ಸಿಕ್ಕಿ ನರಳುತ್ತಿರುವ ಒಬ್ಬ ಮುದುಕನ ಪಾಡು 'ಚಪ್ಪೋಡು ಚಪ್ಪೋಡು' ಕವನದಲ್ಲಿ ಸ್ಪಷ್ಟವಾಗಿ ಮೂಡಿಬಂದಿದೆ. ಮಳೆಗಾಗಿ ಆತ ತನ್ನ ನೆಲದ ನಾದವನ್ನು ಊದುವ ಪರಿಯನ್ನು ಗಮನಿಸಿ.

'ಕಣಿವೆ ಕೊಳ್ಳದ
ಹೊಕ್ಕುಳ ದಾರಿ ಹಿಡಿದು
ಗಣೆನಾದ ನಡೆದವು
ಹುಡುಕಿ ಹುಡುಕಿ ದಣಿದವು
ಹಸಿರು ಹೊಲ, ನೀಲ, ಜಲ...
ಯಾವ ದಾರಿಗೂ
ಇಲ್ಲ ಅರವಟಿಗೆ
ಇಲ್ಲ ಬೇವಿನಮರ'

ಈ ಕವಿತೆ ಜಾನಪದದ ಚೌಕಟ್ಟಿನಲ್ಲಿದ್ದರೂ ಶೈಲಿಯಲ್ಲಿ ಕವಿ ಅದಕ್ಕೆ ಶರಣಾಗದೆ ತನ್ನದೇ ಆದ ಶಿಸ್ತುಬದ್ಧವಾದ ಪದಗಳನ್ನು ಬಳಸುತ್ತಾನೆ. ಮುದುಕ ಗಣೆಯನೂದುತ್ತ ಇರುವಾಗ ಮನಸ್ಸನ್ನು ಆಶಾವಾದದ ಕಡೆಗೆ ಭರವಸೆಯ ಕಡೆಗೆ ಪಲ್ಲಟಿಸುತ್ತಾನೆ. ಮನುಷ್ಯ ಕುಲದ ಸಾರ್ವತ್ರಿಕ ಸಾರ್ವಕಾಲಿಕ ಅನುಭವಗಳನ್ನು ಒಂದು ಬಗೆಯ ತಾತ್ವಿಕ ಜಿಜ್ಞಾಸೆಯನ್ನು ಕಟಗಿಯವರು ಈ ಕವನದ ಮೂಲಕ ನೋಡಲು ಪ್ರಯತ್ನಿಸುತ್ತಾರೆ.

'ಬಯಲ ಅನಾಹತನಾದ' ಮತ್ತು 'ಧ್ಯಾನಸ್ಥ ಬೆಟ್ಟ' ಕವನಗಳೂ ಇದಕ್ಕೆ ಹೊರತಲ್ಲ. ಧ್ಯಾನಸ್ಥಬೆಟ್ಟದಲ್ಲಿ ಮಣ್ಣಿನವಾಸನೆ, ಸಾವು, ಅಮೂಲಕ ಕಲ್ಪಕತೆಗಳ ಮೂಲಕ ಬದುಕನ್ನು ವಿವಿಧ ಮಗ್ಗಲುಗಳಲ್ಲಿ ನೋಡುತ್ತಾರೆ.

ಎದೆಹಾಲ ಬತ್ತಿದ ನೆಲಕೆ
ನೆತ್ತರದ ಹೆರಿಗೆ

ಕೂಸು ಹೆಣ
ಮೇಲೆ... ನೆತ್ತಿಯ ಮೇಲೆ
ರಣಹದ್ದು ರೆಕ್ಕೆ ಬಡೆವ ಸದ್ದು.

ಬದುಕಿನ ನೋವು-ನಲಿವುಗಳು ಇಲ್ಲಿ ಹೆಪ್ಪುಗಟ್ಟಿವೆ. ಭೂಮಿತಾಯಿಯ (ಹೆಣ್ಣು ಎಂಬ ಭಾವನೆ) ನೋವು ನೆತ್ತರದ ಹೆರಿಗೆ, ಮಗು ಸತ್ತು ಹೋಗಿದೆ ನೆತ್ತಿಯ ಮೇಲೆ ಅದನ್ನು ತಿನ್ನಲು ರಣಹದ್ದುಗಳ ರೆಕ್ಕೆಗಳ ಸದ್ದು ಒಂದು ಕಡೆ. ಸಾಮಾಜಿಕ ಅವಸ್ಥೆಗಳನ್ನು ಇಲ್ಲಿ ಮಾರ್ಮಿಕವಾಗಿ ಬಿಚ್ಚಿಸುತ್ತಾರೆ. ಕವಿತೆ ಹಿಂಗೆ ಸಾಗುತ್ತ ಏಕಾಏಕಿಯಾಗಿ ಕಲ್ಪನೆಗೆ ತಿರುಗಿ ಜೋಗಿಬಾಲೆಯರ ಕಡೆಗೆ ತಿರುಗುತ್ತದೆ. ಇವರು ಕನಸುಗಳನ್ನು ಹುಡುಕುತ್ತಾರೆ. ಅಂತಿಮವಾಗಿ ನಿರಾಶರಾಗಿ ಸರ್ಪ ತುಟಿಗೆ ಮುತ್ತ ನೀಡುತ್ತಾರೆ. ಬದುಕಿನ ಸಂಕೀರ್ಣತೆಗಳನ್ನು ಕವಿ ಹೇಳುವುದಕ್ಕೆ ಯತ್ನಿಸುತ್ತಾರೆ.

ಈಗ ಬರುತ್ತಿರುವ ಪ್ರಮುಖ ಕವಿಗಳು ನಮ್ಮ ಜೀವನದ ಅಂತಿಮ 'ಮೂಕ ದರ್ಶನ'ವಾದ ಸಾವನ್ನು ಭಿನ್ನ ನೆಲೆಗಳಿಂದ ವಿವಿಧ ದೃಷ್ಟಿಕೋನಗಳಿಂದ ನೋಡುತ್ತಾ ಬಂದಿದ್ದಾರೆ. ಕಟಗಿಮು ವರ 'ಹಾರಿದನು ಹಂಸ', 'ಪಿಂಡದೂಟ' ಕವಿತೆಗಳು ಈ ಬಗೆಯವು. 'ಹಾರಿದನು ಹಂಸ' ಕವ ನದ ಕೇಂದ್ರ ವ್ಯಕ್ತಿ ತನ್ನ ಅಪ್ಪನ ಶ್ರದ್ಧೆ ಮತ್ತು ನೆತ್ತರು ಹಾಲಿನ ಮಿಶ್ರಿತವಾದ ಅವರ ಬದುಕನ್ನು ಅನಾವರಣಗೊಳಿಸುತ್ತಲೆ ಮಣ್ಣಿನ ವಾಸನೆಯನ್ನು ಬಿಟ್ಟು ಹೋಗುವ ಪರಿಯನ್ನು ನಿರಾಶೆ ಯಿಂದ ಹೇಳುತ್ತಾನೆ. ಒಂದು ತಾಯಿಗೆ ಮುತ್ತೈದೆ ಭಾಗ್ಯ. ಆದರೂ ಅವಳ ಅಂತಃಕರಣವನ್ನು ಸಾವಿನ ಮನೆ ಕಲಕಿದೆ. ಗಂಡನ ಮೇಲೆ ಇದ್ದ ಸೃಜನಾತ್ಮಕ ಪ್ರೀತಿಯನ್ನು ಅವಳು ಕಡೆಗಣಿಸಿಲ್ಲ.

'ಬುದ್ಧನ ಹಾಗೆ ಇದ್ದನು ಅಪ್ಪ
ಹೊಲ-ಗದ್ದೆಯಲಿ
ಮಣ್ಣ ವಾಸನೆ ಇತ್ತು
ಮೈ ಮನಸ್ಸಿನ ಒದ್ದೆಯಲಿ'

ತನ್ನ ತುಂಬು ಬದುಕನ್ನು ಮಣ್ಣಿನ ವಾಸನೆಯಲ್ಲೇ ಸಾಗಿಸಿ ಕೊನೆಗೆ ಅದರಲ್ಲಿ ಅಂತ್ಯವನ್ನು ಕಾಣುತ್ತಾನೆ.

ತನುವಿನಲಿ ಅನುದಿನವಿದ್ದೂ
ಮನಕೊಂದು ಮಾತ ಹೇಳದೆ ಹೋದ ಹಂಸ
ಮೌನ ಸಮಾಧಿಯಲ್ಲಿದ್ದ ಗೂಗಿ ಕೂಗಿತು ಮತ್ತೆ.....

ಸಾವಿನ ನಿರಂತರತೆಯನ್ನು ಕವಿ ಇಲ್ಲಿ ದಟ್ಟಕತ್ತಲು ಗವಿಯಲ್ಲಿ ಪುಟ್ಟ ದೀಪ ಹಚ್ಚಿಟ್ಟ ಹಾಗೆ ಎಂದು ಕರೆದಿರುವುದು ವಿಶೇಷವಾದ ಸಂಗತಿಯಾಗಿ ತೋರುತ್ತದೆ. ಆ ದೀಪದ ಸುತ್ತಮುತ್ತ ದಟ್ಟಕತ್ತಲು ಇದ್ದರೂ ಅದು ಸಾವಿನ ನಂದಾದೀಪವಾಗುತ್ತದೆ. 'ಪಿಂಡದೂಟ' ಕವನವೂ ಸಹ ಇದೇ ಧಾಟಿಯಲ್ಲಿ ಮುಂದುವರೆಯುತ್ತದೆ. ಅಲ್ಲಿ (ಹಾರಿದನು ಹಂಸ) ಅಪ್ಪನ ಸಾವನ್ನು ಚಿತ್ರಿಸಿ ದರೆ ಇಲ್ಲಿನ ನಾಯಕ ತನ್ನ ಅಜ್ಜಿಯ ಸಾವನ್ನು ಚಿತ್ರಿಸುತ್ತಾನೆ. ಅಪ್ಪನಿಗಿಂತ ಅಜ್ಜಿ ಬದುಕಿನಲ್ಲಿ ನೊಂದವಳು. ಇಬ್ಬರೂ ಭೂಮಿತಾಯಿಯ ಸಾನ್ನಿಧ್ಯದಲ್ಲಿ ಬಾಳಿದವರು. ಅಪ್ಪ ಭೂಮಿತಾ ಯಿಯ ಎದೆಯ ಹಾಲನ್ನು ಕುಡಿದರೆ ಅಜ್ಜಿ ನೆತ್ತರನ್ನು ಕುಡಿದವಳಾಗುತ್ತಾಳೆ. ತನ್ನ ಗಂಡ ಬರುವ ಹಾದಿಯನ್ನು ನೋಡುತ್ತಲೆ ಸಾವಿನ ಮನೆಯನ್ನು ಸೇರುತ್ತಾಳೆ. ಒಂದು ರೀತಿಯಲ್ಲಿ ಅಪ್ಪ ಆ ದಟ್ಟ ಕತ್ತಲಲ್ಲಿ ಹಚ್ಚಿಟ್ಟ ದೀಪದ 'ಬೆಳಕಿಗೆ' ಹೋದರೆ ಅಜ್ಜಿ ಇದರಿಂದ ವಂಚಿತಳಾಗುತ್ತಾಳೆ. ಅವಳ

ಇಡೀ ಬದುಕು ನೆತ್ತರಲ್ಲಿ ನೆಂದಿತ್ತು. ಈ ಕವನಗಳ ಹಿಂದೆ ಬುದ್ಧನ ಸಾವಿನ ನಿಲುವುಗಳು ದಟ್ಟವಾಗಿವೆ.

ನಿಸರ್ಗದ ಪ್ರತಿಮೆಗಳನ್ನು ನೀಡುತ್ತಲೆ 'ಪ್ರಶ್ನೆ ಕೇಳುವ ಹುಡುಗ', 'ಮಗಳ ಬೆರಗಿನ ಆಟ' ಕವಿತೆಗಳು ಪ್ರಕೃತಿಯ ನಾಶವನ್ನು ಕುರಿತು ಕವಿಯ ವಿಷಾದ ಛಾಯೆ ಇದೆ. ಭೂತ ಮತ್ತು ವರ್ತಮಾನಗಳನ್ನು ಮುಖಾಮುಖಿಯಾಗಿಸುತ್ತಲೆ 'ಆಗುಂತಕರು' ಕವಿತೆಯಲ್ಲಿ ಮನುಷ್ಯನ ದುರ್ಬಲತೆಗಳನ್ನು ಬಯಲು ಮಾಡುತ್ತಾರೆ. 'ಇಂಡಿಯಾ ಮತ್ತು ಮಕ್ಕಳು', 'ಕರಿಮಯ್ಯನ ಸ್ವಾತಂತ್ರ್ಯ ಗೀತೆ', 'ಗಾಂಧೀಜಿಗೆ' ಕವಿತೆಗಳಲ್ಲಿ ಸ್ವಾತಂತ್ರ್ಯನಂತರದ ಭಾರತದ ಸ್ಥಿತಿ-ಗತಿಗಳನ್ನು, ತಲ್ಲಣ ವಿಹ್ವಲತೆಗಳನ್ನು ಮತ್ತು ಬೇಸರ-ದುಗುಡಗಳನ್ನು ವಿಷಾದದಿಂದ ವ್ಯಕ್ತಪಡಿಸುತ್ತಾರೆ. ವಾಸ್ತವವಾಗಿ ಸ್ವಾತಂತ್ರ್ಯನಂತರದ ನಮ್ಮ ಭಾರತ ಯುದ್ಧ ಮುಗಿದ ಕುರುಕ್ಷೇತ್ರವಾಗಿತ್ತು. ಆದರ್ಶ-ವಾಸ್ತವಗಳ ದ್ವಂದ್ವದಲ್ಲಿ ಸಿಕ್ಕಿಕೊಂಡಿತ್ತು. ನೆತ್ತರು, ಸಾವಿನ ವಾಸನೆಯಿಂದ ಕೂಡಿತ್ತು. ಇಂತಹ ಸಂದರ್ಭಗಳಲ್ಲೂ ಕೂಡ ಬಾಪು, ಮಹಾತ್ಮ ಗಾಂಧಿಯಂತಹ ಮಹಾನ್ ವ್ಯಕ್ತಿಗಳ ಸಫಲ-ವಿಫಲತೆಗಳ ಬಗ್ಗೆ ಕವಿ ಮೇಲಿನ ಕವಿತೆಗಳಲ್ಲಿ ತೋರಿಸುತ್ತಾರೆ.

ಮಕ್ಕಳೆ
ಬಿಡುಗಡೆಯಾಗಿದೆ 'ಇಂಡಿಯಾ'
ಬದುವಿನಲಿ ಹೆಣಗಳಿವೆ, ರುಜುಗಳಿವೆ
ಕನಸುಗಳಿರಬಹುದೇನೊ...
ಹುಡುಕ ಹೊರಟರು ಮಕ್ಕಳು
ಗಂಗೆ ಯಮುನೆಯ, ಹೊಂಗೆ ಹೊಂದಾವರೆಗಳ...

ಇಲ್ಲಿ ವೈಶಿಷ್ಟ್ಯವೆಂದರೆ ವಿಷಮತೆಯ ಕಾಲದಲ್ಲಿಯ ಕನಸುಗಳನ್ನು ಕಟ್ಟುವ ಪ್ರಯತ್ನವಿದೆ. ಇಡೀ ಭಾರತೀಯ ಮನಸ್ಸು ಈ ಕನಸುಗಳ ಹಾದಿಯಲ್ಲಿದ್ದವು. ಆ ಕನಸುಗಳು ಇರುವುದು ಗಂಗೆ, ಯಮುನೆ, ಹೊಂಗೆ ಹೊಂದಾವರೆಗಳಲ್ಲಿ ಅಲ್ಲ (ಇವು ಶುಭ ಸಂಕೇತಗಳಾಗಿದ್ದರೂ) ನಮ್ಮ ವರ್ತಮಾನ ಕಾಲದಲ್ಲಿ ಎಂಬ ಆಶಾವಾದವನ್ನು ಇಲ್ಲಿ ವ್ಯಕ್ತ ಪಡಿಸುತ್ತಾರೆ. ಇಂಥದ್ದೆ ದಟ್ಟವಾದ ಛಾಯೆ 'ಗಾಂಧೀಜಿ' ಮುಂದಿನ ಕವಿತೆಯಾದ ಕರಿಮಯ್ಯನ ಸ್ವಾತಂತ್ರ್ಯಗೀತೆಯಲ್ಲಿ ನೋಡಬಹುದು.

'ಕರಿಮಯ್ಯನ ಕಣ್ಣಲ್ಲಿ ಮೂಡಣವೂ ಕೆಂಪಾಯ್ತು
ಸಮತೆ ಹೂವು ಕಸಲಿತ್ತು
ಕೆಂಪುಕೋಟೆ ಮೇಲೆ ಉಲ್ಲಾಸ ಅರಳಿತ್ತು
ಬಾವುಟವು ಹಾರುತ್ತಿತ್ತು'.

'ಮಾತು ಮಲ್ಲಿಗೆ' ಈ ಸಂಕಲನದ ವಿಶಿಷ್ಟವಾದ ಸುಂದರವಾದ ಕವನವಾಗಿದೆ. ಪಕಳೆ ಒಂದರಲ್ಲಿ ಪ್ರೇಮದ ವಿರಹವಿದೆ. ಪಕಳೆ ಎರಡಲ್ಲಿ ಆ ಪ್ರೇಮದ ಭಾವನೆಗಳು ಮತ್ತು ಕನಸುಗಳು ಗರಿಗೆದರುತ್ತವೆ. ಪ್ರಕೃತಿಯ ಮಧ್ಯದಲ್ಲಿಯೇ ಇವರ ಬದುಕು ಸುಸಂಗತವಾಗುವುದು ಕಾಣಿಸುತ್ತದೆ. ಪಕಳೆ ನಾಲ್ಕರಲ್ಲಿ ಮತ್ತೆ ಪ್ರೀತಿಯ ವಿರಹ ಪ್ರಸ್ತಾಪವಾಗುತ್ತದೆ. ಇದರಲ್ಲಿ ಅಕ್ಕಮಹಾದೇವಿಯ ಪ್ರಸಿದ್ಧ ವಚನವಾದ (ಭಾವಗೀತಾತ್ಮಕ) ಚಿಲಿಪಿಲಿಯೆಂದೋಡುವ ಗಿಳಿಗಳಿರಾ' ಸಾಲುಗಳು ನೆನಪಿಗೆ ತರುತ್ತವೆ. ನಿಸರ್ಗದಲ್ಲಿ ತನ್ನ ಪ್ರಿಯಕರನನ್ನು ಅನ್ವೇಷಿಸುವ ಪರಿ ಸೋದ್ದಿ

ಶ್ಯವಾಗಿದೆ. ಪಕಳೆ ಐದರಲ್ಲಿ ಇದ್ದಕ್ಕಿದ್ದಂತೆ ಅಂತಿಮವಾಗಿ ಬದುಕಿನ ಮೂಲಸೂತ್ರವಾದ ಸಾವಿನ ಕಡೆ ತಿರುಗುತ್ತದೆ. ಇಲ್ಲಿ ಮಾನವ ಮತ್ತು ಪ್ರಕೃತಿಯ ನಡುವೆ ಹೊಸತನದ ಅನುಸಂಧಾನದ ಪ್ರಯತ್ನ ನಡೆದಿದೆ.

'ಅದು ಮುಗಿಯದ ಹಾದಿ
ಅದು ಮುಗಿಯದ ಮಾತು'

'ತುಪ್ಪಳ ಮೂಡದ ಹಕ್ಕಿ', 'ಮಾಗಿ', 'ಬಣ್ಣ ಬಿಂದುವಿನಿಂದ' ಈ ನೆಲದ ಹಾಡು (ಕೆಲವು ಸಾಲುಗಳು) 'ಅಕ್ಷರದ ಹಾಡು', 'ಮರದ ಹಾಡು', 'ಅಂಬರ ಮರ', 'ಮಂಡೆಲಾ' ಈ ಕವಿತೆಗಳು ಬಂಡಾಯದ ಕಡೆ ವಾಲುತ್ತವೆ. ಮರದ ಹಾಡುವಿನಲ್ಲಿಯೂ ಅದರ ಛಾಯೆ ದಟ್ಟವಾಗಿದೆ.

'ಪಾಡು ಪಟ್ಟೆವು ಅಂದಗೆಟ್ಟವು
ಯಾರಿಗರುಹುದು ಹೇಳೆ ತಾಯಿ
ಬೆಂಕಿ ಉಂಡು ಬೆಂಕಿಯಾದೆವು
ನರಕಯಾತನೆ ಒಡಲಿಗೆ...'

ಬೆನ್ನುಡಿ ಬರೆದ ಎಸ್.ಫ್. ಯೋಗಪ್ಪನವರ್ ಈ ಕವಿತೆಗಳ ಹಿನ್ನಲೆಯಲ್ಲಿಯೋ ಏನೋ 'ಶಂಕರ ಅವರ ಕವಿತೆಗಳಲ್ಲಿ ನಮ್ಮ ಸ್ವಂತದ ಭಾಷೆ ಕಂಡುಕೊಂಡ ಹಾಗೂ ನಮ್ಮ ಎದೆನೋವು ತೋಡಿಕೊಂಡ ಆಪ್ತ ಅನುಭವ ಉಂಟಾಗುತ್ತದೆ ಎಂದಿರುವುದು'. ಆದರೆ ಇವು ಕೇವಲ ಎದೆಯ ನೋವು ಮಾತ್ರವೇ ಅಲ್ಲ, ಆಕ್ರೋಶ, ವಿಷಾದಗಳೂ ಇವೆ ಎನ್ನಬಹುದು.

ಅಂತಿಮವಾಗಿ ಸಾಹಿತ್ಯದ (ಕಾವ್ಯದ) ಮೂಲಭೂತ ವಸ್ತು ಪ್ರಪಂಚವಾದ ಬದುಕನ್ನು ಕುರಿತಾದ 'ಸತ್ವವುಳ್ಳ' ಕವಿತೆಗಳು ಈ ಸಂಕಲನದಲ್ಲಿ ವಸಿ ಕಡಿಮೆ ಎಂದೇ ಹೇಳಬಹುದು. ಉಳಿದಂತೆ ಭಾಷೆ ಗಟ್ಟಿಯಾದ ವೈಶಾಲ್ಯದ ಪ್ರತಿಮೆಗಳನ್ನು ಕೊಡುವಾಗ ಸಮರ್ಥವಾದ ಜವಾಬ್ದಾರಿಯನ್ನು ಕಟಗಿಯವರು ವಹಿಸುತ್ತಾರೆ. ಶಾಬ್ದಿಕವಾಗಿ ಬೇಂದ್ರೆ ಮತ್ತು ಅಡಿಗರ ಪ್ರಭಾವ ಇವರ ಕನವಗಳಲ್ಲಿ ಕಂಡುಬಂದರೂ, ಅದು ಅನುಷಂಗಿಕವಾಗುತ್ತದೆ. ಆದರೂ ಶಂಕರ ಕಟಗಿ ಅವರು ಇದರ ಪ್ರಭಾವದಿಂದ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡುವುದು ಉಚಿತ.

■ **ಸುರೇಶ್ ನಾಗಲಮಡಿಕೆ**

ಹಕ್ಕಿಗೊಂದಿಷ್ಟು ಜಾಗ ಬಿಡು



ಲೇಖಕಿ : ಮೀನಾ ಸದಾಶಿವ
ಬೆಲೆ : ರೂ. 50.
ಪ್ರಕಾಶನ : ಸಂಕ್ರಮಣ ಪ್ರಕಾಶನ, ಬೆಂಗಳೂರು.

ಮೀನಾ ಸದಾಶಿವ ಅವರ ಎರಡನೆಯ ಕವನ ಸಂಗ್ರಹ 'ಹಕ್ಕಿಗೊಂದಿಷ್ಟು ಜಾಗ ಬಿಡು' ಶೀರ್ಷಿಕೆಯನ್ನು ಗಮನಿಸಿದಾಗ ಅವರಿಗೆ ನಿಸರ್ಗ ಅಥವಾ ಸೃಷ್ಟಿಯ ಮೇಲಿರುವ ಪ್ರೀತಿಯನ್ನು, ಕಾಳಜಿಯನ್ನು ನೋಡಬಹುದು. ಈ ಕವನ ಸಂಕಲನದಲ್ಲಿ ಅತಿ ಹೆಚ್ಚು ಕವನಗಳು ಸೃಷ್ಟಿಯನ್ನೇ ತನ್ನ ವಸ್ತುವನ್ನಾಗಿಟ್ಟುಕೊಂಡಿರುವುದು ಭಾಸವಾ

ಗುತ್ತದೆ. ಪ್ರತಿಸಲ ಓದುವಾಗಲೂ ನನಗೆ ಒಂದು ಪ್ರಶ್ನೆ ತಲೆಯೆತ್ತುತ್ತಿತ್ತು. ಸೃಷ್ಟಿಯ ಬಗ್ಗೆಯೇ ಇವರಿಗೆ ಏಕೆ ಆಸಕ್ತಿ? ಬೇರೆಲ್ಲ ಕಾವ್ಯವಸ್ತುಗಳನ್ನು ತೊರೆದು ನಿಸರ್ಗದ ಬಗ್ಗೆಯೇ ತಮ್ಮ ಕಲ್ಪನಾ ಲೋಕದ ಮಾತುಗಳನ್ನು ಅಚ್ಚೊತ್ತಿಸಿರುವುದು ಯಾವ ಉದ್ದೇಶದಿಂದ? ಪ್ರಕೃತಿಯಲ್ಲಿ ಸಹಜವಾಗಿ ಬದುಕುತ್ತಿರುವ ಮಾನವರು ಅದಕ್ಕೆ ಋಣಿಗಳಾಗಿರಬೇಕು, ಕೃತಜ್ಞರೂ ಆಗಿರಬೇಕು, ನಿಜ. ಆದರೆ ಮೀನಾ ಸದಾಶಿವ ಅವರು ಸೃಷ್ಟಿಯನ್ನು ಹೊರತುಪಡಿಸಿ ಕಾವ್ಯಕ್ಕೆ ಬೇರೆ ವಸ್ತುವೇ ಇಲ್ಲವೇನೋ ಎಂದು ಚಿತ್ರಿಸಿರುವುದು ಗಮನಾರ್ಹ.

ತಮ್ಮ ಅನುಭವಗಳನ್ನು ಪ್ರಕೃತಿ ಸಾಂಕೇತಿಕತೆಯ ಮುಖಾಂತರವೇ ಅಭಿವ್ಯಕ್ತಿಸಿರುವುದು ಅವರ ವಿಶೇಷತೆಯನ್ನು ತಿಳಿಸುತ್ತದೆ. ಹುಟ್ಟಿನ ಬಗ್ಗೆ ಮೀನಾರವರಿಗಿರುವ ಅಭಿಪ್ರಾಯ 'ಫೀನಿಕ್ಸ್' ಕವನದಲ್ಲಿ ಬಹಳ ಅದ್ಭುತವಾಗಿ ಮೂಡಿಬಂದಿದೆ.

'ಏಕೆ ಹುಟ್ಟಿ ಬರಬೇಕು ಇಲ್ಲಿ
ಶುದ್ಧ ಗಾಳಿ ಇಲ್ಲದಲ್ಲಿ?
ಇರುವವರ ಬದುಕೇ ದುರ್ಭರ-
ವಾಗಿರುವಾಗ ನಾನೇಕೆ ಮರಳಲಿ? - ಫೀನಿಕ್ಸ್.

ಈ ಕವನದಲ್ಲಿ ಮೀನಾ ಅವರಿಗಿರುವ ತಳಮಳವನ್ನು ಸೂಕ್ಷ್ಮವಾಗಿ ಗುರುತಿಸಬಹುದು. ಇಡೀ ಸೃಷ್ಟಿಯು ಯಾವ ಹಂತ ತಲುಪಿದೆ ಎಂಬುದರ ಚಿತ್ರಣ, ಬದುಕಿನ ಕ್ರೂರತ್ವದ ಬಗೆಗಿನ ಚಿತ್ರಣ ನಮ್ಮೆಲ್ಲರನ್ನು ಸಂದಿಗ್ಧತೆಗೆ ಸಿಲುಕಿಸುತ್ತದೆ. ಆದರೆ ಮೀನಾ ಸದಾಶಿವ ಪ್ರಶ್ನೆ ಹಾಕುತ್ತಲೇ ಉತ್ತರವನ್ನು ಹುಡುಕುವ ಪ್ರಯತ್ನವನ್ನು ಮಾಡುತ್ತಾರೆ. ಒಟ್ಟಾರೆ ಹೆಚ್ಚಿನ ಕವನಗಳು ಉತ್ತರದ ಹುಡುಕಾಟದಲ್ಲಿದ್ದು, ಬದುಕು ಎಷ್ಟು ಸತ್ಯವಾದದ್ದು, ಸತ್ತ್ವವುಳ್ಳದ್ದು ಎಂಬುದರ ಬಗ್ಗೆಯೂ ಅಷ್ಟೇ ಗಂಭೀರವಾಗಿ ಓದುಗರನ್ನು ಚಿಂತನೆಗೊಳಪಡಿಸುತ್ತವೆ.

'ಕಣ್ಣ ಕಾಡಿಗೆ ಕಪ್ಪು
ಕೆನ್ನೆಗಿಳಿದು
ಬೆಟ್ಟದಷ್ಟು ಕನಸುಗಳು
ಸೊನ್ನೆಗಿಳಿದು
ಕರಗಿ ಹೋದಳವಳು
ಕರ್ಪೂರದಂತೆ.' - ಕರ್ಪೂರ.

'ಸಕ್ಕರೆಯ ಬಟ್ಟಲ ತಳದಲ್ಲೂ
ವಿಷವೇ ಕಾಣುತ್ತಿದೆ
ಮುಗ್ಧ ಕಣ್ಣುಗಳಲ್ಲಿ
ಮುಂದೆಂದೋ ಇಣುಕುವ
ಕ್ರೌರ್ಯ ನೆರಳು' - ಬೆಂಡು.

ಮೀನಾ ಅವರ ಅನುಭವಗಳು, ಭಾವನೆಗಳು ಈ ಕವನಗಳ ಪ್ರತಿಮೆಗಳಲ್ಲೇ ಮಡುಗಟ್ಟಿ ನಿಂತಿರುವಂತಿದೆ. ಬಹುವಾಗಿ ಮನಕಲಕುವ 'ಕರ್ಪೂರ', 'ಬೆಂಡು' ಕವನಗಳು ನಿಸ್ಸಾರ ಜೀವನದ ದೌರ್ಬಲ್ಯತೆಯನ್ನು ಹೇಳುತ್ತಿವೆಯೆನ್ನಿಸುತ್ತದೆ.

‘ಅದರೊಳಗಿನ ಶಕ್ತಿಗೆ ರೆಕ್ಕೆಗಳಿವೆಯಾದರೆ
ಹೊತ್ತೊಯ್ಯಲಿ ನನ್ನನ್ನು
ಎಲ್ಲಿ ಬಂಡೆಗಳಿವೆಯೋ
ಅಲ್ಲಿಗೆ
ಎಲ್ಲಿ ಶಿಲೆ ರಸವಾಗಿ ಹರಿಯುವುದೋ ಅಲ್ಲಿಗೆ
ಕಾಯ್ದು ಕುಳಿತಿರುವೆ
ರೂಪಾಂತರಕ್ಕಾಗಿ’ – **ರೂಪಾಂತರ.**

ಇಡಿಯಾಗಿ ಕವನಗಳು ಸೃಷ್ಟಿಯ ಮಹತ್ವವನ್ನು ಜಾಗೃತಗೊಳಿಸುತ್ತಾ, ಸೃಷ್ಟಿ-ಬದುಕು ಸಮನ್ವಯವಾಗಿಯೇ ಇರಬೇಕು; ಹೊರತುಪಡಿಸಿ ಅಲ್ಲ ಎನ್ನುವಂಥ ಧ್ವನಿಯನ್ನು ಹೊರಡಿಸುತ್ತಿವೆ. ಎಲ್ಲೋ ಕೆಲವು ಕವನಗಳು ಜೀವನದ ಏರುಪೇರಿನ ಹಾಗೂ ನಿರಾಶೆಯ ಅಂಶಗಳನ್ನು ತೋರ್ಪಡಿಸುತ್ತವೆ. ಅಲ್ಲಿಯೇ ಬದುಕಿನ ಭರವಸೆಯನ್ನೂ ಮೂಡಿಸುತ್ತವೆ.

ಮೀನಾ ಸದಾಶಿವ ಅವರ ಕವನ ಸಂಕಲನದಲ್ಲಿ ಭಾಷೆ, ರೀತಿ ಯಾವುದೇ ಬಗೆಯ ಗೋಜಲನ್ನುಂಟುಮಾಡದೆ ಇದ್ದರೂ ಕವನಗಳನ್ನು ಓದುವಾಗ ನಿರುತ್ಸಾಹವುಂಟಾಗುತ್ತಿದೆಯೇನೋ ಎನ್ನಿಸುತ್ತದೆ. ಅದು ನಾವು ಓದುವ ಶೈಲಿಗೋ ಇಲ್ಲ ಮೀನಾ ಅವರು ಹೆಚ್ಚಿನ ಒತ್ತನ್ನು ಒಂದೇ ಕಾವ್ಯವಸ್ತುವಿಗೆ ನೀಡಿದ್ದಾರೆಂದೋ ನಿರ್ಧರಿಸುವುದು ಕಷ್ಟಸಾಧ್ಯ. ಆದರೂ ಮೀನಾ ಅವರ ಪ್ರಶ್ನಿಸುವ ಮನಸ್ಸು ಸೃಜನಕ್ರಿಯೆಯಲ್ಲಿ ತೊಡಗಿದೆ ಎಂಬುದರಲ್ಲಿ ಎರಡು ಮಾತಿಲ್ಲ.

‘ಹಕ್ಕಿಗೊಂದಿಷ್ಟು ಜಾಗ ಬಿಡು’ ಕವನ ಸಂಕಲನವು ಓದುಗರಿಗೆ ಪ್ರೇರಣೆ-ಪ್ರಭಾವವನ್ನುಂಟುಮಾಡುವಂತೆ ರಚಿತಗೊಂಡಿದೆಯೆ? ಎಂಬ ಪ್ರಶ್ನೆ ನನ್ನನ್ನು ಕಾಡುತ್ತಿದೆ. ಪ್ರೇರಣೆ-ಪ್ರಭಾವ ಮಾಡಿದ್ದರೆ ಎಷ್ಟು ಮಾತ್ರ? ಯಾವ ರೀತಿಯಲ್ಲಿ? ಹೀಗೆ ಇನ್ನೂ ಹಲವಾರು ಪ್ರಶ್ನೆಗಳು ಮೂಡದಿರಲಾರವು. ಈ ಪ್ರಶ್ನೆಗಳಿಗೆ ಉತ್ತರ ಸಿಗುವುದಿಲ್ಲ ಎಂದು ಭಾವಿಸಲಾಗುವುದಿಲ್ಲ; ಉತ್ತರ ಪಡೆಯಲು ಈ ಕವನ ಸಂಕಲನದ ಓದಿನಿಂದಲೇ ಸಾಧ್ಯವಾಗಬೇಕು ಎಂದು ನನ್ನ ಆಶಯ.

■ ಆಶಾ ವಿ.

‘ತುಳುಕು’

ಲೇಖಕ : ಎಂ.ಡಿ. ಒಕ್ಕುಂದ
ಬೆಲೆ : 35/-
ಪ್ರಕಾಶನ : ಲಡಾಯಿ ಪ್ರಕಾಶನ, ಗದಗ



‘ತುಳುಕು’ ಎಂ.ಡಿ. ಒಕ್ಕುಂದ ಅವರ ಹೊಸ ಕವನ ಗುಚ್ಛ. ವಾಸ್ತವವಾಗಿ ಇಲ್ಲಿನ ಅನೇಕ ಕವಿತೆಗಳು ಬಂಡಾಯದ ಹಾದಿಯಲ್ಲಿ ಸಾಗುತ್ತವೆ. ಪ್ರೇಮ ಕವಿತೆಗಳಲ್ಲೂ ಕೂಡ ಅಪ್ರಜ್ಞಾಪೂರ್ವಕವಾಗಿ ಆ ದನಿ ಧ್ವನಿಸುತ್ತದೆ. ಒಕ್ಕುಂದ ಅವರ ‘ಕವಿತ್ವ’ ಈ ಕವನ ಸಂಕಲನದಲ್ಲಿ ಜೀವಂತಿಕೆಯಿಂದ ಬಿಚ್ಚಿಕೊಂಡಿದೆ ಎನ್ನಬಹುದು. ಸಾಮಾಜಿಕ ಕ್ರೌರ್ಯ, ಪ್ರೀತಿ. ಮಾನವೀಯತೆ, ನೆನಪು,

ಬದುಕಿನ ಬಗ್ಗೆ ಭರವಸೆ - ಇವು ಕವಿತೆಗಳ ವಸ್ತು.

'ನಿತ್ಯ ಕನಸಿನಲ್ಲಿ ಯಾರೋ ದುರುಳರು
ಹಕ್ಕಿಗಳ ಮೌನ ಭಂಗಿಸುತ್ತಾರೆ
ಬೆಳಗ್ಗೆದ್ದು ನೋಡಿದರೆ
ಮರದ ಕೆಳಗಿನ ಮಣ್ಣಲ್ಲಿ
ಹಲವು ಹರಿದ ಹಕ್ಕಿ ಗೂಡು
ಒಂದಿಷ್ಟು ಮುರಿದ ಹಕ್ಕಿ' **(ಹರಿದ ಹಕ್ಕಿಗೂಡು)**

ಪ್ರಕೃತಿ ಮತ್ತು ಹಕ್ಕಿಗೂಡಿನ ಪ್ರತಿಮೆಯನ್ನು ಕಟ್ಟಿ ಕೊಡುತ್ತಲೇ ಬದುಕಿನ ಸಾಮಾಜಿಕ ಕ್ರೌರ್ಯ, ದಬ್ಬಾಳಿಕೆಗಳನ್ನು ಅನಾವರಣಗೊಳಿಸುತ್ತಾರೆ. ಈ ಕವಿತೆಯಲ್ಲಿ ಹಕ್ಕಿಗಳು ರೆಕ್ಕೆ ಕಳಚಬಹುದೆಂಬ ಆತಂಕವಿದ್ದರೂ ಸ್ವಾಯತ್ತತೆಯಿಂದ ಹಾರಾಡುತ್ತವೆ. ಇವಕ್ಕೆ ಯಾರ ಭಯವೂ ಇಲ್ಲ. ಮರಿಗಳಿಗೆ ಗುಟುಕು ಕೊಟ್ಟು ಕಣ್ಣೊಳಗೆ ಕತ್ತಲೆಯನ್ನು ತುಂಬಿಕೊಳ್ಳುತ್ತವೆ. 'ಈ ಹಕ್ಕಿಗಳಿಗೆ ಕತ್ತಲೆಂದರೆ ರಾತ್ರಿ ಎಂದರೆ ಇಷ್ಟೇಕೆ ಭಯ' ಎಂದು ಕವಿ ಸಂಶಯವನ್ನು ವ್ಯಕ್ತಪಡಿಸುತ್ತಾರೆ. ಬದುಕಿನಲ್ಲಿ ವ್ಯಕ್ತಿಯ 'ಸ್ವತಂತ್ರ' ಹಾಗೂ 'ಪರತಂತ್ರ'ಗಳನ್ನು ಕವಿ ಇಲ್ಲಿ ಬಿಚ್ಚಿಸುತ್ತಾ ಹೋಗುತ್ತಾರೆ. ಇವರ ಪ್ರತಿರೂಪವೆನ್ನುವಂತೆ

'ಗುಡಿಸಲು' ಕವನದಲ್ಲಿ ಇದೇ ರೀತಿಯ ವಿಷಾದವನ್ನು ವ್ಯಕ್ತಪಡಿಸುತ್ತಾರೆ. ಗುಡಿಸಲ ಮುಂದೆ ಗುಲಾಬಿ ನೆಡುವ ಕನಸನ್ನು ಕಟ್ಟಿಕೊಂಡವರು ಕೊನೆಗೆ ಸಂಭವಿಸಿದ್ದು ಗುಡಿಸಲ ಮುಂದೆ ಗುಲಾಬಿ ಬದಲು ನೆತ್ತರಿನ ಒರತೆ. ಎಲ್ಲೋ ಒಂದು ಕಡೆ ಕವಿಗೆ ತಣ್ಣನೆ ಗಾಳಿಯಲ್ಲಿಯೇ ಪ್ರತಿಭಟನೆಯ ದನಿಯನ್ನು ಬೀಸುತ್ತಿರಬಹುದೆ? ಎಂಬ ಗುಮಾನಿ ಹುಟ್ಟುತ್ತದೆ.

ಬಡತನ ಮತ್ತು ನೆನಪುಗಳನ್ನು ನಿಕಷಕ್ಕೆ ಒಳಪಡಿಸಿ ಎರಡರ ನಡುವೆ ಬದುಕಿನ ಬಗ್ಗೆ ವಿವೇಚಿಸುತ್ತಿರುವ ಕವನದಂತೆ 'ಅವಸ್ಥೆ' ಕಾಣಿಸಿಕೊಳ್ಳುತ್ತದೆ. ನೆನಪಿನಂಗಳದಲ್ಲಿ ಸಾಗುತ್ತ ಇಲ್ಲಿನ ವ್ಯಕ್ತಿ ಭೂತ ಮತ್ತು ವರ್ತಮಾನಗಳನ್ನು ಕೆದಕುತ್ತ ಭವಿಷ್ಯದ ಕಡೆ ಕೈ ಚಾಚುತ್ತಾನೆ. ತನ್ನ ಸ್ವಂತ ಬದುಕನ್ನು ಇಲ್ಲಿ ಅವನು ವಿಮರ್ಶಿಸಿಕೊಳ್ಳುತ್ತಿದ್ದಾನೆ.

ಅವ್ವನ ಬಡತನ , ಅಪ್ಪನ ಶ್ರಮ ಇವುಗಳ ಬೆಳಕಿನಲ್ಲಿ ಇವನ ಬದುಕು ಸಾಗುತ್ತಿದೆ. ತನ್ನ ತಂದೆಯ ಕಟುಶ್ರಮವನ್ನು ಕಂಡು ಏಕಾಏಕಿಯಾಗಿ ನಗರಪ್ರಜ್ಞೆಯ ವಿರುದ್ಧ ದನಿ ಎತ್ತುತ್ತಲೇ ಮತ್ತೆ ತಣ್ಣಗಾಗುತ್ತಾನೆ.

'ಓದು ಬಾರದ ಅಪ್ಪ ಓದು ಕಲಿಸುತ್ತಿದ್ದ
ನನ್ನ ಒಣಗಿದ ತುಟಿಯಂಚಿನಲ್ಲಿ
ಅಕ್ಷರಗಳು ಪಟಪಟಿಸುವಾಗ
ಒಡಕು ಪಾಟಿಯ ಮೇಲೆ ಮೊಗ್ಗುಗಳು ಬಿರಿಯುವಾಗ
ಅವನ ಕಣ್ಣುಗಳೇಕೆ ಹನಿಗೂಡುತ್ತಿದ್ದವೆಂದು
ನನಗೆ ತಿಳಿದದ್ದು ತೀರ ಇತ್ತೀಚೆಗೆ' **(ಅವಸ್ಥೆ)**

ಎಂದು ತನ್ನ ವಾಸ್ತವದ ಪರಿಶ್ರಮದ ಬದುಕನ್ನು ಅರಿತುಕೊಳ್ಳುತ್ತಾನೆ. ಬಡತನ, ಪರಿಶ್ರಮ (ದುಡಿಮೆ) ಇದ್ದಕ್ಕಿದ್ದಂತೆ ಆಕ್ರೋಶ ವ್ಯಕ್ತಪಡಿಸುವುದು, ಮತ್ತು ಮುಖ್ಯವಾಗಿ ತಲ್ಲಣಗೊಳ್ಳು

ತ್ತಲೆ ಮಾನವೀಯತೆಯಿಂದಲೇ ಬದುಕು ಎಂಬ ಬಣ್ಣದ ಹಕ್ಕಿಯನ್ನು ಬಿಗಿಯಾಗಿ ತಬ್ಬಿಕೊಳ್ಳುವುದು ಪ್ರಧಾನವಾಗಿ ಕಂಡುಬರುತ್ತದೆ.

ಕನಸಿನ ಚಿತ್ರಗಳನ್ನು ಒಕ್ಕುಂದ ಅವರು ಅದ್ಭುತವಾಗಿ ಕಟ್ಟಿಕೊಡುತ್ತಾರೆ. ಸೃಜನಶೀಲ ವ್ಯಕ್ತಿಯ ಹುಡುಕಾಟ ಎಂತಹದು ಎಂಬುದಕ್ಕೆ 'ಕನಸಲ್ಲಿ ಕಂಡ ಮನುಷ್ಯ' ಕವನವೇ ಸಾಕ್ಷಿ. ಜೀವನದಲ್ಲಿ ಎಷ್ಟೇ ನೋವು, ನಲಿವುಗಳು ಬಂದರೂ ಅನುಭವಿಸಿ ಅದರ ಕಟುಸತ್ಯಗಳನ್ನು ಅರಿಯಲು ಇಲ್ಲಿನ ಕೇಂದ್ರ ವ್ಯಕ್ತಿ ಉತ್ಸಾಹದಿಂದ ಪುಟಿಯುತ್ತಿದ್ದಾನೆ. ಈತನಿಗೆ ತನ್ನ ಬದುಕಿನೊಂದಿಗೆ ಆಕಾಶ, ಭೂಮಿ, ಹಕ್ಕಿ, ಎಲೆ, ಉಲ್ಕೆ ಮುಂತಾದ ಚರಾಚರ ವಸ್ತುಗಳೊಡನೆ ತನ್ನನ್ನು ತುಲನೆ ಮಾಡಿನೋಡುತ್ತಾನೆ. ಕವಿಯೇ ಹೇಳುವ ಹಾಗೆ ಇವನು 'ಹುಡುಕುತ್ತಲೇ ಇರುವ ಸೂರ್ಯನಂತೆ'.

'ಹಸಿವು' ಕವಿತೆಯೂ ಉನ್ನತವರ್ಗದ ಹಾಗೂ ಸಮಾಜದ ಇಷ್ಟಾನಿಷ್ಟಗಳ ಬಗ್ಗೆ ಹೇಳುತ್ತದೆ. ಪ್ರಾಯಶಃ ಇದರಲ್ಲಿ ನಗರ ಜೀವನ ಮತ್ತು ಗ್ರಾಮ್ಯ ಜೀವನದ ಬಗ್ಗೆ ಹೇಳುತ್ತಿರಬಹುದು? ನಗರ ಜೀವನದ ಐಶಾರಾಮಿ ಬದುಕನ್ನು ಟೀಕಿಸುತ್ತಾ ಹಳ್ಳಿಯ ಜೀವನದ ಬಗ್ಗೆ ವಿಷಾದವನ್ನು ವ್ಯಕ್ತಪಡಿಸುತ್ತಿದ್ದಾರೆ ಅನಿಸುತ್ತದೆ.

'ಇಲ್ಲಿ ಸಾವಿರಗಟ್ಟಲೆ ನದಿಗಳಿವೆ
ನಮಗಾಗಿ ಒಂದೂ ಹರಿಯುವುದಿಲ್ಲ,
ಅಸಂಖ್ಯ ಮಾರುತಗಳಿವೆ
ನಮಗಾಗಿ ಒಂದೂ ಬೀಸುವುದಿಲ್ಲ,
ಆಕಾಶದ ಮೈತುಂಬಾ ಮೋಡಗಳ ಕೆಚ್ಚಲು
ಮಳೆ ನಮಗಾಗಿ ಸುರಿಯುವುದಿಲ್ಲ.' **(ಹಸಿವು)**

ಎಂದು ಕಳವಳವನ್ನು ವ್ಯಕ್ತಪಡಿಸಿದ್ದಾರೆ. ಒಕ್ಕುಂದ ಅವರು ಪ್ರಕೃತಿಯ ಮಡಿಲಲ್ಲೇ ತಮ್ಮ ಅಭಿವ್ಯಕ್ತಿಯನ್ನು ಅನಾವರಣಗೊಳಿಸಿರುವುದು ವಿಶೇಷ. ನಿಸರ್ಗ ವಿವಿಧ ರೀತಿಯ ಪ್ರತಿಮೆಗಳನ್ನು ಕೂಡುತ್ತಲೆ ಬಂಡಾಯದ ದನಿ ಎತ್ತುತ್ತಾರೆ. ಆದರೂ ಕೆಲವು ಪದಗಳು (ಬೆಳದಿಂಗಳು, ನಕ್ಷತ್ರ, ಹಕ್ಕಿ ಇತ್ಯಾದಿ) ಮತ್ತೆ ಮತ್ತೆ ಪುನುರುಕ್ತಿಗೊಂಡು ಇನ್ನಷ್ಟು ಅರ್ಥವ್ಯಾಪ್ತಿಗೆ ಅಡ್ಡಿಯಾಗಿದೆ ಎಂಬ ಸಂಶಯ ನನ್ನನ್ನು ಉದ್ದಕ್ಕೂ ಕಾಡಿತು. ಮುನ್ನುಡಿಯಲ್ಲಿ ಬರಗೂರು ರಾಮಚಂದ್ರಪ್ಪ ಅವರು ಹೇಳುವಂತೆ 'ಒಕ್ಕುಂದ ಅವರಲ್ಲಿ ಮಿತಿಯಿರುವುದು ಪ್ರತಿಮಾ ವಿಧಾನವನ್ನು ಪ್ರತಿಕ್ರಿಯೆಯ ನೆಲೆಯಲ್ಲಿ ನಿಲ್ಲಿಸುವ ತೃಪ್ತಿಯಲ್ಲಿ. ಪ್ರತಿಮಾ ವಿಧಾನ ಒಂದು ತಾತ್ವಿಕ ವಿಧಾನವಾಗಿಯೂ ಬೆಳೆಯಬೇಕು. ಆಗ ಅದೊಂದು ಸಾರ್ಥಕ ಅಭಿವ್ಯಕ್ತಿಯಾಗುತ್ತದೆ. ಬಂಡಾಯ ಕವಿಗಳು ಈ ದಿಕ್ಕಿನಲ್ಲಿ ಮಾಡುವ ಕೆಲಸ ಕನ್ನಡ ಕಾವ್ಯಾಭಿವ್ಯಕ್ತಿ ವಿಧಾನವನ್ನು ವಿಸ್ತರಿಸುತ್ತದೆ' ಎಂಬ ಮಾತುಗಳೂ ಸಮರ್ಥವಾಗಿವೆ.

■ **ಸುರೇಶ್ ನಾಗಲಮಡಕೆ**

ಸಂಚಯದ ಪ್ರಕಟಣೆಗಳು



1)	ಗಾಜು (ಕವಿತೆಗಳು)	ವಿವಿಧ ಕವಿಗಳು	ರೂ. 8-00*
2)	ಎ.ಕೆ. ರಾಮಾನುಜನ್ ಹೆಜ್ಜೆ ಗುರುತು	ವಿವಿಧ ಲೇಖಕರು	ರೂ. 1500*
3)	ಸಿಕಾಡ (ಕವನ ಸಂಕಲನ)	ಜಿ. ಕೆ. ರವೀಂದ್ರಕುಮಾರ್	ರೂ. 35-00
4)	ಡ್ರೀಮರ್ (ಕವಿತೆಗಳು)	ಡಿ. ವಿ. ಪ್ರಹ್ಲಾದ್	ರೂ. 18-00
5)	ಅಭಿಮುಖಿ (ಲೇಖನಗಳು)	ಎನ್.ಎಸ್. ಶ್ರೀಧರಮೂರ್ತಿ	ರೂ. 20-00
6)	ಬಗೆ ತೆರೆದ ಬಾನು (ಸಾಹಿತಿಗಳ ಸಂದರ್ಶನಗಳು)	ಸಂ. ಡಿ. ವಿ. ಪ್ರಹ್ಲಾದ್	ರೂ. 60-00
7)	ಚೌಕಟ್ಟು (ಸಮಕಾಲೀನ ದೃಶ್ಯಕಲೆ ಕುರಿತು)	ಸಂ. ಎಚ್.ಎ.ಅನಿಲ್‌ಕುಮಾರ್	ರೂ. 2[illegible]-00
8)	ಮೌನದ ಹೊತ್ತು (ಅನುವಾದಿತ ಕವಿತೆಗಳು)	ಸು. ರಂ. ಎಕ್ಕುಂಡಿ	ರೂ. 2[illegible]-00
9)	ಕನಸು ಕೋಳಿಯ ಕತ್ತು (ಕವನಗಳು)	ಗೋವಿಂದ ಹೆಗಡೆ	ರೂ. 30-00
10)	ನಾಟಕ ಅಂತರಂಗ	ಎ.ಆರ್. ನಾಗಭೂಷಣ	ರೂ. 40-00
11)	ಮುಕ್ತಛಂದ	ಶಾಂತಿನಾಥ ದೇಸಾಯಿ ನೆನಪಿನ ಸಂಪುಟ	ರೂ. 85-00
12)	ಕಂಬಾರರ ನಾಟಕಗಳು	ಸಂ. ವಿಕ್ರಮ ವಿಸಾಜಿ	ರೂ. 45-00
13)	ಅವಧೂತನೊಬ್ಬನ ರೂಪಾಂತರ	ಕಥಾ ಸಂಕಲನ	ರೂ. 30-00
14)	ಮರೆತ ಮಾತು (ಕವಿತೆಗಳು)	ಡಿ.ಎಸ್. ರಾಮಸ್ವಾಮಿ	ರೂ. 45-00
15)	ಎರಡು ಏಕಾಂಕಗಳು	ಬಿ. ಶ್ರೀನಿವಾಸರಾಜು	ರೂ. 20-00



*ಪ್ರತಿಗಳು ಮುಗಿದಿವೆ.

MAG PRB DEC L 309 / 94-95

SANCHAYA
Edited, Printed & Published
by D.V. Prahlad
100, II Main, VIth Block
IIIrd Stage IIIrd phase
Banashankari
Bangalore - 560 085
Ph : 080 - 6791 925